1956ನೇ ಇಸವಿಯ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ

15. 1992-93 ನೇ ಸಾಲಿನ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ ೭ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಡಿಸುತ್ತೇನೆ.

ಶ್ರೀ ಎನ್.ಜಿ.ಹಾಲಪ್ಪ (ಪರಿಸರ ಮತ್ತು ಜೀವಿ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿ)

1974ನೇ ಇಸವಿಯ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ 39 (2) ನೇ ಕಲಮಿನ ಮೇರೆಗೆ.

1992-93ನೇ ಸಾಲಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

iv. ಶ್ರೀ ಹಾರನ ಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು) ಮಿನುಗಾರಿಕೆ ಮತ್ತು ಬಂದರು ರಾಜ್ಯ ಮಂತ್ರಿ ಅವರ ಪರವಾ

1956ನೇ ಸಾಲಿನ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ

31-3-1991ರಂದು ಅಂತ್ಯಗೊಳ್ಳುವ ಕರ್ನಾಟಕ ಮಿನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 21ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಡಿಸುತ್ತೇನೆ.

v. ಶ್ರೀ ರಾಮಲಿಂಗಾರೆಡ್ಡಿ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿ) ಅವರು 1956ನೇ ಸಾಲಿನ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ

1. 1992-93ನೇ ಸಾಲಿನ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ 8ನೇ ವಾರ್ಷಿಕ ವರದಿ.
2. 1992-93ನೇ ಸಾಲಿನ ಮಾರ್ಕೆಟಿಂಗ್ ಕನ್ಸಲ್‌ಟೆಂಟ್ಸ್ ಮತ್ತು ಏಜೆನ್ಸೀಸ್ ಲಿಮಿಟೆಡ್‌ನ್ನು 21ನೇ ವಾರ್ಷಿಕ ವರದಿ.
3. 1992-93ನೇ ಸಾಲಿನ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ನ 27 ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಎಲ್ಲಾ ಕಾಗದಪತ್ರಗಳನ್ನು ಮಂಡಿಸಲಾಯಿತು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಅಗತ್ಯ ವಸ್ತುಗಳ ಬೆಲೆಯನ್ನು ಕೇಂದ್ರಸರ್ಕಾರ ಗಗನಕ್ಕೆ ಏರಿಸಿದೆ. ಕೇಂದ್ರ ಸರ್ಕಾರ ಸತತವಾಗಿ ಕಳೆದ ಮೂರು ವರ್ಷಗಳಿಂದ, ಅಗತ್ಯ ವಸ್ತುಗಳು ಹಾಗೊ ಪೆಟ್ರೋಲಿಯಂ ದರಗಳನ್ನು ಏರಿಸುತ್ತಾ ಬಂದಿರುತ್ತದೆ.

(ಗೊಂದಲ)

ಅಧ್ಯಕ್ಷರು : ಇವರೂ ನಿಲುವಳಿ ಸೂಚನೆ ಮೇಲೆ ಕೊಟ್ಟಿದ್ದಾರೆ, ತಾವೂ ಕೊಟ್ಟಿದ್ದೀರಿ. I have called the Leader of Opposition who has given the Adjournment motion. ತಮಗೂ ಅವಕಾಶ ಕೊಡುತ್ತೇನೆ. ನೀವು ಈ ರೀತಿ ಮಾತನಾಡಿದರೆ ಹೇಗೆ? ಎಲ್ಲರಿಗೂ ಅವಕಾಶ ಕೊಡುತ್ತೇನೆ.

ನಿಲುವಳಿ ಸೂಚನೆ

(1) ಕೇಂದ್ರಸರ್ಕಾರ ಅಗತ್ಯವಸ್ತುಗಳ ಬೆಲೆಗಳನ್ನು ಏರಿಸಿರುವುದರ ಬಗ್ಗೆ

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ ಇತ್ತೀಚೆಗೆ, ಅಗತ್ಯ ವಸ್ತುಗಳಾದ ಅಕ್ಕಿ, ಗೋಧಿ, ಸಕ್ಕರೆ ಹಾಗೂ ಸಾಮಾನ್ಯ ಜನರ ದಿನಬಳಕೆ ವಸ್ತುಗಳಾದ ಅಡಿಗೆ ಅನಿಲ,ಪೆಟ್ರೋಲ್, ಡೀಸೆಲ್ ಇತ್ಯಾದಿಗಳಿಗೆ ಅತ್ಯಂತ ದುಬಾರಿ ಬೆಲೆ ನಿಗದಿಪಡಿಸಿರುವುದರಿಂದ, ಜನಸಾಮಾನ್ಯರ ಮೇಲೆ ಉಂಟಾಗಿರುವ ತೊಂದರೆ ಕುರಿತು ನಾವು ನಿಲುವಳಿ ಸೂಚನೆಯನ್ನು ಈಗಾಗಲೇ ಮೂವ್ ಮಾಡಿದ್ದೇವೆ. ತಾವು ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೂ ಸಹ ಈಗಾಗಲೇ ಅನುಮತಿ ಕೊಟ್ಟಿದ್ದೀರಿ. ನಮ್ಮ ದೇಶದ ಇತಿಹಾಸದಲ್ಲಿ ಇಷ್ಟೊಂದು ಅನ್ ಪ್ರಿಸಿಡೆಂಟೆ ಆದ ಬೆಲೆ ಏರಿಕೆ ಯಾವಾಗಲೂ ಆಗಿರಲಿಲ್ಲ. ಅಗತ್ಯ ವಸ್ತುಗಳಾದ ಅಕ್ಕಿ ಇರಲಿ, ಗೋಧಿ, ಇರಲಿ, ಸಕ್ಕರೆ ಇರಲಿ,ಅದೇಪ್ರಕಾರ ಸೀಮೆಎಣ್ಣೆ ಡೀಸೆಲ್, ಕುಕ್ಕಿಂಗ್ ಗ್ಯಾಸ್ ಬೆಲೆಗಳು ನಮ್ಮ ರಾಷ್ಟ್ರದ ಇತಿಹಾಸದಲ್ಲಿ ಯಾವ ಕೇಂದ್ರ ಸರ್ಕಾರವೂ ಯಾವ ಸಮಯದಲ್ಲೂ ಮಾಡಿರಲಿಲ್ಲ. ಇವತ್ತು ಕೇಂದ್ರ ಸರ್ಕಾರ, ಸಾಮನ್ಯ ಜನರ ಮೇಲೆ ಇದೊಂದು ದೊಡ್ಡ ಗಧಾಪ್ರಹಾರ ಮಾಡಿದೆ. ನನ್ನ ಮನಸ್ಸಿಗೆ ಬಹಳ ನೋವಾಗುವುದೇನೆಂದರೆ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸಾಮಾನ್ಯ ಜನರ ಮೇಲೆ ಗಧಾ ಪ್ರಹಾರವಾದಾಗ, ಇಷ್ಟೊಂದು ಬೆಲೆ ಹೆಚ್ಚಾದಾಗ, ರಾಜ್ಯಸರ್ಕಾರ ಇವತ್ತಿನವರೆಗೆ ಕೇಂದ್ರಸರ್ಕಾರಕ್ಕೆ ಈ ರೀತಿ ಬೆಲೆ ಹೆಚ್ಚಳ ಮಾಡಿದ್ದುದು ಸರಿಯಲ್ಲ, ಇದರಿಂದ ರಾಜ್ಯದ ಸಾಮಾನ್ಯ ಜನರ ಮೇಲೆ ಬಹಳಷ್ಟು ಆರ್ಥಿಕ ಪರಿಣಾಮವಾಗುತ್ತದೆ. ಜನರು ಬಹಳಷ್ಟು ಕಷ್ಟದಲ್ಲಿದ್ದಾರೆ. ಈ ಮಾತನ್ನು ರಾಜ್ಯ ಸರ್ಕಾರದವರು, ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗಿತ್ತು. ಆದರೆ ಇವತ್ತು ಕೇಂದ್ರಸರ್ಕಾರಕ್ಕಾಗಲೀ, ರಾಜ್ಯ ಸರ್ಕಾರಕ್ಕಾಗಲೀ, ಸಾಮಾನ್ಯ ಜನರ ಬಗ್ಗೆ ಚಿಂತನೆ ಇಲ್ಲ. ಕೇಂದ್ರಸರ್ಕಾರ ಕೇವಲ ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್ ಇವರ ಒತ್ತಡಕ್ಕೆ, ಮನಸ್ಸಿಗೆ ಬಂದಹಾಗೆ ನಡೆದುಕೊಳ್ಳುವುದು ಇವರಿಗೆ ಇತಿಮಿತಿ ಯಾವುದೂ ಇಲ್ಲ ಇವತ್ತು ಬೆಲೆ ಏರಿಕೆ ಹೆಚ್ಚಾಗಿದೆ. ಬೆಲೆ ಏರಿಕೆ ಹೆಚ್ಚು ಮಾಡತಕ್ಕ ಅವಶ್ಯಕತೆ ಇತ್ತೋ ಇಲ್ಲವೋ ಅಥವಾ ಬೆಲೆ ಏರಿಕೆ ಮಾಡಿದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರಸರ್ಕಾರದವರು ಮಾಡಿರುತ್ತಾರೆಂದು ಉತ್ತರ ಕೊಟ್ಟು ಹೋಗಬಹುದು. ಆದರೆ ಈ ಜವಾಬ್ದಾರಿ ರಾಜ್ಯಸರ್ಕಾರದ ಮೇಲೆಯೂ ಇದೆ. ಈ ನಾಡಿನ ಜನರಿಗೆ ಕಷ್ಟವಾದಾಗ, ತೊಂದರೆಯಾದಾಗ, ಇವತ್ತು ಆಡಳಿತ ಮಾಡುತ್ತಿರತಕ್ಕ ಕಾಂಗ್ರೆಸ್ ಪಕ್ಷ, ನಿಮ್ಮದೇ ಸರ್ಕಾರ ಕೇಂದ್ರದಲ್ಲಿ ಇದ್ದಾಗ, ಈ ವಿಚಾರವನ್ನು ಕೇಂದ್ರಸರ್ಕಾರದ ಗಮನಕ್ಕೆ ತಂದು, ಈ ಬೆಲೆ ಏರಿಕೆಯಿಂದ ಸಾಮಾನ್ಯ ಜನರ ಜೀವನದ ಮೇಲೆ ಕಷ್ಟವಾಗಿದೆ, ಜನಜೀವನ ಮಾಡುವುದು ಕಷ್ಟವಾಗಿದೆ ಎಂಬುದನ್ನು ಅವರ ಗಮನಕ್ಕೆ ತರಬೇಕಾಗುತ್ತದೆ. ಇದರಲ್ಲಿ ತಾವು ವಿಫಲವಾದರೆ, ತಾವು ಸಬ್ಸಿಡೈಸ್ ಮಾಡಬೇಕಾಗುತ್ತದೆ. ಶ್ರೀಮತಿ ಇಂದಿರಾಗಾಂಧಿಯವರ ಫೋಟೋ ಹಾಕಿ ತಾವು ಕಾರ್ಡುಗಳನ್ನು ವಿತರಣೆ ಮಾಡಿದಿರಿ. ತಾವು ಯಾರ ಆಶೀರ್ವಾದದಿಂದ ಇಲ್ಲಿ ಕುಳಿತಿದ್ದೀರಿ, ಅವವರ ಭಾವಚಿತ್ರ ಹಾಕಿ ಕಾರ್ಡ್ ವಿತರಣೆ ಮಾಡಿದಿರಿ. ಆದರೆ, ಇವತ್ತು ನೀವು ಬಡ ಜನರಿಗೆ ಕೊಟ್ಟ ಕೊಡುಗೆ ಏನು ಕೇಂದ್ರ ಸರ್ಕಾರ, ರಾಜ್ಯಸರ್ಕಾರ ಬಡ ಜನರಿಗೆ ಕೊಟ್ಟ ಕೊಡುಗೆ ಏನೆಂದರೆ unprecedented in the history of the country ಇಷ್ಟೊಂದು ಬೆಲೆ ನಿಗದಿ ಮಾಡಿದ್ದಾರೆ.

ಕೇಂದ್ರ ಸರ್ಕಾರದ ಬಜೆಟ್ 28ನೇ ತಾರೀಖಿಗೆ ಮಂಡನೆ ಆಗುತ್ತಿದೆ. ಮಂಡನೆಯಾಗುವುದಕ್ಕಿಂತ ಮುಂಚೆ ಜೀವನಾವಶ್ಯಕ ವಸ್ತುಗಳು ಮತ್ತು ಆಡ್ಮಿನಿಸ್ಟ್ರೇಟೀವ್ ಪ್ರೈಸಸ್ ಎರಡೂ ಬೆಲೆ ಏರಿಕೆ ಮಾಡಿ ಇವತ್ತು ಕೇಂದ್ರ ಸರ್ಕಾರ ಏನು ಮಾಡಿದೆ ಅಂದ್ರೆ ಬರುವ ಬಜೆಟ್ನಲ್ಲಿ ಇಲ್ಲಿ ಅಲ್ಲಿ ಅಲ್ಪಸ್ವಲ್ಪ ರಿಯಾಯಿತಿ ಕೊಟ್ಟು ಜನರಿಗೆ ತಪ್ಪು ದಾರಿಗೆ ಎಳೆಯುವುದಕ್ಕೆ ನೀವು ಪ್ರಯತ್ನ ಮಾಡುತ್ತಿದ್ದೀರಿ. ಮುಂಗಡ ಪತ್ರವನ್ನು ಮಾಡುವುದಕ್ಕಿಂತ ಮುಂಚೆ ಈ ತರಹ ಬೆಲೆ ಏರಿಕೆ ಮಾಡಿದ್ದು ಸರಿಯಲ್ಲ ಪ್ರತಿ ಸಲವೂ ಕೇಂದ್ರ ಸರ್ಕಾರ ಯಾವುದೋ ಕಾರಣ ಕೊಟ್ಟು ಬಜೆಟ್ ಮಂಡನೆ ಆಗುವುದಕ್ಕಿಂತ ಮುಂಚೆ ಬೆಲೆ ಏರಿಕೆ ಮಾಡುತ್ತಿದೆ.

ಶ್ರೀ ಹಲಗೇಗೌಡ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡಿರುವ ವಿಷಯವನ್ನು ಈ ಸಭೆಯಲ್ಲಿ ತಂದು ಚರ್ಚೆ ಮಾಡಬಹುದೇ?

ಶ್ರೀ ಆರ್.ವಿ. ದೇಶಪಾಂಡೆ : ಈ ನಾಡಿನ ಜನರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಚಿಂತೆ ಇಲ್ಲ, ಅವರು ಏನು ತಿಳಿದುಕೊಂಡಿದ್ದಾರೆಂದರೆ, ಮಧ್ಯಾವಧಿ ಚುನಾವಣೆ ಉತ್ತರ ಭಾರತ ಕೆಲವು ರಾಜ್ಯಗಳಲ್ಲಿ ಆದಾಗ ನಾವು ಗೆದ್ದು ಬಂದು ಬಿಟ್ಟಿದ್ದೇವೆ, ಇನ್ನೂ ಒಂದು ಎರಡು ವರ್ಷ ಲೋಕಸಭೆ ಚುನಾವಣೆ ಇಲ್ಲ, ಎಂದು, ಅದರ ಲಾಭ ಪಡೆದುಕೊಂಡು ಮನಸ್ಸು ಬಂದ ಹಾಗೆ ಇವರು ಬೆಲೆ ಏರಿಕೆ ಮಾಡಿದ್ದಾರೆ. ಸಾಮಾನ್ಯ ಜನ ಈ ಬೆಲೆ ಏರಿಕೆಯನ್ನು ತಡೆದುಕೊಳ್ಳುವುದಕ್ಕೆ ಸಾಧ್ಯ ಇದೆಯೇ ಮಧ್ಯಮ ವರ್ಗದ, ಜನಸಾಮಾನ್ಯ ವರ್ಗದ ಜನ ಕಡು ಬಡವರು ಇವತ್ತು ಕಂಗಾಲಾಗಿದ್ದಾರೆ. ಕೇಂದ್ರ ಸರ್ಕಾರ ಹಲವಾರು ಎಕನಾಮಿಕ್ ಪಾಲಿಸಿಗಳ ಬಗ್ಗೆ ನಿರ್ಣಯ ತೆಗೆದು ಕೊಂಡಿದ್ದಾರೆ. ಈ ನಿರ್ಣಯ ಏನು ಕೇಂದ್ರ ಸರ್ಕಾರ ತೆಗೆದುಕೊಂಡಿತು, ಇದರಿಂದ ಏನಾಗಿದೆ ಎಂದರೆ ಜನರಿಗೆ ಅನುಕೂಲವಾಗುವಂತಹ ಯಾವುದೇ ಕೆಲಸ ಆಗಿಲ್ಲ. ಇವತ್ತು ಕೇಂದ್ರ ಸರ್ಕಾರ ಏನು ಮಾಡಿದೆ? ಈವತ್ತು ನಮ್ಮ ರಾಜ್ಯದ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಅಕ್ಕಿ ಸೂಪರ್ಫೈನ್ 5ರೂ 75 ಪೈಸೆ ಇತ್ತು, ಇವತ್ತು 7-05 ಪೈಸೆ ಆಗಿದೆ. ಅದೇ ರೀತಿ ಈ ಕೋರ್ಸ್ ವೆರೈಟಿ 5.75 ಪೈಸೆ ಮಾಡಿದ್ದಾರೆ. ಗೋಧಿ 3-75ಪೈಸೆ ಇದ್ದುದ್ದು 4-45 ಪೈಸೆ ಮಾಡಿದ್ದಾರೆ. ಸಕ್ಕರೆ 2-30 ಪೈಸೆ ಇದ್ದದ್ದು 9-05 ಪೈಸೆ ಮಾಡಿದ್ದಾರೆ. ಅದೇ ಪ್ರಕಾರ ನಮ್ಮ ಬಡವರ್ಗದ ಜನರಿಗೆ ತಾವು ಏನು ತ್ರಿವರ್ಣ ಕಾರ್ಡ್ ಮೇಲೆ ಅಕ್ಕಿ, ಗೋಧಿಯನ್ನು ಕೊಡುತ್ತೀರಿ ಅದು 4-15 ಪೈಸೆ ಇದ್ದದ್ದು 5-45 ಪೈಸೆ ಮಾಡಿದ್ದಾರೆ. ಒಂದು ಮಾತನ್ನು ನಾನು ತಮ್ಮ ಮುಖಾಂತರ ಇಡೀ ನಾಡಿನ ಜನರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಾವು ಅಧಿಕಾರದಲ್ಲಿದ್ದಾಗ ಬರಗಾಲ ಇತ್ತು. ಆರ್ಥಿಕ ಪರಿಸ್ಥಿತಿ ಸರಿ ಇರಲಿಲ್ಲ. ಅದರೂ ಸಹ 2 ರೂಪಾಯಿಗೆ ಒಂದು ಕಿಲೋ ಅಕ್ಕಿ ಕೊಟ್ಟೆವು. ಹಲವಾರು ಬಾರಿ ನಮ್ಮ ಕ್ಯಾಬಿನೆಟ್ನಲ್ಲಿ ನಮ್ಮ ಅಧಿಕಾರಿಗಳು 15 ಪೈಸೆ ಹೆಚ್ಚು ಮಾಡಿ ಎಂದು ಹೇಳಿದರೂ ಕೂಡ, ನಾವು ಇಲ್ಲ ಎಂದು ಹೇಳಿದೆವು. ಆದರೆ ಈ ಸರ್ಕಾರ, ನಾವು ಬಡವರ ಸರ್ಕಾರ, ರೈತರ ಸರ್ಕಾರ, ಎಂದು ಹೇಳಿ ಇವತ್ತು ಯಾವ ಬಡಜನರಿಗೆ 4-15 ಪೈಸೆಗೆ ಅಕ್ಕಿ ಕೊಡುತ್ತಿದ್ದರೋ ಅದನ್ನು ಇವ್ವತು 5Ë45 ಪೈಸೆ ಮಾಡಿದ್ದಾರೆ. ಅದೇ ಪ್ರಕಾರ ಬೇರೆ ಬೇರೆ ವೆರೈಟೀಸ್ ಇದೆ. ಕೋರ್ ವೆರೈಟಿಗೆ 5-10 ಪೈಸೆ ಮಾಡಿದ್ದಾರೆ. ಗೋಧಿ 2-75 ಪೈಸೆ ಇದ್ದದ್ದು 3-45 ಪೈಸೆ ಮಾಡಿದ್ದಾರೆ. ಅದೇ ಪ್ರಕಾರ ಸಕ್ಕರೆ ದರ ಹೆಚ್ಚು ಮಾಡಿದ್ದಾರೆ. ಹೀಗೆ ರಾಜ್ಯದ ಬಡ ಜನರ ಮೇಲೆ ಒಂದು ದೊಡ್ಡ ಗಧಾಪ್ರಹಾರ ಕೇಂದ್ರ ಸರ್ಕಾರದ ಈ ನಿರ್ಣಯದಿಂದ ಅಗಿದೆ. ಇವತ್ತು ರಾಜ್ಯದಲ್ಲಿ ಸಾಧಾರಣವಾಗಿ ಪೆಟ್ರೋಲ್ ದರ 18-59 ಪೈಸೆ ಇತತು ಅದು 19-93ಪೈಸೆ ಆಗಿದೆ. ಡೀಸಲ್ ಬೆಲೆ 7-13 ಪೈಸೆ

ಇದ್ದದ್ದು 8-05 ಪೈಸೆ ಆಗಿದೆ. ಇದು ಇಷ್ಟಕ್ಕೆ ನಿಲ್ಲುವುದಿಲ್ಲ. ರಾಜ್ಯದಲ್ಲಿ ಟೋಟಲ್ ತ್ರಿವರ್ಣ ಕಾರ್ಡ್ ಹೋಲಡರ್ಸ್ ಎಂದು ಏನು ನಾವು ಹೇಳುತ್ತಿದ್ದೇವೆ ಅವರು 46.27 ಲಕ್ಷ ಇದ್ದಾರೆ. ಮತ್ತು ಸ್ಯಾಫರನ್ ಕಾರ್ಡ್ ಹೋಲ್ಡರ್ಸ್ 47.73 ಲಕ್ಷ ಇದ್ದಾರೆ. ಕೇಂದ್ರ ಸರ್ಕಾರ ತನ್ನ ಮುಂಗಡ ಪತ್ರದಲ್ಲಿ ಫುಡ್ ಸಬ್ಸೀಡಿ ಸಲುವಾಗಿ 3 ಸಾವಿರ ಕೋಟಿ ರೂಪಾಯಿಗಳ ಒಂದು ಪ್ರಾವಿಷನ್ ಮಾಡಿದೆ. ಈ ನಿರ್ಣಯದಿಂದ ಸಾಧಾರಣ 2 ಸಾವಿರ ಕೋಟಿ ರೂಪಾಯಿಗಳು ಡೀಸಲ್ ಮತ್ತು ಪೆಟ್ರೋಲ್ ಬಿಟ್ಟು 2 ಸಾವಿರ ಕೋಟಿ ರೂಪಾಯಿಗಳ ಫುಡ್ ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಉಳಿತಾಯ ಮಾಡಿದೆ. ಮಲ್ಟಿನ್ಯಾಷನಲ್ಗೆ ಕೇಂದ್ರ ಸರ್ಕಾರದಿಂದ ಮನಸ್ಸು ಬಂದಷ್ಟು ಸಹಾಯ ಆಗುತ್ತಿದೆ. ಮಾನ್ಯ ಪ್ರಧಾನಿ ಮತ್ತು ಮಾನ್ಯ ಮನಮೋಹನಸಿಂಗ್‌ರವರ ಲಿಬಿರಲೈಜ್ಡ್ ಎಕಾನಮಿ ಪಾಲಿಸಿಯಿಂದ ಸಾಕಷ್ಟು ರಿಯಾಯಿತಿಗಳು ದೊಡ್ಡದೊಡ್ಡ ಜನರಿಗೆ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಸಿಗುತ್ತಿವೆ. ಆದರೆ ಸಾಮಾನ್ಯ ಜನರ ಮೇಲೆ ದೊಡ್ಡ ಗಧಾ ಪ್ರಹಾರ ಆಗುತ್ತಿದೆ. 2 ಸಾವಿರ ಕೋಟಿಯ ಫುಡ್ ಸಬ್ಸಿಡಿ ಉಳಿತಾಯ ಮಾಡಲಿಕ್ಕೆ ಕೇಂದ್ರ ಸರ್ಕಾರದ ಈ ಕ್ರಮ ಕೈಗೊಂಡಿದೆ. ಅದ್ದರಿಂದ ನನ್ನ ಅಂದಾಜಿನಲ್ಲಿ ಡೀಸಲ್ ಮತ್ತು ಪೆಟ್ರೋಲ್ ಬಿಟ್ಟು ಕರ್ನಾಟಕದ ನಮ್ಮ ಬಡಜನರ ಮೇಲೆ 100 ರಿಂದ 130 ಕೋಟಿ ರೂಪಾಯಿಗಳ ಹೊರೆ ಆಗುತ್ತಿದೆ. ಇದಕ್ಕೆ ಜವಾಬ್ದಾರಿಯಾರು? ಇದೇ ನಿಮ್ಮ ಕೊಡುಗೆ ಏನು? ಮಾನ್ಯ ನರಸಿಂಹರಾಯರು ಮಾನ್ಯ ವೀರಪ್ಪಮೊಯಿಲಿಯವರ ಮುಖಾಂತರ ಕರ್ನಾಟಕ ನಾಡಿನ ಜನರಿಗೆ ಡೀಸಲ್ ಪೆಟ್ರೋಲ್ ಬಿಟ್ಟು, 120-130 ಕೋಟಿ ರೂಪಾಯಿಗಳ ಭಾರ ಹಾಕಿ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿ ಏನು ತಮ್ಮ ಪಾತ್ರ ಏನು? ತಾವು ಇವತ್ತು ಈ ಬೆಲೆ ಏರಿಕೆಯ್ನನು ತಡೆಗಟ್ಟಲು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದು ನಮಗೆ ಗೊತ್ತಾಗಬೇಕಾಗಿದೆ. ಇವತ್ತು ಒಂದು ಕಡೆ ವಿಚಾರ ಏನು ನಡೆಯುತ್ತಿದೆ. ಈ ಗ್ಯಾಟ್ ಪ್ರೊಪೋಸಲ್ನಲ್ಲಿ ಯೋಜನೆ ಮಾಡಿ ಈ ಸಬ್ಸೀಡಿ ಗಳನ್ನು ವಿತ್ಡ್ರಾ ಮಾಡಬೇಕು ಎಂದು. ಸಬ್ಸಿಡಿಗಳು ವಿತ್ಡ್ರಾ ಆದರೆ ಈ ನಮ್ಮ ರೇಷನ್ ಅಂಗಡಿಗಳ ಮುಖಾಂತರ ನಾವು ಏನು ಮಾರಾಟ ಮಾಡುತ್ತಿದ್ದೇವೆ, ಆ ದರ ಮತ್ತು ಮಾರ್ಕೆಟ್ ದರ ಒಂದೇ ಆದಾಗ automatically the public Distribution System will be abolished. ಯಾವ ಬಡಜನರ ಸಲುವಾಗಿ, ಯಾವ ಸಾಮಾನ್ಯಜನರ ಸಲುವಾಗಿ ನಾವು ಸಬ್ಸಿಡಿ ಮಾಡಿ ರೇಷನ್ ಅಂಗಡಿ ಮುಖಾಂತರ ಅಕ್ಕಿ ಅಥವಾ ಗೋಧಿ ಅಥವಾ ಸಕ್ಕರೆ ಕೊಡುತ್ತೇವೆ ಅಲ್ಲಿ ಮಾರಾಟ ಆಗುವ ದರ ಮತ್ತು ಪೇಟೆ ದರ ಹೆಚ್ಚು ಕಡಿಮೆ ಒಂದೇ ಆಗಬೇಕು, ಇದೇ ಒಂದು ಉದ್ದೇಶ ಕೇಂದ್ರ ಸರ್ಕಾರದ್ದು ಇದೆ. ಇದು ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್. ಒತ್ತಡಕ್ಕೆ ಮಣಿದು ಇವತ್ತು ನಾವು ಏನು ಗ್ಯಾಟ್ ಒಪ್ಪಂದಕ್ಕೆ ಸಹಿ ಮಾಡುವುದಕ್ಕೆ ಒಪ್ಪಿದ್ದೇವೆ ಅದರ ಪರಿಣಾಮ ಇದು ಆಗುತ್ತಿದೆ. ಇದು ಮುಖ್ಯವಾದ ಪರಿಣಾಮ. ಬಹಳಷ್ಟು ಎಕನಾಮಿಸ್ಟ್‌ಯಾರು ಮನಮೋಹನ್‌ಸಿಂಗ್‌ರವರಿಗೆ ಇವತ್ತಿನವರೆಗೂ ಬಹಳ ಕ್ಲೋಸ್ ಆಗಿದ್ದರು. ಅವರೂ ಕೂಡ ಇದರ ಬಗ್ಗೆ ಟೀಕೆ ಟಿಪ್ಪಣಿ ಮಾಡಿದ್ದಾರೆ. ಇದರ ಬಗ್ಗೆ ಮನಮೋಹನ್ ಸಿಂಗ್‌ರವರು ಮರು ಚಿಂತನೆ ಮಾಡಬೇಕಾಗುತ್ತದೆ. ಈ ರಾಷ್ಟ್ರದಲ್ಲಿ ಬಡ ಜನರ ಬಗ್ಗೆ ಕೇವಲ ಪೊಳ್ಳುಭಾಷಣಗಳು ಆಗುತ್ತಿದೆಯೇ ವಿನಹ ಬಡವರ ಸಲುವಾಗಿ ಅವರಿಗೆ ಒಂದು ಆರ್ಥಿಕ ಶಕ್ತಿ ತುಂಬುವ ಸಲುವಾಗಿ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುವ ಸಲುವಾಗಿ ಏನೂ ಆಗಿಲ್ಲ. ಈ ಚಿಂತನೆ ಕೇವಲ ಮಾತಿನಲ್ಲಿ ಉಳಿದಿದೆಯೇ ವಿನಹ ಕಾರ್ಯ ರೂಪದಲ್ಲಿ ಉಳಿದಿಲ್ಲ. ಹಾಗಾಗಿ ಇವತ್ತು ನಾವೆಲ್ಲರೂ ಪಕ್ಷಾತೀತವಾಗಿ ಈ ಬೆಲೆ ಏರಿಕೆಯನ್ನು ಕಂಡೆಮ್ ಮಾಡಬೇಕಾಗುತ್ತದೆ. ಈ ಬೆಲೆ ಏರಿಕೆ ಪರಿಣಾಮ ರಾಜ್ಯದಲ್ಲಿ ಕನಿಷ್ಟ 70-75 ಪರ್ಸೆಂಟ್ ಜನರಿಗೆ ತೊಂದರೆ ಆಗುತ್ತದೆ. ಅದು ಸಕ್ಕರೆ, ಅಕ್ಕಿ, ಗೋಧಿ,

ಇರಬಹುದು, ಗ್ರಾಮಂತರ ಬಗ್ಗೆ ನಾನು ಮಾತನಾಡುವುದಿಲ್ಲ. ಅದೇ ಪ್ರಕಾರ ಪೆಟ್ರೋಲ್ ಮತ್ತು ಡೀಸಲ್ ಬೆಲೆ ಏನು ಹೆಚ್ಚು ಮಾಡಿದ್ದಾರೆ. ಅದರಿಂದ ದುಷ್ಪರಿಣಾಮಗಳು ಜಾಸ್ತಿ ಇವೆ. ನಾವು ಕೆ.ಎಸ್.ಅರ್.ಟಿ.ಸಿ. ದರ ಹೆಚ್ಚು ಮಾಡುವುದಿಲ್ಲ ಎಂದು ನಮ್ಮ ಖಂಡ್ರೆಸಾಹೇಬರು ಹೇಳಿದ್ದಾರೆ. ಈ ರೀತಿ ಮುಖ್ಯಮಂತ್ರಿಗಳು ಭರವಸೆ ಮಾಡಲಿಕ್ಕೆ ತಯಾರು ಇದ್ದಾರೆಯೇ? ನಾವು ಕೆ.ಎಸ್.ಅರ್.ಟಿ.ಸಿ. ದರ ಹೆಚ್ಚು ಮಾಡುವುದಿಲ್ಲ ಎಂದು. ಹೇಳಿ ಇಲ್ಲಾ ಕೇಂದ್ರ ಸರ್ಕಾರ ಇವತ್ತು ಡೀಸಲ್ ದರ ಹೆಚ್ಚು ಮಾಡಿದೆ ಮತ್ತೆ ಒಂದು 10-15 ದಿವಸದಲ್ಲಿ ಕೆ,ಎಸ್.ಅರ್.ಟಿ.ಸಿ. ದರ ಹೆಚ್ಚು ಮಾಡುತ್ತೀರಿ. ಇದಕ್ಕೆ ಜವಾಬ್ದಾರಿ ಯಾರು? ನನಗೆ ಒಂದು ಭರವಸೆ ಕೊಡಿ ನಾವು ಕೆ.ಎಸ್.ಆರ್.ಟಿ.ಸಿ. ದರ ಹೆಚ್ಚು ಮಾಡುವುದಿಲ್ಲ ಎಂದು. ಎರಡನೆಯದು ಸೇಲ್ಸ್ ಟ್ಯಾಕ್ಸ್ ಹೆಚ್ಚಾಯಿತು. ಎಂಟ್ರಿಟ್ಯಾಕ್ಸ್ ಹೆಚ್ಚಾಯಿತು. ಅದು ಇನ್-ಡೈರೆಕ್ಟ್ ಆಗಿ ಸಾಮಾನ್ಯ ಜನರ ಮೇಲೆ ಭಾರ ಆಯಿತು. ಮನಮೋಹನಸಿಂಗ್ ಅವರು ಬಹಳ ಹೇಳಿಕೊಂಡರು ನಾನು ಬೆಲೆ ಏರಿಕೆ ಕಡಿಮೆ ಮಾಡಿದ್ದೇನೆಂದು. ಇನ್ಫ್ಲೇಷನ್ ರೇಟ್ ನಾನು 8-4 ತಂದಿದ್ದೇನೆಂದು ಹೇಳಿಕೊಂಡರು.

12.40 ಪಿಎಂ

ಕಳೆದ ಮುಂಗಡ ಪತ್ರವನ್ನು ಮನಮೋಹನ್ ಸಿಂಗ್‌ರವರು ಏನು ಪ್ರೆಸೆಂಟ್ ಮಾಡಿದರು, ಅದರಿಂದ ಇವೊತ್ತು ಪ್ರತಿಯೊಂದು ವಸ್ತುಗಳ ಬೆಲೆ ಏರಿಕೆಯಾಗಿದೆ. ಹಾಗಾಗಿ ಒಬ್ಬ ಬಡವ, ಸಾಮಾನ್ಯ ಜನ, ಮಧ್ಯಮವರ್ಗದವರು, ತಮ್ಮ ಜೀವನ ಮಾಡುವುದೇ ಕಷ್ಟವಾಗಿದೆ. ಹೇಗೆ ಬೆಲೆ ಏರಿಕೆಯಾಗಿದೆ ಅದೇ ಪ್ರಕಾರವಾಗಿ ಅವರ ಆದಾಯವೇನೂ ಹೆಚ್ಚಿಗೆಯಾಗಿಲ್ಲ. ಅವರ ಆದಾಯವೇನೂ ಹೆಚ್ಚಿಗೆಯಾಗಿಲ್ಲ. ಈ ಒಂದು ಕಾರಣದಿಂದ ಬೆಲೆ ಏರಿಕೆಯಾಗುವುದರಲ್ಲಿ ಯಾವುದೇ ಸಂದೇಹವೂ ಇಲ್ಲ. ಇನ್ಫ್ಲೇಷನ್ ರೇಟ್ ಹೆಚ್ಚಿಗೆಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಈಗ ಡೀಸೆಲ್, ಪೆಟ್ರೋಲ್ ದರ ಹೆಚ್ಚಿಗೆಯಾದರೆ ಟ್ರಾನ್ಸ್ಪೋರ್ಟ್ ದರ ಹೆಚ್ಚಾಗುತ್ತದೆ. ಇದೇ ರೀತಿಯಲ್ಲಿ ಬಸ್, ಟ್ಯಾಕ್ಸಿ, ರಿಕ್ಷಾ, ದರಗಳೂ ಕೂಡ ಹೆಚ್ಚಿಗೆಯಾಗಬೇಕು. ಜೀವನಾವಶ್ಯಕ ವಸ್ತುಗಳನ್ನು ನಾವೇನು ಟ್ರಾನ್ಸ್ಪೋರ್ಟ್ ಮಾಡುತ್ತೇವೆ ಅದರ ಬೆಲೆಯೂ ಹೆಚ್ಚಿಗೆಯಾಗಬೇಕು. ಹಾಗಾದರೆ ಇದಕ್ಕೆಲ್ಲಾ ಜವಾಬ್ದಾರರು ಯಾರು? ಕೆಲವು ಡೈರೆಕ್ಟ್ ಇಂಪ್ಲಿಕೇಷನ್ಸ್ ಏನು ಕಾಣಿಸುತ್ತವೆ, ಅದರ ಬಗ್ಗೆಯೂ ಸರಕಾರದವರು ಚಿಂತನೆ ಮಾಡಬೇಕಾಗುತ್ತದೆ. ಹಾಗಾಗಿ ಈ ಕೇಂದ್ರ ಸರಕಾರದ ನೀತಿಯು ಬಡಜನರ ವಿರೋಧಿ ನೀತಿ ಆಗಿದೆ. ರೈತರ ವಿರೋಧಿ ನೀತಿ ಆಗಿದೆ. ಸಾಮಾನ್ಯ ಜನರ ವಿರೋಧಿ ನೀತಿಯಾಗಿದೆ. ಇದನ್ನು ನಾವೆಲ್ಲರೂ ಪಕ್ಷಾತೀತವಾಗಿ ಖಂಡಿಸಬೇಕಾಗುತ್ತದೆ. ಕೇಂದ್ರ ಸರಕಾರದವರು ಮಿನಿಮಂ ಸಪ್ಪೋರ್ಟ್‌ಪ್ರೈಸನ್ನು ಹೆಚ್ಚಿಗೆ ಮಾಡಿದ್ದಾರೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಬಹುದು. ಇದರಿಂದ ಯಾರಿಗೆ ಹೆಚ್ಚಿಗೆ ಆಯಿತು? ಪಂಜಾಬ್ ಮತ್ತು ಹರಿಯಾಣದಲ್ಲಿ ಯಾವ ರೈತರು ಗೋಧಿಯನ್ನು ಬೆಳೆಯುತ್ತಾರೆ, ಆ ವರ್ಗಕ್ಕೆ ಕಳೆದ ಎರಡು ಮೂರು ವರ್ಷಗಳಲ್ಲಿ ದರವನ್ನು ಹೆಚ್ಚಿಗೆ ಮಾಡಿದ್ದುದು ನಿಜವಾಗಿದೆ. ಅದರಲ್ಲಿಯೂ ಅದನ್ನು ಕೂಡ ನೀವು ರಾಜಕೀಯ ಮಾಡಲಿಕ್ಕಾಗಿ ಮಾಡಿದ್ದೀರಿ. ಆದರೆ ಇದರಿಂದ ಕರ್ನಾಟಕ ರಾಜ್ಯದ ರೈತರಿಗೆ ಏನು ಸಿಕ್ಕಿದೆ? ನೀವು ಭತ್ತದ ದರವನ್ನು ಹೆಚ್ಚಿಗೆ ಮಾಡಿದ್ದೀರಾ? ಯಾವ ಪ್ರಮಾಣದಲ್ಲಿ ಹೆಚ್ಚಿಗೆ ಮಾಡಿದ್ದೀರಿ? ಇದರಿಂದ ಯಾರು ರಿಚ್ಫಾರ್ಮರ್ಸ್ ಇದ್ದಾರೆ ಅವರಿಗೆ ಇದರ ಮೂಲಕ ಅವಕಾಶ ಮಾಡಿಕೊಟ್ಟಿರಬಹುದು. ಆದರೆ ನಮ್ಮ ದೇಶದಲ್ಲಿ ಸುಮಾರು 70 ರಿಂದ 80 ಪರ್ಸೆಂಟ್ನಷ್ಟು ಸ್ಮಾಲ್ ಮಾರ್ಜಿನಲ್ ಫಾರ್ಮರ್ಸ್ ಇದ್ದಾರೆ ಅವರಿಗೆ ಏನು ಸಿಕ್ಕಿತು?

ಶ್ರೀ ಎಂ. ವೀರಪ್ಪ ಮೊಯಿಲಿ : ದೇಶಪಾಂಡೆಯವರು ಹಾಗೆ ಹೇಳುವುದು ಸರಿಯಲ್ಲ. ನೀವು ಒಂದು ಕೆಲಸ ಮಾಡಿ. ಶುಗರ್ಕೇನ್ ಬೆಲೆ ಹೆಚ್ಚು ಮಾಡಬೇಡಿ,

ಇತರ ದವಸಧಾನ್ಯಗಳು ಬೆಲೆಯನ್ನು ಹೆಚ್ಚು ಮಾಡಬೇಡಿ, ರೈತರಿಗೆ ಸಂಬಂಧಪಟ್ಟ ಯಾವುದಕ್ಕೂ ಬೆಲೆ ಹೆಚ್ಚು ಮಾಡಬೇಡಿ ಎಂದು ಹೇಳಿ. ಹೀಗೆ ಎರಡೆರಡು ವಾದಗಳು ಸರಿಯಲ್ಲ. ಅದನ್ನು ಹೇಳಿಬಿಟ್ಟರೆ ನಾಡಿನ ಮತ್ತು ದೇಶದ ರೈತರಿಗೆ ನಿಮ್ಮ ನಿಲುವು ಗೊತ್ತಾಗಲಿ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಪ್ರೊಕ್ಯೂರ್ಮೆಂಟ್ ಪ್ರೈಸ್ ಹೆಚ್ಚು ಮಾಡುವುದರ ವಿರುದ್ಧ ಇಲ್ಲ. ಇದರಲ್ಲಿ ರಾಜಕೀಯ ಮಾಡಲಿಕ್ಕೆ ಹೋಗಬೇಡಿ. ನಾನು ಈ ವಿಚಾರವು ಪಕ್ಷಾತೀತ ಎಂದು ಹೇಳಿದ್ದೇನೆ. ಪ್ರೊಕ್ಯೂರ್ಮೆಂಟ್ಪ್ರೈಸ್ ಹೆಚ್ಚು ಮಾಡುವುದರ ವಿರುದ್ಧ ನಾನಿಲ್ಲ, ಅದನ್ನು ಮಾಡಿ. ರೈತರಿಗೆ ಮಾರ್ಕೆಟಿಂಗ್ ಫೆಸಿಲಿಟೀಸ್ ಮಾಡಿಕೊಡಿ. ಯೋಗ್ಯವಾದ ದರವನ್ನು ಕೊಡಿ. ಆದರೆ ಕೇವಲ ಹರಿಯಾಣ ಮತ್ತು ಪಂಜಾಬ್ ರೈತರಿಗೆ ಗೋಧಿ ದರವನ್ನು ದುಬಾರಿ ಮಾಡಿಕೊಟ್ಟು ಏನು ಮಾಡಿಕೊಟ್ಟಿದ್ದೀರಿ ಇವೊತ್ತು ನೂರಕ್ಕೆ 70 ನಷ್ಟು ಫಾರ್ಮರ್ಸ್ಗೆ ಹೋರ್ಡಿಂಗ್ ಕೆಪಾಸಿಟಿ ಇಲ್ಲ. ಆರ್ಥಿಕ ಸಂಪನ್ನರಾದ ಕೆಲವು ರೈತರುಗಳು ಮಾತ್ರ ಅದರ ಲಾಭವನ್ನು ಪಡೆದುಕೊಂಡರು. ನಮ್ಮ ನಾಡಿನ ರೈತರ ಬಗ್ಗೆ ತಾವುಗಳು ಹೇಳಿ. ನಮ್ಮಲ್ಲಿ ಗೋಧಿ, ಜೋಳ, ರಾಗಿ, ಭತ್ತಗಳ ದರವನ್ನು ಎಷ್ಟು ಹೆಚ್ಚು ಮಾಡಿದ್ದೀರಿ ಎಂಬುದನ್ನು ಹೇಳಿ. ಹಾಗೆ ನೀವೇನೂ ಹೆಚ್ಚು ಮಾಡಿಲ್ಲ, ಅದನ್ನು ನೀವು ಮಾಡಿ ಹೇಳಬೇಕು. ನಮ್ಮ ನಾಡಿನ ರೈತರಿಗೆ ಯಾವುದೇ ಲಾಭ ಇಲ್ಲ, ಕೇವಲ ನಾಡಿನ ಜನರ ಮೇಲೆ ಹೊರೆ ಹಾಕಿ, ಪಂಜಾಬ್ ಮತ್ತು ಹರಿಯಾಣದಲ್ಲಿ ಗೋಧಿ ದರವನ್ನು ಹೆಚ್ಚು ಮಾಡಿದ್ದೇವೆ ಎಂದು ಹೇಳಲು ನಿಮಗೆ ಏನು ಅಧಿಕಾರ ಇದೆ? ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ನಿಮ್ಮ ಕೇಂದ್ರ ಸಚಿವರು ರಾಜ್ಯ ಸರಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ, ಒಂದು ಹೇಳಿಕೆಯನ್ನೂ ಕೊಟ್ಟಿದ್ದಾರೆ. ಅದರಲ್ಲಿ ಶುಗರ್ಕೇನ್ ಪ್ರೈಸ್ನ್ನು ಹೆಚ್ಚು ಮಾಡಲು ಹೋಗಬೇಡಿ ಎಂದು ಹೇಳಿದ್ದಾರೆ. ಒಂದು ಕಡೆ ಶುಗರ್ಕೇನ್ ಪ್ರೈಸ್ನ್ನು ಹೆಚ್ಚು ಮಾಡುತ್ತೀರಿ. ಮತ್ತೊಂದು ಸ್ಟೇಟ್ಮೆಂಟ್ನ್ನು ಕೇಂದ್ರ ಸಚಿವರು ಕೊಡುತ್ತಾರೆ. ಅದರ ಮೂಲಕ ಕಬ್ಬಿನ ದರವನ್ನು ಹೆಚ್ಚು ಮಾಡಬೇಡಿ ಎಂದು ಹೇಳುತ್ತಾರೆ. ಇದು ಸರಿಯೇ? ಇದು ರೈತರ ಪರವಾಗಿ ಇರುವ ನೀತಿಯೇ ಬಡಜನರಿಗೆ ನೀವೇನು ಗ್ರೀನ್ಕಾರ್ಡ್ ಕೊಟ್ಟಿದ್ದೀರಿ, ಅವರ ಬಗ್ಗೆಯೂ ಚಿಂತನೆ ಮಾಡಬೇಕಾಗಿತ್ತು. ಜನತಾದಳ ಸರಕಾರ ಇದ್ದಾಗ ಎರಡು ರೂಪಾಯಿಗೆ ಕಿಲೋ ಅಕ್ಕಿಯನ್ನು ಕೊಟ್ಟಿದ್ದರು. ಅದೇ ಕಿಲೋ ಅಕ್ಕಿಯು ಇವತ್ತು 5 ರಿಂದ 6 ರೂ.ಗಳವರೆಗೆ ಆಗಿದೆ. ಇದು ಸರಿಯೇ? ಕಳೆದ ನಾಲ್ಕು ವರ್ಷಗಳಿಂದ ನಿಮ್ಮ ಸರಕಾರದವರು ಆಡಳಿತದಲ್ಲಿದ್ದುಕೊಂಡು ಬಡವರಿಗೆ ಕೊಟ್ಟ ಕೊಡುಗೆಯು ಇದೆಯೇ? ಈ ಪ್ರಶ್ನೆಯನ್ನು ನಾನು ನಿಮ್ಮಲ್ಲಿ ಕೇಳುತ್ತಿದ್ದೇನೆ. ಇವೊತ್ತು ಕೇಂದ್ರ ಸರಕಾರದವರು ಏನು ಮಾಡಿದ್ದಾರೆ? ತನ್ನ ಬಜೆಟ್ನಲ್ಲಿ ಡೆಫಿಸಿಟ್ ಹೆಚ್ಚು ಆಗುತ್ತಾ ಇದೆ, ಅಂಟಿಸಿಪೇಟೆಡ್ ಡೆಫಿಸಿಟ್ 4.7 ಪರ್ಸೆಂಟ್ ಇತ್ತು ಅದು ಸುಮಾರು 6.5 ತನಕ ಹೋಗುತ್ತಾ ಇದೆ, ಹಾಗಾಗಿ ಆ ಡೆಫಿಸಿಟ್ನ್ನು ಕಡಿಮೆ ಮಾಡಬೇಕು, ಆ ಒಂದು ಕಾರಣಕ್ಕಾಗಿ ದೇಶದ ಜನರ ಮೇಲೆ ದೊಡ್ಡದೊಂದು ಹೊರೆಯನ್ನು ಡಾ:ಮನಮೋಹನ್ಸಿಂಗ್ರವರು ಹಾಕಿದ್ದಾರೆ. ಮೊನ್ನೆ ನಮ್ಮ ಪ್ರಧಾನಿಯವರು ವಿದೇಶಕ್ಕೆ ಹೋಗಿದ್ದರು. ಹೋದಾಗ ಅವರು ಇಡೀ ರಾಷ್ಟ್ರಕ್ಕೆ ತೋರಿಸಬೇಕಾಗಿದೆ. ಯಾವ ನೀತಿಯನ್ನು ವರ್ಲ್ಡ್ಬ್ಯಾಂಕ್ನವರು ಹೇಳುತ್ತಾ ಇದ್ದಾರೆ. ಅದನ್ನು ನಾವು ಮಾಡುತ್ತಾ ಇದ್ದೇವೆ. ಸಬ್ಸಿಡಿಯನ್ನು ನಾವು ವಿತ್ಡ್ರಾ ಮಾಡುತ್ತಾ ಇದ್ದೇವೆ. ಈ ಬಗ್ಗೆ ಕೇಂದ್ರ ಸರಕಾರದವರು ಏನು ಮಾಡಬೇಕಾಗಿತ್ತು ಅಂದರೆ, ನಮ್ಮ ಫುಡ್ಕಾರ್ಪೋರೇಷನ್ ಆಫ್ ಇಂಡಿಯಾ ಯಾವುದಿದೆ. ಅದನ್ನು ಸರಿಪಡಿಸಬೇಕಾಗಿತ್ತು. ಇದೊಂದು ವೈಟ್ಎಲಿಫೆಂಟ್. ಫುಡ್ಕಾರ್ಪೋರೇಷನ್ ಆಫ್

ಇಂಡಿಯಾದಲ್ಲಿ ಏನು ಲೀಕೇಜ್ ಇದೆ, ಕರೆಪ್ಷನ್ ಇದೆ, ಅದು ಸುಮಾರು ವರ್ಷಕ್ಕೆ 400 ರಿಂದ 500 ಕೋಟಿಗಳವರೆಗೆ ಇದೆ. ಅದನ್ನು ಸರಿಪಡಿಸಲು ಯಾವುದೂ ಅವಕಾಶ ಇಲ್ಲವೇ? ಅದರ ಬಗ್ಗೆ ಕೇಂದ್ರ ಸರಕಾರದವರು ಯಾವುದೇ ಚಿಂತನೆ ಮಾಡಿಲ್ಲವೇ? ಈ ರೀತಿಯ ಇನ್‌ಎಫೀಷಿಯನ್ಸ್ ಯಾವ ಫುಡ್ಕಾರ್ಪೊರೇಶನ್ ಆಫ್ ಇಂಡಿಯಾ ಮಾಡಿತ್ತು, ಅದರ ದುಷ್ಪರಿಣಾಮವನ್ನು ದೇಶದ ಜನರ ಮೇಲೆ ಹಾಕಿಕೊಂಡಿದ್ದು ಕಂಡು ಬರುತ್ತದೆ. ಇದು ಸರಿಯೇ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳ ಬೇಕಾಗುತ್ತದೆ. ಹಾಗಾಗಿ ಅಲ್ಲಿರತಕ್ಕಂಥ ಕರಪ್‌ಷನ್ ಲೆಥಾರ್ಜಿ, ಇನ್‌ಎಫೀಷಿಯನ್ಸಿ, ಸರಿಪಡಿಸಿದ್ದರೆ ಇವೊತ್ತು ಈ ಪರಿಸ್ಥಿತಿಯು ಬರುತ್ತಾ ಇರಲಿಲ್ಲ. ಹಾಗಾಗಿ ಏನೊಂದು ಭಾರವನ್ನು ನಾಡಿನ ಜನರ ಮೇಲೆ ತಾವುಗಳು ಹಾಕಿದ್ದೀರಿ, ಅದನ್ನು ಜನರು ಸಹಿಸಲು ಸಾಧ್ಯವಿಲ್ಲ. ಸೂಕ್ತ ಕಾಲದಲ್ಲಿ ಜನರು ಇದಕ್ಕೆ ಉತ್ತರವನ್ನು ಕೊಡುತ್ತಾರೆ. ತಾವು ಇದನ್ನು ಸಬ್ಸಿಡೈಸ್ ಮಾಡುವುದಕ್ಕೆ ಮುಂದೆ ಬರಬೇಕು. ಎಲ್ಲವನ್ನು ಹೀಗೆ ಮಾಡಲು ಸಾಧ್ಯವಾಗಲಾರದು. ಕಡಿಮೆಪಕ್ಷ ತ್ರಿವರ್ಣಕಾರ್ಡ್ದವರ ಬಗ್ಗೆಯಾದರೂ ಚಿಂತನೆ ಮಾಡಿ. ಕೇಂದ್ರ ಸರಕಾರದವರು ಇದರ ಬಗ್ಗೆ ಚರ್ಚೆ ಮಾಡಬೇಕಾಗಿತ್ತು. ನಿಮ್ಮೊಂದಿಗೆ ಮಾತನಾಡ ಬೇಕಾಗಿತ್ತು. ಆ ಕೆಲಸವೂ ನಿಮ್ಮಿಂದ ಆಗಲಿಲ್ಲ. ನಿಜವಾಗಿಯೂ ಹೇಳ ಬೇಕೆಂದರೆ ಈ ನಮ್ಮ ಅಗತ್ಯವಸ್ತುಗಳ ಬೆಲೆಯನ್ನು ಕೇಂದ್ರ ಸರಕಾರದವರು ಹೆಚ್ಚು ಮಾಡಿ ಸಮಾಜದ ದುರ್ಬಲವರ್ಗದವರು, ಬಡವರು ಜೀವನ ಮಾಡುವುದು ಕಷ್ಟವಾಗುವಂತೆ ಮಾಡಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದ್ದಾರೆ ಅಂದರೆ ಗೋಧಿ ದರವನ್ನು ಹೆಚ್ಚು ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದಕ್ಕಿಂತ ಮೊದಲು ನಾನು ಇಶ್ಯೂಪ್ರೈಸ್ ಬಗ್ಗೆ ಹೇಳುತ್ತೇನೆ. ಇವೊತ್ತು ಗೋಧಿ 21 ಪರ್ಸೆಂಟ್ನಷ್ಟು ಹೆಚ್ಚಿಗೆ ಮಾಡಿದ್ದಾರೆ. ಮೊದಲು 330 ರೂಪಾಯಿಗಳಷ್ಟು ಕ್ವಿಂಟಾಲ್ ಇತ್ತು ಅದನ್ನು ಜಾಸ್ತಿ ಮಾಡಿದ್ದಾರೆ. ಅದೇ ಪ್ರಕಾರ ಅಕ್ಕಿಯ ಬಗ್ಗೆ ಕೂಡ ಕಾಮನ್ ವೆರೈಟಿಯಲ್ಲಿ 23 ಪರ್ಸೆಂಟ್ನಷ್ಟು ಹೆಚ್ಚು ಮಾಡಿದ್ದಾರೆ. 437 ರೂ.ಗಳಿಂದ 537ರೂ.ಗಳು ಎಂದು ಮಾಡಿದ್ದಾರೆ. ಮತ್ತೊಂದು ಕ್ವಾಲಿಟಿ 24 ಪರ್ಸೆಂಟ್ನಷ್ಟು ಹೆಚ್ಚು ಮಾಡಿದ್ದಾರೆ. ಅದನ್ನು 497 ರಿಂದ 607 ರೂ.ಗಳು ಎಂದು ಮಾಡಿದ್ದಾರೆ. ಹೀಗೆ ಪ್ರತಿಯೊಂದು ಕಡೆಯಲ್ಲಿಯೂ ಕೂಡ ದರವನ್ನು ಹೆಚ್ಚು ಮಾಡಿ ಇದರ ಕಾರಣದಿಂದಾಗಿ ಜನರು ಜನಸಾಮಾನ್ಯರು ಜೀವನ ಮಾಡುವುದು ಕಷ್ಟವಾಗಿದೆ. ಕೇಂದ್ರ ಸರಕಾರದವರು ಈ ಪ್ರಕಾರ ರೇಶನ್ ಅಂಗಡಿಗಳ ಮೂಲಕ ಜನಸಾಮಾನ್ಯರಿಗೆ ವಿತರಣೆ ಮಾಡುತ್ತಾ ಇದ್ದಾರೆ, ಇದರಲ್ಲಿ ದರವನ್ನು ಹೆಚ್ಚಿಗೆ ಮಾಡಿ ಈ ಎಲ್ಲಾ ರೇಷನ್ ಅಂಗಡಿಗಳನ್ನು ಎಲ್ಲಾ ಮುಚ್ಚಿಸಬೇಕೆಂಬ ಉದ್ದೇಶದಿಂದ ಕೇಂದ್ರ ಸಥಕಾರದವರು ಮಾಡುತ್ತಾ ಇದ್ದಾರೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಆ ಪ್ರಕಾರದ ಒತ್ತಡವು ಇವೊತ್ತು ಕೇಂದ್ರ ಸರಕಾರದ ಮೇಲೆ ಇವೊತ್ತು ಇದೆ. ಇವರು ಫುಡ್ಸಬ್ಸಿಡಿ ಎಷ್ಟು ಕೊಡುತ್ತಾರೆ? ಒಟ್ಟಿಗೆ ಒಂದೂವರೆ ಎರಡು ಪರ್ಸೆಂಟಿಗಿಂತ ಜಾಸ್ತಿ ಇರಲಾರದು. ಆದರೂ ಕೂಡ ಕೊಟ್ಟ ಸಬ್ಸಿಡಿಯನ್ನು ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳನ್ನು ವಿತ್ ಡ್ರಾ ಮಾಡಿ ಆ ಮೂಲಕ ದೊಡ್ಡ ಗಧಾಪ್ರಹಾರವನ್ನು ಜನಸಾಮಾನ್ಯರ ಮೇಲೆ ಮಾಡಿದ್ದಾರೆ. ಇವೊತ್ತು ಪೆಟ್ರೋಲ್, ಡೀಸೆಲ್ ದರವನ್ನು ಹೆಚ್ಚು ಮಾಡಿದ್ದರ ಪರಿಣಾಮವೇನು? ಇದರಿಂದಾಗಿ ಟ್ರಾನ್ಸ್ಪೋರ್ಟಿನ ದರ ಹೆಚ್ಚಾಗುತ್ತದೆ. ಇದನ್ನೆಲ್ಲಾ ಸಹಿಸಿಕೊಳ್ಳುವ ಶಕ್ತಿಯು ನಮ್ಮ ಬಡಜನರಿಗೆ ಇದೆಯೇ? ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಗೋಧಿ ದರದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಗೋಧಿ ದರ ಬಗ್ಗೆ ಹೇಳುತ್ತಾ ಕೇಂದ್ರ ಸರಕಾರದವರು ಪ್ರೊಕ್ಯೂರ್ಮೆಂಟ್ ಪ್ರೈಸ್ ಹೆಚ್ಚು ಮಾಡಿದ್ದಾರೆ ಎಂದು ಹೇಳಿದರು. ಅದರ ಲಾಭ ಯಾರಿಗೆ ಆಗಿದೆ?

ಇದು ಕೇವಲ ಸೀಮಿತವಾಗಿ ಕೆಲವೇ ಕೆಲವು ರೈತರಿಗೆ ಮಾತ್ರ ಲಾಭವಾಗಿದೆ. ನಾನು ತಿಳಿದುಕೊಂಡ ಪ್ರಕಾರ ಡಾ: ಮನಮೋಹನ್ ಸಿಂಗ್‌ರವರ ಲಿಬರಲೈಸ್ ಪಾಲಿಸಿ ಏನಿದೆ, ಆ ಪಾಲಿಸಿ ಪ್ರಕಾರ ಅದು ಕೇವಲ ಸೂಪರ್‌ಫೈನ್ ಕ್ವಾಲಿಟಿ ಅಕ್ಕಿ ಗೋಧಿಯನ್ನು ಬೆಳೆಸಬೇಕು, ಅದನ್ನು ನಾವು ಎಕ್ಸ್‌ಪೋರ್ಟ್ ಮಾಡಬೇಕು. ಹಾಗೆಯೇ ದೇಶದಲ್ಲಿ ರೇಷನ್ ಅಂಗಡಿಗಳ ಮುಖಾಂತರ ಇಂಪೋರ್ಟ್ ಮಾಡಿ, ಬೇರೆ ರಾಷ್ಟ್ರಗಳಿಂದ ಇಂಪೋರ್ಟ್ ಮಾಡಿ, ಒಳ್ಳೆಯ ಕ್ವಾಲಿಟಿ ಅಕ್ಕಿಗೋಧಿಯನ್ನು ಕೊಡುವ ವ್ಯವಸ್ಥೆಯನ್ನು ನಾವು ಮಾಡಬೇಕು.

ಇದು ಕೇಂದ್ರ ಸರಕಾರದ ಒಂದು ನೀತಿಯೇ ಎಂದು ಇದರಿಂದ ಭಯ ಬರುತ್ತದೆ. ಇಡೀ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ಅಬಾಲಿಷ್ ಆಗಿ ಮಾರ್ಕೆಟ್ ರೇಟ್ ಅದೇ ಆದರೆ off-take in the Public Distribution system will be less. ಇದೇ ಉದ್ದೇಶದಿಂದ ಸರಕಾರ ಕೆಲಸ ಮಾಡುತ್ತಿದೆ. ಆದರೆ ರಾಜ್ಯದಲ್ಲಿಯೂ ಸಹ ನಮ್ಮ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ನಲ್ಲಿ ತೊಂದರೆ ಇದೆ ಅದು ಸರಿ ಇಲ್ಲ ಇದನ್ನು ಸರಕಾರ ಒಪ್ಪಿಕೊಳ್ಳಬೇಕಾಗುತ್ತದೆ. ಕರಪ್ಷನ್ ಇದೆ, ಲೀಕೇಜಿದೆ, ಅದನ್ನು ಇಂಪ್ರೂವ್ ಮಾಡುವ ಬಗ್ಗೆ ಕ್ರಮ ತೆಗೆದು ಕೊಂಡಿಲ್ಲ. ಪ್ರತಿಯೊಂದು ರಾಜ್ಯದವರೂ ಈ ಸಿಸ್ಟಂ ಅನ್ನು ಇಂಪ್ರೂವ್ ಮಾಡಲಿಕ್ಕೆ ಪ್ರಯತ್ನ ಮಾಡಿದರೆ, ನಿಜವಾಗಿಯೂ ಬೆಲೆಯೇರಿಕೆ ಮಾಡುವ ಅವಶ್ಯಕತೆಯಿಲ್ಲ. ಹಾಗಾಗಿ ಪಕ್ಷಾತೀತವಾಗಿ ನಾವೆಲ್ಲರೂ ಇದನ್ನು ಕಂಡೆಮ್ ಮಾಡಬೇಕೆಂದು ವಿನಯ ಪೂರ್ವಕವಾಗಿ ವಿನಂತಿಸುತ್ತೇನೆ. ರಾಜ್ಯದ ಬಡಜನರ ಮಧ್ಯಮ ವರ್ಗದವರ ಸಾಮಾನ್ಯ ಜನರ ದೃಷ್ಟಿಯಿಂದ ಇದರ ಬಗ್ಗೆ ಸಬ್ಸಿಡೈಸ್ ಮಾಡಲಿಕ್ಕೆ ಬನ್ನಿ ಮತ್ತು ಕೇಂದ್ರದ ಮೇಲೆ ಒತ್ತಡ ತಂದು ಬೆಲೆ ಏರಿಕೆಯನ್ನು ವಾಪಸ್ ತೆಗೆದುಕೊಳ್ಳಬೇಕಂದು ಒತ್ತಾಯಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾವು ತಂದಿರತಕ್ಕಂತಹ ನಿಲುವಳಿ ಸೂಚನೆಗೆ ಮೇಲೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಈ ನಿಲುವಳಿ ಸೂಚನೆಗೆ ತಾವು ಚರ್ಚೆ ಮಾಡಲು ಒಪ್ಪಿ ಅನುಮತಿ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಂಡು ಒಂದೆರಡು ವಿಚಾರಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರಕಾರದವರು ಅನುಸರಿಸುತ್ತಿರತಕ್ಕಂತಹ ಕ್ರಮ ಏನು ಇದೆ ಇದು ನಿಜಕ್ಕೂ ಬಹಳ ಶೋಚನೀಯವಾಗಿರತಕ್ಕಂತಹ ದುರ್ದೈವದ ಸಂಗತಿ. ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಕಳೆದ ಸಾರಿ ಬಡ್ಜೆಟ್ಟ ಅನ್ನು ಮಂಡನೆ ಮಾಡಲಿಕ್ಕೆ ಮುಂಚೆ ಇದೇ ರೀತಿ ಕೇಂದ್ರ ಸರಕಾರ ಪೆಟ್ರೋಲ್, ಡೀಸೆಲ್ ಬೆಲೆಯನ್ನು, ಗೋಧಿ, ಅಕ್ಕಿ, ಬೆಲೆಯನ್ನು ಜಾಸ್ತಿ ಮಾಡಿದರು. ಈಗ ಮತ್ತೆ ಫೆಬ್ರವರಿ 21 ಅಥವಾ 27 ರಂದು ಸರಕಾರದವರು ಬಡ್ಜೆಟ್ಟನ್ನು ಮಂಡನೆ ಮಾಡುವ ಮುನ್ನ ಮತ್ತೊಮ್ಮೆ ಬೆಲೆಗಳನ್ನು 2 ತಿಂಗಳಿನಿಂದ ಜಾಸ್ತಿ ಮಾಡಿಕೊಂಡು ಬಂದಿದ್ದಾರೆ. ಇವರಲ್ಲಿ ಆಗತಕ್ಕಂತಹ ಡೆಫಿಸಿಟ್ ಅನ್ನು ಮುಚ್ಚಿ ಕೊಳ್ಳಲಿಕ್ಕೆ ಆ ಒಂದೇ ಕಾರಣದಿಂದ, ಸಾಮಾನ್ಯ ಜನಗಳನ್ನು ರಿಸೋರ್ಸ್ ಮೊಬಿಲೈಸ್ ಮಾಡಿಕೊಳ್ಳತಕ್ಕಂತಹ ಕೇಂದ್ರ ಸರಕಾರದ ಕ್ರಮವೇನು ಇದೆ ಇದನ್ನು ಖಂಡಿಸಬೇಕೆಂದು ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆ. ನನಗೆ ಗೊತ್ತಿದ್ದ ಹಾಗೆ ರಾಜ್ಯ ಸರಕಾರದವರು ಇದರ ಬಗ್ಗೆ ಹೆಚ್ಚಿನ ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲದಿರಬಹುದು. ದುರ್ದೈವದಿಂದ ಲೋಕಸಭೆಯಲ್ಲಿ ಇದರ ಬಗ್ಗೆ ಯಾರು ಚರ್ಚೆ ಮಾಡಬೇಕು ಮತ್ತು ಅದು ಹೇಗೆ ಪರಿಣಾಮಕಾರಿಯಾಗಿ ಚರ್ಚೆಯಾಗಬೇಕು ಆ ರೀತಿಯಲ್ಲಿ ಈ ಗಹನವಾದ ವಿಚಾರ ಬಗ್ಗೆ ಚರ್ಚೆ ಆಗುತ್ತಿಲ್ಲವೇನೋ ಎನ್ನುವ ಸಂಶಯ ಅನೇಕ ಸಾರಿ ನಮಗೆ ಬರುತ್ತಿದೆ. ಇದನ್ನು ಕೇಂದ್ರ ಸರಕಾರದವರು ಲೋಕಸಭೆಯಲ್ಲಿ ಮಾಡಲೀ ಎನ್ನತಕ್ಕಂತಹ ಪ್ರಶ್ನೆಯನ್ನು ಅನೇಕ ಸಂದರ್ಭದಲ್ಲಿ ಅನೇಕ ಮಾನ್ಯ

ಸದಸ್ಯರು ಹೇಳುತ್ತಾರೆ. ಮಾನ್ಯ ಹಲಗೇಗೌಡರು ಇದು ಕೇಂದ್ರಕ್ಕೆ ಸಂಬಂಧಪಟ್ಟಿದ್ದುದು ನಾವೇಕೆ ಇದನ್ನೆ ಚರ್ಚೆ ಮಾಡಬೇಕೆಂದು ಹೇಳಿದರು. ನಾನು ಒಪ್ಪಿಕೊಳ್ಳುತ್ತೇನೆ ಆದರೆ ನಮಗೆ ತೊಂದರೆಯಾಗುತ್ತಿದೆ....

ಶ್ರೀ ಕೆ.ಹೆಚ್. ರಂಗನಾಥ್ : ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡಲಿಕ್ಕೆ ಬರುವುದಿಲ್ಲ ಬೇರೆ ರೂಪದಲ್ಲಿ ಚರ್ಚೆ ಮಾಡಬಹುದು ಹಾಗೆ ಎಂದು ಕ್ರಿಯಾಲೋಪ ಎತ್ತಿದರು. ಬೆಲೆ ಏರಿಕೆ ಬಗ್ಗೆ ರೂಲ್ 68ರಲ್ಲಿ ತೆಗೆದುಕೊಂಡರೂ ಆಗುತ್ತದೆ ಅಧ್ಯಕ್ಷರು ಅಪ್ಪಣೆ ಕೊಡಬೇಕು. ಆ ರೂಪದಲ್ಲಿ ಮಾನ್ಯ ಹಲಗೇಗೌಡರ ಕ್ರಿಯಾಲೋಪ ಎತ್ತಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದನ್ನು ಅಧ್ಯಕ್ಷರಿಗೇ ಬಿಡುತ್ತೇನೆ. ಒಂದು ತೊಂದರೆ ಆಗುತ್ತದೆ. ಜನಸಾಮಾನ್ಯರು, ಮಧ್ಯಮ ವರ್ಗದವರು ಇತರರು ಎರಡು- 2,500 -3,000 ಸಂಬಳ ತೆಗೆದುಕೊಳ್ಳತಕ್ಕಂತಹ ಜನ ಮತ್ತು ದಿನಕ್ಕೆ 25 ರಿಂದ 40 ರೂಪಾಯಿ ಸಂಪಾದನೆ ಮಾಡುವವರು ಕೂಲಿ ಮಾಡತಕ್ಕಂತಹ ಜನಗಳ ಸ್ಥಿತಿ ಬಗ್ಗೆ ವಿಚಾರ ಮಾಡಬೇಕು. ಅಕ್ಕಿ ಗೋಧಿ ಮತ್ತೆ ಜೋಳವನ್ನು ಸೀಮೆಎಣ್ಣೆ ಡೀಸಲ್ ಅನ್ನು ಸಕ್ಕರೆ, ಬೆಲ್ಲವನ್ನು ಸಾಮಾನ್ಯರು ಉಪಯೋಗಿಸುತ್ತಾರೆ. ಆದರೆ ಕಳೆದ 4 ವರ್ಷಗಳಲ್ಲಿ ಸರಕಾರದವರು ಇವುಗಳ ಬೆಲೆಯನ್ನು ಎಷ್ಟು ಜಾಸ್ತಿ ಮಾಡಿದ್ದಾರೆಂಬ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಬಹಳ ದೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : ಜೋಳ, ರಾಗಿ, ಬೆಳೆ ಬಹಳ ಕಡಿಮೆ ಇದೆ. ರೈತರು ಮಾರತಕ್ಕಂತಹ ದರ ಕೂಡ ಕಡಿಮೆ ಇದೆ ಅದೇ ರೀತಿ ತೆಗೆದುಕೊಳ್ಳತಕ್ಕಂತಹ ಬೆಲೆ ಕೂಡ ಕಡಿಮೆ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ರೈತರು ಮಾರತಕ್ಕಂತಹ ಸಂದರ್ಭದಲ್ಲಿ ಕಡಿಮೆ ಇದೆ, ಅದೇ ತೆಗೆದುಕೊಂಡು ತಿನ್ನಬೇಕೆಂದರೆ ಜಾಸ್ತಿ ಬೆಲೆ. ಮಾರಾಟ ಮಾಡಬೇಕೆಂದರೆ ಕಡಿಮೆ ಬೆಲೆ ಅದೇ ಬಂದಿರತಕ್ಕಂತಹ ತೊಂದರೆ.

ಶ್ರೀ ಕೆ.ಹೆಚ್. ರಂಗನಾಥ್ : ಹಳ್ಳಿಗಾಡಿನಲ್ಲಿ ಜೋಳದ ಬೆಲೆ ಬಹುಪಾಲು ಭಾಗ ಕಡಿಮೆ. ಉತ್ತರ ಕರ್ನಾಟಕದಲ್ಲಿ ಹಳೆಯ ಮೈಸೂರಿನ ಕೆಲವು ಜಿಲ್ಲೆಯಲ್ಲಿ ಜೋಳ ಬಳಸುತ್ತಾರೆ ಜೋಳದ ಬೆಲೆ ರೈತನಿಗೆ ಕೊಡುವುದು ಅತ್ಯಂತ ಕಡಿಮೆ ಇದೆ. ಅದೇ ರೀತಿ ಬಳಕೆದಾರ ಕೊಳ್ಳುವುದೂ ಹೆಚ್ಚು ಬೆಲೆಯೇನೂ ಇಲ್ಲ. ಹೆಚ್ಚಾಗಿರುವುದು ಅಕ್ಕಿ ಗೋಧಿ ಬೆಲೆ.

ಶ್ರೀ ಅರ್.ವಿ. ದೇಶಪಾಂಡೆ : ಇದರ ಲಾಭವನ್ನು ಮಧ್ಯವರ್ತಿಗಳು ತೆಗೆದುಕೊಳ್ಳುತ್ತಿದ್ದಾರೆ. ರೈತರಿಗೂ ಇದರಿಂದ ಲಾಭ ಇಲ್ಲ, ಸಾಮಾನ್ಯ ಜನರಿಗೂ ಇಲ್ಲ. ಈ ನಿಮ್ಮ ಕೇಂದ್ರ ಸರ್ಕಾರದ ನೀತಿಯಿಂದ ಮಧ್ಯವರ್ತಿಗಳಿಗೆ ಲಾಭ ಹೋಗುತ್ತಿದೆ. ಅದನ್ನು ತಡೆಯುವುದಕ್ಕೆ ಕೇಂದ್ರ ಸರ್ಕಾರ ಪ್ರಯತ್ನ ಮಾಡಬೇಕಾಗಿತ್ತು. ಇದು ನಿಮಗೆ ಕಷ್ಟವಾಯಿತು. ಫೈನಾನ್ಸ್ ಮಿನಿಸ್ಟರ್ ಯಾರು? ಚೀಫ್ ಮಿನಿಸ್ಟರ್ ಯಾರು? As Finannce Minister, you know the non-plan expenditure will go up. ಪೆಟ್ರೋಲ್, ಡೀಸೆಲ್ ಹೆಚ್ಚಾಗಿದೆ, ಇದರಿಂದ ನಿಮ್ಮ ಅಭಿವೃದ್ಧಿ ಕೆಲಸದ ಮೇಲೆ ಎಷ್ಟು ಪರಿಣಾಮವಾಗುತ್ತದೆ, ಇದರ ಬಗ್ಗೆ ತಾವು ವಿಚಾರ ಮಾಡಬೇಕು. ಪೆಟ್ರೋಲ್ ಡೀಸಲ್ ಕನಸಂಪ್ಷನ್ ಮಾಡುವವರು ಹೆಚ್ಚಿಗೆ ಯಾರು? ಗೌರ್ಮೆಂಟ್ ಅಲ್ಲ, ಇವುಗಳ ಹೆಚ್ಚಳದಿಂದ ನಿಮ್ಮ ಅಭಿವೃದ್ಧಿ ಕೆಲಸದ ಮೇಲೆ ಪರಿಣಾಮವಾಗುತ್ತದೆ. ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಇದು ಕೇವಲ ಕೇಂದ್ರ ಸರ್ಕಾರದ ಒತ್ತಡದಿಂದ ಆಗಿದ್ದರೂ ರಾಜ್ಯಕ್ಕೆ ರಾಜ್ಯದ ಅಭಿವೃದ್ಧಿ ಮೇಲೆ ಸಾಕಷ್ಟು ಪರಿಣಾಮ ಆಗುತ್ತದೆ, ಸಾಮಾನ್ಯ ಜನರ ಮೇಲೆ ಆಗುತ್ತದೆ. ಈ ದೃಷ್ಟಿಯಿಂದ ನಾವು ಇವತ್ತು ಅಡ್ಜರ್ನ್ಮೆಂಟ್ ಮೋಷನನ್ನು ತಂದಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕು ಎಂದು ತಮ್ಮ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಒಂದೆರಡು ವಿಚಾರಗಳನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇದೇ ರೀತಿ ಪ್ರತಿಯೊಂದು ವಿಚಾರದಲ್ಲೂ ಕೇಂದ್ರ ಸರ್ಕಾರದವರು ಬೆಲೆಗಳನ್ನು ಜಾಸ್ತಿ ಮಾಡಿ ಕೊಂಡೆ ಹೋಗುವುದಾದಲ್ಲಿ ರಾಜ್ಯಸರ್ಕಾರದವರು ನಮ್ಮ ಕೈಯಲ್ಲಿ ಏನೂ ಆಗುವುದಿಲ್ಲ, ಕೇಂದ್ರ ಸರ್ಕಾರದವರು ಮಾಡಿದ್ದಾರೆ, ನಾವೇನು ಮಾಡುವುದಕ್ಕಾಗುವುದಿಲ್ಲ, ನಮ್ಮ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಹೆಚ್ಚಾಗುತ್ತದೆ, ನಮ್ಮ ಹತ್ತಿರ ರಿಸೋರ್ಸಸ್ ಇಲ್ಲ, ನಾವು ದುಡ್ಡನ್ನು ಕೂಡಿಸಿಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿ ಹತಾಶರಾದರೆ ಪ್ರಯೋಜನವಿಲ್ಲ. ಒಂದು ಕಾಲ ಬರುತ್ತದೆ, ಪ್ರತಿಯೊಂದು ರಾಜ್ಯ ಸರ್ಕಾರವೂ ಸಹಿತ ಕೇಂದ್ರ ಸರ್ಕಾರದ ಮೇಲೆ ಯುದ್ಧವನ್ನು ಸಾರಬೇಕಾದಂಥ ಸಂದರ್ಭ ದೂರ ಇಲ್ಲಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಡೀಸಲ್ ಬೆಲೆ ಕಡಿಮೆಯಾಗಿದೆ. ಪೆಟ್ರೋಲ್ ಬೆಲೆ ಕಡಿಮೆಯಾಗಿದೆ. ಹಾಗಾದರೆ ಕೇಂದ್ರ ಸರ್ಕಾರದವರು ತಮ್ಮಲ್ಲಿರತಕ್ಕಂಥ ತಪ್ಪುಗಳನ್ನು ಮುಚ್ಚಿ ಕೊಳ್ಳುವುದಕ್ಕೆ ತಮ್ಮ ವಿಫಲವಾಗಿರತಕ್ಕಂಥ ಆರ್ಥಿಕ ನೀತಿ ಮತ್ತು ಆರ್ಥಿಕ ರಂಗದಲ್ಲಿ ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮಗಳು ತಮ್ಮ ಆಡಳಿತದ ವಿಫಲತೆಗಳನ್ನು ಮುಚ್ಚುವುದಕ್ಕೆ ಈ ದೇಶದ ಜನಸಾಮಾನ್ಯರ ಮೇಲೆ ಈ ದೊರೆಯನ್ನು ಹಾಕತಕ್ಕಂಥದ್ದು ಸರಿಯೇ? ಹಾಗಾದರೆ ರಾಜ್ಯಸರ್ಕಾರದವರು ನಾವು ಹತಾಶರಾಗಿದ್ದೇವೆಯೇ? ನಮ್ಮ ಎಂಟೈರ್ ಫೆಡರಲ್ ಸ್ಟ್ರಕ್ಚರ್ ಏನಿದೆ, ಇದನ್ನೇ ಅಲುಗಾಡಿಸತಕ್ಕಂಥ ಒಂದು ಪರಿಸ್ಥಿತಿ ಬರುತ್ತದೆ. ಅನೇಕ ಸಂದರ್ಭದಲ್ಲಿ ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಂಬಂಧದ ವಿಚಾರದಲ್ಲೂ ಸಹಾ ಬರುತ್ತದೆ. ಯಾವ ರೀತಿಯ ಸಂಬಂಧವನ್ನು ನಾವು ಇಟ್ಟುಕೊಳ್ಳಬೇಕು. ನವು ಸಂವಿಧಾನದ ಪ್ರಕಾರವಾಗಿ ಎಲ್ಲಾ ನಡೆದುಕೊಂಡು ಹೋಗುತ್ತಿರಬೇಕು ಎಂದರೆ ನೀವು ದೆಹಲಿಯಲ್ಲಿ ಕುಳಿತುಕೊಂಡು ಐದು ವರ್ಷಕ್ಕೆ ಒಂದು ಸಾರಿ ಯಾರದೋ ಹೆಸರಿನಲ್ಲಿ ಯಾವುದೋ ಒಂದು ಇಷ್ಯೂ ಮೇಲೆ ಯಾವುದೋ ಒಂದು ಸಿಂಪತಿ ವೇವ್ ಮೇಲೆ ಚುನಾವಣೆಗಳನ್ನು ಗೆದ್ದುಕೊಂಡು ಸಾಮಾನ್ಯವಾಗಿ ಜನಗಳಿಗೆ ನೀವು ಈ ರೀತಿ ತೊಂದರೆಗಳನ್ನು ಕೊಟ್ಟುಕೊಂಡು ಕುಳಿತುಕೊಂಡರೆ ಈ ಕೇಂದ್ರಸರ್ಕಾರಕ್ಕೆ ನಾವೇನು ಹೇಳಬೇಕಾಗುತ್ತದೆ. ಈ ಒಂದು ಚರ್ಚೆಯನ್ನು ನಾವು ಬಹಳ ದೀರ್ಘವಾಗಿ ಈ ಸಂದರ್ಭದಲ್ಲಿ ಮಾಡಬೇಕಾಗುತ್ತದೆ. ಮೊನ್ನೆ ದಿನ ಕೆ.ಎಸ್.ಆರ್.ಟಿ.ಸಿ.ಯವರು ಒಂದು ಸಣ್ಣ ಪತ್ರಿಕಾ ಹೇಳಿಕೆಯನ್ನು ಕೊಟ್ಟು ಈ ವರ್ಷದಲ್ಲಿ ಸುಮಾರು 30 ಕೋಟಿ ರೂಪಾಯಿಯಷ್ಟು ಡೀಸಲ್ನ ಹೊರೆ ಸಾರಿಗೆ ಸಂಸ್ಥೆಯ ಮೇಲೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಮಾನ್ಯ ವೀರಪ್ಪಮೊಯಿಲಿಯರಿಗೆ ಜ್ಞಾಪಿಸಿಕೊಳ್ಳುವುದಕ್ಕೆ ಹೇಳುತ್ತೇನೆ, ತಾವು ಮುಖ್ಯಮಂತ್ರಿಗಳಾದ ತಕ್ಷಣ ಈ ಸದನಕ್ಕೆ ಒಂದು ಭರವಸೆಯನ್ನು ಕೊಟ್ಟಿರಿ. ನಾಲ್ಕು ತಿಂಗಳಲ್ಲಿ ನಾನು ಸಾರಿಗೆ ಸಂಸ್ಥೆಯನ್ನು ಸರಿಮಾಡುತ್ತೇನೆ, ಅದಕ್ಕೆ ಪರಿಹಾರವನ್ನು ಕಂಡು ಹಿಡಿಯುತ್ತೇನೆ ಎಂದು ಹೇಳಿದ್ದೀರಿ. ಒಂದು ಸದನದ ಸಮಿತಿಯನ್ನು ಮಾಡಿದ್ದೀರಿ ಅಷ್ಟೆ. ಸದನದ ಸಮಿತಿಯವರು ಎಲ್ಲಾ ಕಡೆ ಹೋಗಿ ಬಂದು ಒಂದು ವರದಿಯನ್ನು ನಿಮಗೆ ಕೊಡುವವರಿದ್ದಾರೆ. ನಮ್ಮ ಸದನದ ಸಮಿತಿಯಿಂದ ಏನೂ ಉಪಯೋಗ ಆಗುತ್ತಿಲ್ಲ. ಇವರು ಒಂದು ಪೀಠಿಕೆಯನ್ನು ಈಗಾಗಲೇ ಹಾಕಿದ್ದಾರೆ. ಏನೆಂದರೆ ಡೀಸೆಲ್ ಬೆಲೆಯನ್ನು ಕೇಂದ್ರದವರು ಜಾಸ್ತಿ ಮಾಡಿದ್ದಾರೆ, ನಮಗೆ 30 ಕೋಟಿ ರೂಪಾಯಿ ಜಾಸ್ತಿ ಅಡಿಷನಲ್ ಬರ್ಡನ್ ಆಗುತ್ತಿದೆ, ಈ ವರ್ಷ ಸುಮಾರು 120 ರಿಂದ 150 ಕೋಟಿ ರೂಪಾಯಿ ಸಾರಿಗೆ ಸಂಸ್ಥೆಯಲ್ಲಿ ನಷ್ಟವಾಗುತ್ತದೆ. ಅದರಿಂದಾಗಿ ಮತ್ತೆ ಬೆಲೆಗಳನ್ನು ಜಾಸ್ತಿ ಮಾಡಬೇಕಾಗುತ್ತದೆಂದು. ಯಾವ ರೀತಿ ಪರಿಣಾಮವಾಗುತ್ತದೆ ಎನ್ನುವುದನ್ನು ನಿಮಗೆ ತಿಳಿಸುವುದಕ್ಕೋಸ್ಕರ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಇವತ್ತು ಎಲ್ಲಾ ಟ್ರಾನ್ಸ್‌ಪೋರ್ಟೇಷನ್ ಕಾಸ್ಟ್ ಕೂಡ

ಜಾಸ್ತಿಯಾಗುತ್ತಿದೆ. ನಿನ್ನೆಯ ದಿನ ಪ್ರಣಬ್ ಕುಮಾರ್ ಮುಖರ್ಜಿಯವರೇ ಒಪ್ಪಿಕೊಂಡಿದ್ದಾರೆ. ಈ ಒಂದು ಆರ್ಥಿಕ ನೀತಿಯಿಂದಾಗಿ ನಮ್ಮ ದೇಶದಲ್ಲಿ ನಿರುದ್ಯೋಗ ಜಾಸ್ತಿಯಾಗುತ್ತದೆ ಎನ್ನುವುದನ್ನು ಅವರು ಒಪ್ಪಿಕೊಂಡಿದ್ದಾರೆ. ನಾನು ಮೆಚ್ಚುತ್ತೇನೆ. ಅವರು ಬಹಿರಂಗವಾಗಿ ಕೇಂದ್ರಸರ್ಕಾರದಲ್ಲಿದ್ದು ಆ ಮಾತನ್ನು ಹೇಳಿದ್ದಾರೆ. ಆರ್ಥಿಕ ನೀತಿಯನ್ನು ಅವರು ಹೇಳಲಿಲ್ಲ, ತಮ್ಮ ಸರ್ಕಾರದ ಆರ್ಥಿಕ ನೀತಿಯನ್ನು ಅವರೇ ಟೀಕೆ ಮಾಡಿ ಈ ಮಾತನ್ನು ಹೇಳಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಆರ್ಥಿಕ ನೀತಿಯನ್ನು, ಲಿಬರಲೈಸೇಷನ್ ಪಾಲಿಸಿಯನ್ನು ಬಹಳ ಮುಕ್ತ ಕಂಠದಿಂದ ಹೊಗಳುತ್ತಿದ್ದೀರಿ. ತಾವು ಅಂದರೆ ನಿಮ್ಮ ಪಕ್ಷದವರು ಹೊಗಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಯಾವತ್ತೂ ಹೊಗಳಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಗ್ಯಾಟ್ ಡೆಂಕಲ್ ಬಿಟ್ಟು ಬಿಡಿ. ಅಜಸ್ಟ್ಮೆಂಟ್ ಪಾಲಿಸಿ, ಲಿಬರಲೈಸೇಷನ್ ಪಾಲಿಸಿಯನ್ನು ತಾವೇ ಹೊಗಳಿದ್ದೀರಿ. ಹೊಗಳಲಿಲ್ಲ ಎಂದರೆ ಹೇಗೆ.?

ಶ್ರೀ ಪಿ.ಜಿ.ಆರ್. ಸಿಂಧ್ಯ : ಜನತಾ ದಳದವರನ್ನು ಬಿಜೆಪಿಯವರು ಎಂದು ಮಿಸ್ಟೇಕ್ ಮಾಡಿಕೊಂಡಿದ್ದಾರೇನೋ ನನಗೆ ಏನೂ ಗೊತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಅವರನ್ನು ಮಿಸ್ಟೇಕ್ ಮಾಡಿಕೊಳ್ಳುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಬೇರೆ. ಮಾನ್ಯ ಸಿಂಧ್ಯಾರವರು ಬೇರೆ. ನಾವು ಮಿಸ್ಟೇಕ್ ಮಾಡಿಕೊಂಡರೂ ಅವರು ಸೇರುವುದಿಲ್ಲ.

ಶ್ರೀ ಬಿ.ಎಸ್ ಯಡಿಯೂರಪ್ಪ : ಸರಿ ಮಾಡಿ ಒಪ್ಪಿಕೊಂಡರೂ ಜಗತ್ತು ನಂಬುವುದಿಲ್ಲ. ಅವರು ಯಾರು ಎಂದು ಅವರಿಗೆ ಗೊತ್ತಿದೆ. ನಾವು ಯಾರೆಂದು ಜನರಿಗೆ ಗೊತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್ : ನಮಗೆ ಜನತಾ ದಳ, ಬಿಜೆಪಿ, ಎಂದರೆ ಎಣ್ಣೆ ಸೀಗೆಕಾಯಿ ಇದ್ದ ಹಾಗೆ, ತಾವು ಒಪ್ಪುತ್ತೀರಾ?

ಶ್ರೀ ಸಿ.ಬೈರೇಗೌಡ : ನೀವು ಹೀಗೆ ಹೇಳಬಾರದು.

ಶ್ರೀ ಕೆ.ಹೆಚ್. ರಂಗನಾಥ್ : ನೀವು ಬಾಯಿ ಚಟಕ್ಕೆ ಹೇಳುತ್ತಾ ಹೋಗುತ್ತಿದ್ದೀರಿ, ನನಗೆ ಗೊತ್ತಿದೆ. ಕಾರವಾರದಲ್ಲಿ ಏನು ಭಾಷಣ ಮಾಡಿದರು ನಾನು ಅಲ್ಲಿಯೇ ಇದ್ದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ನರಸಿಂಹರಾಯರು, ಬಿಜೆಪಿ ಅಧ್ಯಕ್ಷರು, ಮಾನ್ಯ ಅಡ್ವಾನಿಯವರು ಕಾಂಗ್ರೆಸ್ ಅಧ್ಯಕ್ಷರು.

Sri M. Veerappa Moily : I have a serious objection for this. ಏನು ಮಾತನಾಡುತ್ತೀರಿ? ವಿ.ಪಿ. ಸಿಂಗ್ ಯಾರು ಎಂದು ನಾವು ಹೇಳುವುದಕ್ಕೆ ತಯಾರು ಇದ್ದೇವೆ. ದಯಮಾಡಿ ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ದೇಶದ ಪ್ರಧಾನಿ ಅವರು ಬಿಜೆಪಿ ಅಧ್ಯಕ್ಷರವರಿಂದ ಕೆಲಸ ನಿರ್ವಹಿಸುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಬನ್ನಿಕೋಡ್ ಅವರು ಗೆದ್ದ ಹೊಸದರಲ್ಲಿ ಈ ತರಹ ಮಾತನಾಡುತ್ತಿದ್ದರು. ಏನೋ ಹೊಸದಾಗಿ ಬಂದಿದ್ದಾರೆ ಈ ರೀತಿ

ಮಾತನಾಡುತ್ತಾರೆ ಎಂದು ತಿಳಿದಿದ್ದೆವು. ಈಗ ಇನ್ನು ಚುನಾವಣೆ ಐದಾರು ತಿಂಗಳು ಇದೆ. ಈಗ ಈ ತರಹ ಧಾಟಿ ಆದರೆ ಏನು ಹೇಳಬೇಕು.

SRI M. VEERAPPA MOILLY : This has to be withdrawn. I don't tolerate a statement which is not befitting the Member.

ಅಧ್ಯಕ್ಷರು : ಬನ್ನಿಕೋಡ್ರವರೇ, ಕುಳಿತುಕೊಳ್ಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾನು ಪುನಃ ಹೇಳುತ್ತಿದ್ದೇನೆ. ಈ ರಾಷ್ಟ್ರದ ಪ್ರಧಾನಿಯವರು ಇವತ್ತು ಬಾಬರಿ ಮಸೀದಿಯನ್ನು ಕೆಡುವುತ್ತಿದ್ದಾಗ ಕಣ್ಣೆದುರಿಗೇ ನೋಡುತ್ತಾ ಇದ್ದರು. ಕಾನೂನು ಸುವ್ಯವಸ್ಥೆ ಮಾಡಲಿಲ್ಲ, ರಕ್ಷಣೆ ಮಾಡಲಿಲ್ಲ. ಬಿಜೆಪಿ ಅಧ್ಯಕ್ಷರ ಜೊತೆ ಚಿತಾವಣೆಯಿಂದ ಇದು ಆಗಿದೆ ಎಂಬ ವಿಚಾರ ಜನತೆಗೆ ಗೊತ್ತಿದೆ. ಇದನ್ನು ನಾನು ದೃಢೀಕರಿಸುತ್ತೇನೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದು ರಾಷ್ಟ್ರದ ಜನರಿಗೆ ಮನವರಿಕೆ ಆಗಿದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಡಿಬೇಟ್ ಬೇಕಾದರೆ ಮಾಡೋಣ. ಯಾರು ಪ್ರಚೋದನೆ ಕೊಟ್ಟಿದ್ದಾರೆ ಅದನ್ನು ಹೇಳೋಣ. ಆದರೆ ತಾವು ರಾಜಕೀಯವಾಗಿ ಈ ವೇದಿಕೆಯನ್ನು ದಯಮಾಡಿ ಉಪಯೋಗ ಮಾಡಿಕೊಳ್ಳಬೇಡಿ. ಅದಕ್ಕೆ ಬೇರೆ ವೇದಿಕೆ ಇದೆ. ಆ ವಿಚಾರ ಬೇರೆ ಇದೆ, ನೀವು ಬನ್ನಿ ನಾವೂ ಬರುತ್ತೇವೆ. ಅಲ್ಲಿ ಮಾತನಾಡೋಣ. ಜನ ಏನು ಹೇಳುತ್ತಾರೆ ನೋಡೋಣ. ಆದರೆ ನಿಮಗೆ ಇದರಿಂದ ರಾಜಕೀಯ ಬಂಡವಾಳ ಏನೂ ಸಿಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹುಶಃ ಮಾನ್ಯ ಸ್ನೇಹಿತರಿಗೆ ಗೊತ್ತಿಲ್ಲ. ಈ ದೇಶದಲ್ಲಿ ಇರುವುದು ಎರಡು ಪಕ್ಷ. ಒಂದು ಕಾಂಗ್ರೆಸ್ ಪಕ್ಷ ಇನ್ನೊಂದು ವಿರೋಧ ಪಕ್ಷ ಎಂದು ಕರೆಸಿಕೊಳ್ಳುವ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಬೆಂಬಲವಾಗಿ ನಿಂತಿರುವ ಇನ್ನೊಂದು ವಿರೋಧ ಪಕ್ಷದ ಎರಡು ಸಂಘಟನೆ ಎಂದು ಚೆನ್ನಾಗಿ ಗುರುತು ಮಾಡೋಣ. ಮಾನ್ಯ ಸಿಂಧ್ಯಾರವರೂ ಒಪ್ಪಿದ್ದಾರೆ. ಹೊರಗಡೆ ಒಪ್ಪುತ್ತಾರೆ, ಇಲ್ಲಿ ಒಪ್ಪುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಎರಡು ಪಾರ್ಟಿ ಇರುವುದು. ಒಂದು ಆಡಳಿತ ಪಕ್ಷ ಕಾಂಗ್ರೆಸ್ ಮತ್ತು ಇನ್ನೊಂದು ವಿರೋಧ ಪಕ್ಷವಾಗಿ ಕುಳಿತು ಇತರೆ ಪಕ್ಷಗಳು ನಮ್ಮ ರೈತ ಸಂಘವರನ್ನು ಬಿಟ್ಟು ಇನ್ನೊಂದು ನಿಜವಾದ ವಿರೋಧ ಪಕ್ಷ ನಮ್ಮ ಬಿಜೆಪಿ. ಜಗತ್ತಿನ ಜನ ಹೇಳುತ್ತಾ ಇರುವುದು, ಸಿಂಧ್ಯಾರವರೂ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಯಡಿಯೂರಪ್ಪನವರು ಹೇಳುತ್ತಿರುವ ವಿಚಾರ ಏನು ಅಂದರೆ ನಾವು ದುರ್ಬೀನು ಇಟ್ಟುನೋಡಬೇಕು. ಮೊನ್ನೆ ನಡೆದಿರುವ ಚುನಾವಣೆಯಲ್ಲಿ ಜಗತ್ತಿನಲ್ಲಿ ನೀವು ಎಲ್ಲಿ ಹೋದಿರಿ ಪಾಪ. ನೀವು ಏನೂ ಕಾಣಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉತ್ತರ ಪ್ರದೇಶದಲ್ಲಿ 220 ಜನ ಠೇವಣಿ ಕಳೆದುಕೊಂಡಿದ್ದಾರೆ. ಈ ದೇಶವನ್ನು 46 ವರ್ಷ ಆಳಿದವರು. ನೀವು ಜನರಿಗೆ ಕ್ಷಮಾಪಣೆ ಕೇಳಿ ಅಧಿಕಾರ ಬಿಟ್ಟು ಮನೆಗೆ ಹೋಗಬೇಕಾಗಿತ್ತು. ಯಾರೋ ಮುಲಾಯಂ

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಹೈಕಮಾಂಡ್ ರೂಪಿಸಿದ ಸುಖ ಸಂಸಾರಕ್ಕೆ ಹನ್ನೆರಡು ಸೂತ್ರಗಳನ್ನು ತಂದು ಅಧಿಕಾರದಲ್ಲಿ ಉಳಿಯುವಂಥ ಪರಿಸ್ಥಿತಿ ನಿಮಗೆ ಬಂದೊದಗಿದೆ. ನೀವು ಮುಖ್ಯಮಂತ್ರಿಗಳಾಗಿ ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದಿರುವಂಥ ಉಸಿರು ಕಟ್ಟುವಂಥ ವಾತಾವರಣದಲ್ಲಿ ನಿಮ್ಮನ್ನು ಕುಳ್ಳರಿಸಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನೀವು ರೂಪಿಸಿದಂಥ 'ರಾಮಸೂತ್ರ' ಯಾವತ್ತೋ ಕಿತ್ತುಕೊಂಡು ಹೋಯಿತು, ನಾವು ರೂಪಿಸಿರುವಂಥ ಸೂತ್ರವಾದರೂ ಇನ್ನೂ ಉಳಿದು ಕೊಂಡಿದೆಯೆಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ : ಈ ಪ್ರಪಂಚಕ್ಕೆ ಇನ್ನು ನಮ್ಮ ಸೂತ್ರವೇ ಉಳಿಯುವುದು. ಈ ರಾಜ್ಯಕ್ಕೆ ಕಾಂಗ್ರೆಸ್ಸಿನ ಕೊನೆಯ ಮುಖ್ಯಮಂತ್ರಿ ನೀವೇ. ಇದರಲ್ಲಿ ಅನುಮಾನ ಪಡಬೇಡಿ. ನೀವೂ ನಿರ್ನಾಮವಾಗಿ ನಿಮ್ಮ ಕಾಂಗ್ರೆಸ್ ಪಕ್ಷವೂ ನಿರ್ನಾಮವಾಗಿ ಹೋಗುತ್ತದೆ. ಇನ್ನು ಈ ರಾಜ್ಯಕ್ಕೆ ಉಳಿಯುವುದು 'ರಾಮಸೂತ್ರ' ಮಾತ್ರ.

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಯಾವ್ಯಾವುದೋ ವಿಷಯ ಪ್ರಸ್ತಾಪವಾಗುತ್ತಿದೆ. ಇದರ ಬದಲು ಮೊನ್ನೆ ನಡೆದಂಥ ಚುನಾವಣೆಯಲ್ಲಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ, ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ ಏನಾಗಿದೆ ಎಂಬುದರ ಬಗ್ಗೆ ಎಲ್ಲರೂ ಗಮನ ಹರಿಸುವುದು ವಾಸಿ. ಅದರಲ್ಲೂ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಗಮನಹರಿಸಿದರೆ ವಾಸಿ, ಅವರಿಗೂ ಕ್ಷೇಮವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಈ ರಾಜ್ಯದ ಮುಖ್ಯಮಂತ್ರಿಯಾಗತಕ್ಕಂಥ ಹಗಲುಗನಸು ಕಾಣುತ್ತಿದ್ದಾರೆ. He is a Chief Minister in the waiting for the protocol. ನನ್ನದೇನೂ ತಕರಾರು ಇಲ್ಲ. ರಾಜ್ಯದ ಜನರು ಭಾರತೀಯ ಪಕ್ಷದ ವಿಚಾರಗಳನ್ನು ಒಪ್ಪಿ ಆ ಪಕ್ಷದ 122 ಜನ ಶಾಸಕರುಗಳನ್ನು ಗೆಲ್ಲಿಸಿ ಕಳುಹಿಸುವುದಾದರೆ ನನ್ನದೇನೂ ತಕರಾರು ಇಲ್ಲ. ಆದರೆ, ಅವರದು ಹಗಲುಗನಸಾಗಿರುವುದರಿಂದ ಅದು ಹಾಗೆಯೇ ಉಳಿಯುತ್ತದೆ. ನಾನು ಹೇಳಿದ ಮಾತನ್ನು ಯಾವ ಕಾಂಟೆಸ್ಟ್‌ನಲ್ಲಿ ಹೇಳಿದೆ ಎನ್ನುವುದನ್ನು ಅವರು ಮರೆತು 'ಸಿಂಧ್ಯರವರು ಒಪ್ಪುತ್ತಾರೆ, ಸಿಂಧ್ಯರವರು ಒಪ್ಪುತ್ತಾರೆ' ಎಂದು ಹೇಳಿದರೆ ನಾನು ಹೇಳುವುದೆಲ್ಲವನ್ನೂ ನೀವು ಒಪ್ಪುತ್ತೀರಾ? ನಾನು ಹೇಳುವುದೆಲ್ಲವೂ ಭಗವದ್ಗೀತೆಯಾದರೆ ನಾನು ಹೇಳುತ್ತೇನೆ: ಈ ರಾಷ್ಟ್ರದಲ್ಲಿ ಎರಡು ಪಕ್ಷಗಳ ಪದ್ಧತಿ ಬರಬೇಕು. ಕಮ್ಯೂನಲ್ ಫೋರ್ಸಸ್ ಮತ್ತು ಕ್ಯಾಪಿಟಲಿಸ್ಟ್ ಫೋರ್ಸಸ್ ಸಂಪೂರ್ಣ ನಿರ್ನಾಮ ಮಾಡಿ ಸಮಾಜವಾದ, ಜಾತ್ಯಾತೀತ ರಾಷ್ಟ್ರವನ್ನು ಕಟ್ಟಬೇಕೆಂದು ನಾನು ಹೇಳುತ್ತೇನೆ. ಇದಕ್ಕೆ ನೀವು ಒಪ್ಪುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಪೂರ್ಣವಾಗಿ ಒಪ್ಪುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಒಪ್ಪುವುದಿಲ್ಲ, ನಿಮ್ಮದೆಲ್ಲಾ ಬರೀ ಆಷಾಢ ಭೂತಿತನ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು.)

ಅಧ್ಯಕ್ಷರು : ಚರ್ಚೆ ಇದೇ ರೀತಿ ಮುಂದುವರಿದರೆ ನಿಗಧಿತ ಕಾರ್ಯಕಲಾಪಗಳ ಪಟ್ಟಿಯಂತೆ ಸದನವನ್ನು ನಡೆಸುವುದಕ್ಕಾಗುವುದಿಲ್ಲ. ಕಾರ್ಯಕಲಾಪಗಳು ಬಹಳ ಇರುವುದರಿಂದ ಈಗ ಮಾನ್ಯ ಸದಸ್ಯರಾದ ಶ್ರೀ ಸಿಂಧ್ಯರವರು ಮಾತನಾಡುವುದಕ್ಕೆ ತಯಾರಿದ್ದಾರೆ, ಅವರ ನಂತರ ತಾವೆಲ್ಲರೂ ಮಾತನಾಡುವುದಕ್ಕೆ ಅವಕಾಶ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಹೈಕಮಾಂಡ್ ರೂಪಿಸಿದ ಸುಖ ಸಂಸಾರಕ್ಕೆ ಹನ್ನೆರಡು ಸೂತ್ರಗಳನ್ನು ತಂದು ಅಧಿಕಾರದಲ್ಲಿ ಉಳಿಯುವಂಥ ಪರಿಸ್ಥಿತಿ ನಿಮಗೆ ಬಂದೊದಗಿದೆ. ನೀವು ಮುಖ್ಯಮಂತ್ರಿಗಳಾಗಿ ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದಿರುವಂಥ ಉಸಿರು ಕಟ್ಟುವಂಥ ವಾತಾವರಣದಲ್ಲಿ ನಿಮ್ಮನ್ನು ಕುಳ್ಳರಿಸಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನೀವು ರೂಪಿಸಿದಂಥ 'ರಾಮಸೂತ್ರ' ಯಾವತ್ತೋ ಕಿತ್ತುಕೊಂಡು ಹೋಯಿತು, ನಾವು ರೂಪಿಸಿರುವಂಥ ಸೂತ್ರವಾದರೂ ಇನ್ನೂ ಉಳಿದು ಕೊಂಡಿದೆಯೆಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ : ಈ ಪ್ರಪಂಚಕ್ಕೆ ಇನ್ನು ನಮ್ಮ ಸೂತ್ರವೇ ಉಳಿಯುವುದು. ಈ ರಾಜ್ಯಕ್ಕೆ ಕಾಂಗ್ರೆಸ್ಸಿನ ಕೊನೆಯ ಮುಖ್ಯಮಂತ್ರಿ ನೀವೇ. ಇದರಲ್ಲಿ ಅನುಮಾನ ಪಡಬೇಡಿ. ನೀವೂ ನಿರ್ನಾಮವಾಗಿ ನಿಮ್ಮ ಕಾಂಗ್ರೆಸ್ ಪಕ್ಷವೂ ನಿರ್ನಾಮವಾಗಿ ಹೋಗುತ್ತದೆ. ಇನ್ನು ಈ ರಾಜ್ಯಕ್ಕೆ ಉಳಿಯುವುದು 'ರಾಮಸೂತ್ರ' ಮಾತ್ರ.

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಯಾವ್ಯಾವುದೋ ವಿಷಯ ಪ್ರಸ್ತಾಪವಾಗುತ್ತಿದೆ. ಇದರ ಬದಲು ಮೊನ್ನೆ ನಡೆದಂಥ ಚುನಾವಣೆಯಲ್ಲಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ, ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ ಏನಾಗಿದೆ ಎಂಬುದರ ಬಗ್ಗೆ ಎಲ್ಲರೂ ಗಮನ ಹರಿಸುವುದು ವಾಸಿ. ಅದರಲ್ಲೂ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಗಮನಹರಿಸಿದರೆ ವಾಸಿ, ಅವರಿಗೂ ಕ್ಷೇಮವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಈ ರಾಜ್ಯದ ಮುಖ್ಯಮಂತ್ರಿಯಾಗತಕ್ಕಂಥ ಹಗಲುಗನಸು ಕಾಣುತ್ತಿದ್ದಾರೆ. He is a Chief Minister in the waiting for the protocol. ನನ್ನದೇನೂ ತಕರಾರು ಇಲ್ಲ. ರಾಜ್ಯದ ಜನರು ಭಾರತೀಯ ಪಕ್ಷದ ವಿಚಾರಗಳನ್ನು ಒಪ್ಪಿ ಆ ಪಕ್ಷದ 122 ಜನ ಶಾಸಕರುಗಳನ್ನು ಗೆಲ್ಲಿಸಿ ಕಳುಹಿಸುವುದಾದರೆ ನನ್ನದೇನೂ ತಕರಾರು ಇಲ್ಲ. ಆದರೆ, ಅವರದು ಹಗಲುಗನಸಾಗಿರುವುದರಿಂದ ಅದು ಹಾಗೆಯೇ ಉಳಿಯುತ್ತದೆ. ನಾನು ಹೇಳಿದ ಮಾತನ್ನು ಯಾವ ಕಾಂಟೆಸ್ಟ್‌ನಲ್ಲಿ ಹೇಳಿದೆ ಎನ್ನುವುದನ್ನು ಅವರು ಮರೆತು 'ಸಿಂಧ್ಯರವರು ಒಪ್ಪುತ್ತಾರೆ, ಸಿಂಧ್ಯರವರು ಒಪ್ಪುತ್ತಾರೆ' ಎಂದು ಹೇಳಿದರೆ ನಾನು ಹೇಳುವುದೆಲ್ಲವನ್ನೂ ನೀವು ಒಪ್ಪುತ್ತೀರಾ? ನಾನು ಹೇಳುವುದೆಲ್ಲವೂ ಭಗವದ್ಗೀತೆಯಾದರೆ ನಾನು ಹೇಳುತ್ತೇನೆ: ಈ ರಾಷ್ಟ್ರದಲ್ಲಿ ಎರಡು ಪಕ್ಷಗಳ ಪದ್ಧತಿ ಬರಬೇಕು. ಕಮ್ಯೂನಲ್ ಫೋರ್ಸಸ್ ಮತ್ತು ಕ್ಯಾಪಿಟಲಿಸ್ಟ್ ಫೋರ್ಸಸ್ ಸಂಪೂರ್ಣ ನಿರ್ನಾಮ ಮಾಡಿ ಸಮಾಜವಾದ, ಜಾತ್ಯಾತೀತ ರಾಷ್ಟ್ರವನ್ನು ಕಟ್ಟಬೇಕೆಂದು ನಾನು ಹೇಳುತ್ತೇನೆ. ಇದಕ್ಕೆ ನೀವು ಒಪ್ಪುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಪೂರ್ಣವಾಗಿ ಒಪ್ಪುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಒಪ್ಪುವುದಿಲ್ಲ, ನಿಮ್ಮದೆಲ್ಲಾ ಬರೀ ಆಷಾಢ ಭೂತಿತನ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು.)

ಅಧ್ಯಕ್ಷರು : ಚರ್ಚೆ ಇದೇ ರೀತಿ ಮುಂದುವರಿದರೆ ನಿಗಧಿತ ಕಾರ್ಯಕಲಾಪಗಳ ಪಟ್ಟಿಯಂತೆ ಸದನವನ್ನು ನಡೆಸುವುದಕ್ಕಾಗುವುದಿಲ್ಲ. ಕಾರ್ಯಕಲಾಪಗಳು ಬಹಳ ಇರುವುದರಿಂದ ಈಗ ಮಾನ್ಯ ಸದಸ್ಯರಾದ ಶ್ರೀ ಸಿಂಧ್ಯರವರು ಮಾತನಾಡುವುದಕ್ಕೆ ತಯಾರಿದ್ದಾರೆ, ಅವರ ನಂತರ ತಾವೆಲ್ಲರೂ ಮಾತನಾಡುವುದಕ್ಕೆ ಅವಕಾಶ ಇದೆ.

ಶ್ರೀ ಆರ್.ವಿ. ದೇಶಪಾಂಡೆ : 'ನಾವು ಅಲ್ಲಿ ಗೆದ್ದಿದ್ದೇವೆ, ಇಲ್ಲಿ ಗೆದ್ದಿದ್ದೇವೆ' ಎಂದು ಹೇಳುತ್ತಿದ್ದಾರೆ, ಅವರು ಕರ್ನಾಟಕದ ವಿಚಾರ ಹೇಳಬೇಕು. ಹಿಂದಿಯಲ್ಲಿ ಒಂದು ಮಾತಿದೆ. ಏನೆಂದರೆ : 'ಬೇಗಾನೆ ಶಾದಿಮೆ ಅಬ್ದುಲ್ಲಾ ದಿವಾನ' ಎಂದು. ಭಾರತೀಯ ಜನತಾ ಪಕ್ಷ ಈ ಪರಿಸ್ಥಿತಿಯಾಗಿದೆ. ಕರ್ನಾಟಕದಲ್ಲಿ ಏನಾಗಿದೆ ಎಂಬುದರ ಬಗ್ಗೆ ಮಾತನಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಶಿವಮೊಗ್ಗದಲ್ಲಿ ಜನತಾ ದಳ ಎಲ್ಲಿದೆ ಎಂಬುದನ್ನು ಮಾನ್ಯ ಸದಸ್ಯರಾದ ಈಶ್ವರಪ್ಪನವರಿಗೆ ತೋರಿಸುತ್ತೇನೆ. ಚುನಾವಣೆ ಬರಲಿ, ಈಗೇಕೆ ಮಾತು? ಆಗ ಮಾತನಾಡೋಣ. ಮೊನ್ನೆ ನಡೆದ ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ಏನಾಗಿದೆಂಬುದನ್ನು ನೋಡಿದ್ದೇವೆ. ಆದುದರಿಂದ, ಈಗ ಇದರ ಬಗ್ಗೆ ಮಾತನಾಡುವುದು ಬೇಡ. ಇವೊತ್ತು ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರಿಬ್ಬರೂ ಕೂಡಿ ಬಹಳ ಜವಾಬ್ದಾರಿಯಿಂದ ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ. ನಿನ್ನೆ ದಿವಸ ಕೇಂದ್ರ ಸರ್ಕಾರದ ಸಚಿವರಾದ ಶ್ರೀ ಪ್ರಣಬ್ ಕುಮಾರ್ ಮುಖರ್ಜಿಯವರು ಕೇಂದ್ರ ಸರ್ಕಾರ ತಾಳಿರುವ ಆರ್ಥಿಕ ನೀತಿಯಿಂದಾಗಿ ನಿರುದ್ಯೋಗ ಹೆಚ್ಚಾಗುತ್ತದೆ ಎನ್ನತಕ್ಕಂಥ ಮಾತನ್ನು ಅವರು ಒಪ್ಪಿದ್ದಾರೆ. ಒಂದು ಕಡೆ ನಿರುದ್ಯೋಗ ಪ್ರಮಾಣ ಹೆಚ್ಚಿ ಮತ್ತೊಂದು ಕಡೆ ಬೆಲೆಗಳನ್ನು ಜಾಸ್ತಿ ಮಾಡುತ್ತಾ ಹೋದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಏನಾಗುತ್ತದೆ ಎಂಬುದನ್ನು ಕೇಳುವುದಕ್ಕೆ ಬಯಸುತ್ತೇನೆ. ಇವೊತ್ತು ನೀವು ಏನು ಮಾಡುತ್ತಿದ್ದೀರೆಂದರೆ ಖಾಸಗೀಕರಣದ ಹೆಸರಿನಲ್ಲಿ ಸೀಮೆಎಣ್ಣೆಯನ್ನು ತಂದು ಮಾರಾಟ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ. ಇದರಿಂದ ಏನಾಗುತ್ತದೆಂದು ಹೇಳುತ್ತೇನೆ. ಇವೊತ್ತು ಪಡಿತರ ಚೀಟಿ ಹೊಂದಿರುವಂಥವರಿಗೆ ಒಂದು ಲೀಟರ್ ಸೀಮೆಎಣ್ಣೆಗೆ ಮೂರು ರೂಪಾಯಿಗಳಿಂದ ಐದು ರೂಪಾಯಿಗಳಂತೆ ಮಾರಾಟ ಮಾಡುತ್ತಿದ್ದಾರೆ. ಮದ್ರಾಸ್ನಿಂದ, ಹೊರದೇಶಗಳಿಂದ, ಕೊಲ್ಲಿ ರಾಷ್ಟ್ರಗಳಿಂದ ಡೀಸೆಲ್ ಅಥವಾ ಸೀಮೆಎಣ್ಣೆಯನ್ನು ತಂದು ಇಲ್ಲಿನ ಮುಕ್ತ ಮಾರುಕಟ್ಟೆಯಲ್ಲಿ ಒಂದು ಲೀಟರ್ ಸೀಮೆಎಣ್ಣೆಗೆ 11 ರೂಪಾಯಿಗಳಂತೆ ಮಾರುತ್ತಿದ್ದಾರೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ನ್ಯಾಯ ಬೆಲೆ ಅಂಗಡಿಗಳಲ್ಲಿ ಪಡಿತರಗಳಿಗೆ ನಿಗದಿಪಡಿಸಿದ ಬೆಲೆಗಳನ್ನು ಏನು ಜಾಸ್ತಿ ಮಾಡಿಕೊಂಡು ಹೋಗುತ್ತಿದ್ದೀರಿ, ಮುಕ್ತ ಮಾರುಕಟ್ಟೆಯಲ್ಲಿರುವ ಬೆಲೆಗೆ ಸರಿಸಮನಾಗಿ ಮಾಡುವುದಕ್ಕೆ ನೀವು ಪ್ರಯತ್ನಿಸುತ್ತಿದ್ದೀರಿ? ನೀವು ಏನು ಸೋಷಿಯಲಿಸ್ಟಿಕ್ ಸೊಸೈಟಿ ಎಂದು ಹೇಳುತ್ತೀರಿ, ಸಮಾಜವಾದ ತತ್ವದ ಆಧಾರದ ಮೇಲೆ ಬಡವರಿಗೆ, ದೀನ ದಲಿತರಿಗೆ, ಹಿಂದುಳಿದವರಿಗೆ ಮತ್ತು ಕೂಲಿ ಮಾಡತಕ್ಕಂಥ ಜನರಿಗೆ ಸಹಾಯ ಮಾಡುತ್ತೇವೆಂದು ಏನು ಹೇಳುತ್ತಿದ್ದೀರಿ, ಅದು ಇದರಿಂದಾಗಿ ಹೇಗೆ ಸಾಧ್ಯ?

1.10 ಪಿ.ಎಂ.

ಇಲ್ಲಿರತಕ್ಕ ಕೇಂದ್ರ ಸರ್ಕಾರದ ಕುತಂತ್ರವನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ನಾವು ಅನೇಕ ಜನ ಬಹಳ ದುಃಖದಿಂದ ಮಾತನಾಡುತ್ತಿದ್ದೇವೆ. ಮಾನ್ಯ ರಂಗನಾಥ್‌ರವರು ಈ ಸದನದಲ್ಲಿ ಅಧ್ಯಕ್ಷರಾಗಿದ್ದಂಥವರು, ಹಿರಿಯ ಮಂತ್ರಿಗಳಾಗಿದ್ದವರು, ಸಮಾಜವಾದದ ಹಿನ್ನೆಲೆಯಿಂದ ಬಂದಿರತಕ್ಕವರು, ನಾವಿಲ್ಲಿ ಹೆಸರನ್ನು ಹೇಳಲು ಹೋಗುವುದಿಲ್ಲ, ಅದರಿಂದ ನಿಮಗೂ ಎಂಬ್ರಾಸ್‌ಮೆಂಟ್ ಆಗುತ್ತದೆ, ನಮಗೂ ಎಂಬ್ರಾಸ್‌ಮೆಂಟ್ ಆಗುತ್ತದೆ. ಕೇಂದ್ರ ಸರ್ಕಾರದಲ್ಲಿ ಅನೇಕ ಜವಾಬ್ದಾರಿ ಸ್ಥಾನದಲ್ಲಿರತಕ್ಕ ಜನಗಳಿಗೆ ಇವತ್ತು ರಾಷ್ಟ್ರದ ಆರ್ಥಿಕ ನೀತಿಯೇನು ಎನ್ನತಕ್ಕ ವಿಚಾರವೇ ಗೊತ್ತಿಲ್ಲ. ನಾವೇನಾದರೂ ಕೇಳಿದರೆ ಅದರ ಪರಿಣಾಮವೇನು ನಾವೇನು ಮಾಡುವುದು ಎನ್ನತಕ್ಕ ಮಾತನ್ನು ಹೇಳುತ್ತಾರೆ. ಆದ್ದರಿಂದ ಈ ವಿಷಯವನ್ನು ನಿಲುವಳಿ ಸೂಚನೆಯ ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಇವತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಡೀಸಲ್, ಪೆಟ್ರೋಲ್ಗಳ ಬೆಲೆಯು ಕಡಿಮೆಯಾಗುತ್ತಿದೆ. ಇವತ್ತು ಅಮೇರಿಕ

ದೇಶದಿಂದ ಒಂದು ಕ್ವಿಂಟಾಲ್ ಗೋಧಿಗೆ 650 ರೂ. ಕೊಟ್ಟು ತರಿಸಿಕೊಳ್ಳುತ್ತಿದ್ದೀರಿ, ಆದರೆ ನಮ್ಮ ಪಂಜಾಬಿನ ರೈತರು 550 ರೂ.ಗೆ ಒಂದು ಕ್ವಿಂಟಾಲ್ ಗೋಧಿಯನ್ನು ಕೊಡುತ್ತೇವೆಂದರೆ ಏಕೆ ತೆಗೆದುಕೊಳ್ಳುವುದಿಲ್ಲ ತಾವು? ಅದನ್ನು ತೆಗೆದುಕೊಳ್ಳಲು ತಾವು ತಯಾರಾಗಿಲ್ಲ. ಕಳೆದ ಎರಡು ವರ್ಷಗಳ ಹಿಂದೆ ಒಂದು ತೆಂಗಿನ ಕಾಯಿಗೆ 4 ರೂಪಾಯಿ ಇದ್ದದ್ದು ಇಂದು ಎರಡು ರೂಪಾಯಿಗಳಾಗಿವೆ. ರೈತ ಇವತ್ತು ಅಷ್ಟೊಂದು ತೊಂದರೆಯಲ್ಲಿದ್ದಾನೆ. ಇವತ್ತು ರೇಷ್ಮೆ ಗೂಡಿನ ಬೆಲೆ ಏನಾಗಿದೆ? ದಯಮಾಡಿ ಇದರ ಬಗ್ಗೆ ವಿಚಾರ ಮಾಡಿ. ಇವತ್ತು ಭತ್ತದ ಬೆಲೆ ಎಷ್ಟಿದೆ? ರಾಗಿಯ ಬೆಲೆ ಎಷ್ಟಿದೆ? ನಮ್ಮ ರೈತರು ಮಾರಾಟ ಮಾಡುವ ಒಂದು ವಸ್ತುವಿನ ಬೆಲೆಯೂ ಜಾಸ್ತಿಯಾಗುತ್ತಿಲ್ಲ, ಆದರೆ ನಾವು ಕೊಳ್ಳತಕ್ಕ ಪ್ರತಿಯೊಂದು ವಸ್ತುವಿನ ಬೆಲೆಯೂ ಜಾಸ್ತಿಯಾಗುತ್ತಿದೆ ಎಂದರೆ ಹೇಗೆ? ತರಕಾರಿಗಳ ಬೆಲೆ ಏನಾಗಿದೆ ಎಂದರೆ ಮಧ್ಯವರ್ತಿಗಳು ಎಲ್ಲವನ್ನು ತಿನ್ನುತ್ತಿದ್ದಾರೆ. ಹೊರರಾಷ್ಟ್ರಗಳಿಂದ ಬರತಕ್ಕದರಲ್ಲಿ ಇವರು ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡುವ ಹೆಸರಿನಲ್ಲಿ, ಇವರ ಡೆಫಿಸಿಟನ್ನು ಮುಚ್ಚಿ ಕೊಳ್ಳಲು ಈ ದೇಶದ ಮಧ್ಯಮ ಮತ್ತು ಬಡವರ್ಗದ ಜನರ ಮೇಲೆ ದೊಡ್ಡ ಅಘಾತವನ್ನು ಕೇಂದ್ರ ಸರ್ಕಾರದವರು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಕಳೆದ ಎರಡು ವರ್ಷಗಳ ಹಿಂದೆ ಕೇಂದ್ರ ಸರ್ಕಾರದವರು ಅನೇಕ ಜನ ಪ್ರೈವೇಟ್ ಇಂಡಸ್ಟ್ರಿಯಲಿಸ್ಟ್‌ಗಳನ್ನು ಕರೆದು ರೆಫ್ರಿಜರೇಟರ್, ಬಣ್ಣದ ಟಿ.ವಿ., ಸೋನಿ ಟೇಪ್‌ರೆಕಾರ್ಡ್, ಪಾಂಡ್ಸ್ ಪೌಡರ್ ಮುಂತಾದುವುಗಳ ಬೆಲೆ ಕಡಿಮೆಯಾಗಿದೆ ಎಂದು ಜಾಹೀರಾತನ್ನು ಕೊಟ್ಟರು. ಇಂಥ ರೆಫ್ರೀಜರೇಟರ್, ಟಿ.ವಿ. ಕಂಪ್ಯೂಟರ್‌ಗಳನ್ನು ಯಾರು ಉಪಯೋಗ ಮಾಡುತ್ತಾರೆ? ಇದಕ್ಕೆ ನಾನು ಕೇಳುತ್ತಿದ್ದೇನೆ, ಇವತ್ತು ನಾನು ಬಹಳ ಹೆಮ್ಮೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ, ಇಲ್ಲಿ ಕಾಂಗ್ರೆಸ್, ಜನತಾದಳ, ಬಿ.ಜೆ.ಪಿ. ಎನ್ನತಕ್ಕ ಪ್ರಶ್ನೆಯಲ್ಲ. 1977ರಲ್ಲಿ ಕೇಂದ್ರ ಸರ್ಕಾರದಲ್ಲಿ ವಯೋವೃದ್ಧರಾಗಿರತಕ್ಕ ಶ್ರೀಮಾನ್ ಮುರಾರ್ಜಿದೇಸಾಯ್‌ರವರು ಅಧಿಕಾರಕ್ಕೆ ಬಂದಾಗ ಅವರು ಮಾಡಿದಂಥ ಮೊದಲನೆಯ ಕೆಲಸವೇನೆಂದರೆ, ನನ್ನ ಸರ್ಕಾರ ಮಧ್ಯಮ ಮತ್ತು ಬಡವರ್ಗದವರು ಉಪಯೋಗ ಮಾಡತಕ್ಕಂಥ ಬೆಲ್ಲ, ಸೀಮೆಎಣ್ಣೆ, ಕಡಲೆಕಾಯಿ ಎಣ್ಣೆ, ಅಕ್ಕಿ ಮತ್ತು ಮೆಂತ್ಯಾದ ನಾಲ್ಕು ವಸ್ತುಗಳ ಬೆಲೆಯನ್ನು ಕಡಿಮೆ ಮಾಡುತ್ತೇನೆ, ಉಳಿದುದ್ದನ್ನು ಹೆಚ್ಚು ಮಾಡುತ್ತೇನೆಂದು ಹೇಳಿದರು. ಆದ್ದರಿಂದ ತಮಗೆ ಯಾವುದಾದರೊಂದು ನೀತಿ ಬೇಡವೆ? ಕೇಂದ್ರ ಸರ್ಕಾರದವರು ತೆಗೆದುಕೊಳ್ಳತಕ್ಕಂಥ ಪ್ರತಿಯೊಂದು ನಿರ್ಣಯದಿಂದಲೂ ಸಹ ನಮ್ಮ ರಾಜ್ಯದ ಬೊಕ್ಕಸದ ಮೇಲೆ ನೇರವಾದ ತೊಂದರೆಯಾಗುತ್ತದೆ. ನಮ್ಮ ಸರ್ಕಾರವಿದ್ದಾಗ ಒಂದು ಕೆ.ಜಿ. ಅಕ್ಕಿಗೆ ಎರಡು ರೂಪಾಯಿಗಳನ್ನು ಮಾಡಿದ್ದೆವು. ಮೊದಲು ಎರಡು ರೂಪಾಯಿ ಇತ್ತು ಅನಂತರ ಅದನ್ನು 2-50ಕ್ಕೆ ಮಾಡಿದೆವು. ಅವತ್ತು ಅದಕ್ಕೆ ಸಬ್ಸಿಡಿ 2-50 ರೂ. ಮಾಡಿದವರು ನಾವೇ. ಅದನ್ನು ಯಾವ ಕಾರಣಕ್ಕಾಗಿ ಮಾಡಿದೆವು ಎಂದರೆ, ಪ್ಲಾನಿಂಗ್ ಕಮಿಷನ್ನವರು ನೀವು ಅದನ್ನು 2-50ಕ್ಕೆ ಮಾಡಲೇ ಬೇಕೆಂದು ನಿರ್ದೇಶನವನ್ನು ಕೊಟ್ಟರು. ಆದ್ದರಿಂದ ನಾವು 2-50 ಮಾಡಿದೆವು. ಆಗ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದಿಂದ ಅಕ್ಕಿಯನ್ನು ನಾವು ತೆಗೆದುಕೊಂಡು ವಿತರಣೆ ಮಾಡುವುದಕ್ಕೆ 80 ಕೋಟಿ ರೂಪಾಯಿಗಳ ಕೊರತೆ ಬಿತ್ತು. ಆಗ ರಾಜ್ಯಸರ್ಕಾರದಿಂದ ನಾವು 75 ಕೋಟಿ ರೂಪಾಯಿಗಳನ್ನು ಕಟ್ಟಿಕೊಟ್ಟೆವು. ನಾನು ರಾಜ್ಯಸರ್ಕಾರದ ಮೇಲೆ ಒತ್ತಾಯ ಮಾಡುವುದೇನೆಂದರೆ, ಕೊನೆಯ ಪಕ್ಷ ನೀವು ಸೀಮೆಎಣ್ಣೆ, ಡೀಸೆಲ್, ಅಕ್ಕಿಯ ಬೆಲೆಗಳು ಜಾಸ್ತಿಯಾಗದ ಹಾಗೆ ಏನಾದರೂ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವೇ? ರೇಷ್ಮೆ ಖಾತೆಯ ಸಚಿವರಾದ ಡಾ: ಪರಮೇಶ್ವರರವರು ಮೊನ್ನೆ ರೇಷ್ಮೆ ಗೂಡಿನ ಬೆಲೆಯನ್ನು ಜಾಸ್ತಿ ಮಾಡಿಸುವುದಾಗಿ ಹೇಳಿದರು. ಅವರು ಒಂದು ವರ್ಷದಿಂದ ಕೇಂದ್ರ ಸರ್ಕಾರದ ಎಲ್ಲಾ ಮಂತ್ರಿಗಳ ಮನೆಗೆ ಹೋಗಿ ದುಂಬಾಲು ಬಿದ್ದಿದ್ದಾರೆ,

ಆದರೆ ಅವರಿಗೆ ಒಂದು ರೂಪಾಯಿಯನ್ನು ಜಾಸ್ತಿ ಮಾಡಲು ಸಾಧ್ಯವಾಗಿದೆಯೇ? ತೆಂಗಿನ ಕಾಯಿಯ ಬೆಲೆ ಎಷ್ಟಾಗಿದೆ ಎಂಬುದು ತಮಗೆ ಗೊತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಜೀವನ ಮಾಡುವುದು ಹೇಗೆ? ಆದ್ದರಿಂದ ನಾನು ತಮ್ಮಲ್ಲಿ ಅತ್ಯಂತ ವಿನಯವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ತಾವು ರಾಜ್ಯಪಾಲರ ಭಾಷಣದಲ್ಲಿ ಈ ವಿಷಯವನ್ನು ಸೇರಿಸದಿರತಕ್ಕದ್ದು ಬಹಳ ದುರಾದೃಷ್ಟಕರವಾದ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಶ್ರೀ ರಂಗನಾಥ್ ಅವರ ಪಕ್ಕದಲ್ಲಿ ಕುಳಿತುಕೊಂಡು ಭ್ರಷ್ಟಚಾರ ಇಲ್ಲದೇ ಇರುವಂಥ ಮತ್ತು ಬಡವರ ಪರವಾಗಿ ಇರುವಂತಹ ಸರ್ಕಾರವನ್ನು ಕೊಡುತ್ತನೆಂಬ ಮಾತನ್ನು ನಿನ್ನೆ ಚಿತ್ರದುರ್ಗದಲ್ಲಿ ಹೇಳಿದ್ದಾರೆ. ನೀವು ಅಂತಹ ಸರ್ಕಾರ ಕೊಡಬೇಕು ಇಲ್ಲದಿದ್ದರೆ, ರಾಜ್ಯಪಾಲರ ಭಾಷಣದಲ್ಲಿ ಆ ದೃಷ್ಟಿಕೋನವನ್ನು ತೋರಿಸಬೇಕಾಗಿತ್ತು. ಕೇಂದ್ರಸರ್ಕಾರ ಮಾಡಿರುವಂತಹ ಕ್ರಮದಿಂದ ರಾಜ್ಯದ ಜನತೆಗೆ ಏನು ನೋವಾಗಿದೆ ಎನ್ನುವಂಥ ಮಾತನ್ನು ನೀವು ಅದರಲ್ಲಿ ಸೇರಿಸಲಿಲ್ಲ. ಇದರಿಂದ ನಿಮಗೆ ಏನು ತೊಂದರೆಯಾಗುತ್ತಿತ್ತು ಅದು ನಾನು ಕೇಳುತ್ತಿರುವಂತಹ ಪ್ರಶ್ನೆ. ಇದರ ಬಗ್ಗೆ ದೀರ್ಘವಾಗಿ ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಗಿರುವಂತಹ ವ್ಯತ್ಯಾಸಗಳು ಏನಿದೆ. ಕೇಂದ್ರ ಸರ್ಕಾರದ ಆರ್ಥಿಕ ನೀತಿಯೇನಿದೆ. ರಾಜ್ಯದ ಬೊಕ್ಕಸದ ಮೇಲೆ ಇದರಿಂದ ಆಗುವಂತಹ ಪರಿಣಾಮ ಏನು? ಇವತ್ತು ತಾವು ಗಮನಿಸಿರಬಹುದು ಮಂತ್ರಿಗಳ ಸಭೆಗೆ ಜನ ಬರುತ್ತಿಲ್ಲ. ನಾನು ಈ ಮಾತನ್ನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಮಾನ್ಯ ಕೃಷ್ಣಪ್ಪನವರೇ, ನಿಮ್ಮ ಮತ ಕ್ಷೇತ್ರಗಳಲ್ಲಿ ನಿಮ್ಮ ಬಗ್ಗೆ ನಾಲ್ಕು ಜನರಿಗೆ ಗೌರವವಿರಬಹುದು. ಆದರೆ ಇವತ್ತು ಜನಗಳು ನಿಮ್ಮ ಬಗ್ಗೆ ಬಹಳ ಆಕ್ರೋಶದಿಂದ ಇದ್ದಾರೆ. ಅದನ್ನು ತಾವು ಗಮನಿಸಬಹುದು. ನಾನು ಇದನ್ನು ರಾಜಕೀಯ ಮಾಡಿ ಬೆರಿಸಬೇಕೆನ್ನುವಂಥ ಮಾತಿನಲ್ಲಿ ಹೇಳುತ್ತಿಲ್ಲ. ಬಹಳ ಕಳಕಳಿಯಿಂದ ಏನಾದರೂ ಒಂದು ಮಾಡಬೇಕು. ಜನರು ವಿಧಾನಸಭೆಯ ಕಡೆಗೆ ನೋಡುತ್ತಿದ್ದಾರೆ. ಏನಪ್ಪಾ, ಇಷ್ಟೊಂದು ಬೆಲೆ ಜಾಸ್ತಿ ಮಾಡಿಬಿಟ್ಟಿದ್ದಾರಲ್ಲಾ, ಇವರ ಮನೆಹಾಳಾಗ ಎಂದು ಹೇಳುತ್ತಾ ಇದ್ದಾರೆ. ಇದನ್ನು ಬೀದಿ ಬೀದಿಯಲ್ಲೂ ಸಹಿತ ಹೇಳುತ್ತಿದ್ದಾರೆ. ಇದನ್ನು ತಾವು ಕಿವಿಯ ಮೇಲೆ ಹಾಕಿಕೊಂಡಿರಬಹುದು. ಆದುದರಿಂದ ನಾನು ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತೇನೆ. ಕೊನೆಯ ಪಕ್ಷ ನಿಲುವಳಿ ಸೂಚನೆಗೆ ಒಪ್ಪಿಕೊಂಡು ಒಂದು ವಿಸ್ತಾರವಾದ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿ ನನ್ನ ಪ್ರಿಲಿಮಿನರಿ ಸಬ್ಮಿಷನ್ಗೆ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ : (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಶ್ರೀ ಧೇಶಪಾಂಡೆಯವರು ಶ್ರೀ ಸಿಂಧ್ಯಾರವರು ಈ ನಿಲುವಳಿ ಸೂಚನೆಯ ಬಗ್ಗೆ ಸಾಕಷ್ಟು ಗಮನವನ್ನು ಸೆಳೆಯುವಂತಹ ಪ್ರಯತ್ನ ಮಾಡಿದ್ದಾರೆ. ಇದರಿಂದ ತಮಗೆ ತೃಪ್ತಿಯಾಗಿ ನಿಲುವಳಿ ಸೂಚನೆಯ ಮೂಲಕ ಕೇಂದ್ರ ಸರ್ಕಾರದ ಬಡ್ಜೆಟ್ಗೆ ಮುನ್ನ ಪೆಟ್ರೋಲಿಯಂ ದರವನ್ನು ಜಾಸ್ತಿ ಮಾಡಿರುವಂಥದ್ದು ಮತ್ತು ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಗಗನಕ್ಕೆ ಏರಿಸಿರುವಂಥಾದ್ದು ಈ ಬಗ್ಗೆ ವ್ಯಾಪಕವಾದಂತಹ ಚರ್ಚೆಯಾಗುವುದು ಅಗತ್ಯವಿದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ರಾಜ್ಯಕ್ಕೆ ಇದಕ್ಕೆ ಏನು ಸಂಬಂಧ ಇದೆ ಎನ್ನುವಂತಹ ಪ್ರಶ್ನೆ.

ಸಹಜವಾಗಿಯೆ ಉದ್ಭವವಾಗಬಹುದು. ಆದರೆ ಇದರ ಬಗ್ಗೆ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ರಾಜ್ಯ ಸರ್ಕಾರದ ಮೇಲೂ ಸಹ ಇದರಿಂದ ಯಾವ ರೀತಿ ಪರಿಣಾಮವಾಗಿದೆ ಎಂಬುದನ್ನು ಸಹ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಕಳೆದ ಮ್ಮೂರು ವರ್ಷಗಳಿಂದ ಕೇಂದ್ರ ಸರ್ಕಾರ ಹೊಸದಾಗಿ ಅಧಿಕಾರಕ್ಕೆ ಬಂದ ಅವಧಿಯಿಂದ ಇವತ್ತಿನವರೆಗೆ ಪೆಟ್ರೋಲಿಯಂ ದರವನ್ನು ಮೂರು ಬಾರಿ ಪ್ರತಿ ವರ್ಷ ಜಾಸ್ತಿ ಮಾಡಿಕೊಂಡೆಬರುತ್ತಾ ಇದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಒಂದು ರೀತಿಯಿಂದ

ನಿಮಗೆ ಅನುಕೂಲವಾಗಿದೆ. ಆದರೆ ರಾಜ್ಯದ ಜನರಿಗೆ ಶ್ರೀಸಾಮಾನ್ಯರಿಗೆ ಕಣ್ಣೀರಿನಿಂದ ಕೈ ತೊಳೆಯುವಂತಹ ಪರಿಸ್ಥಿತಿ ಬಂದಿದೆ. ಅದು ಹೇಗೆ? ಎಂದು ಯೋಚನೆ ಮಾಡಬಹುದು. ನೀವು ಯೋಚನೆ ಮಾಡುವಂತಹ ಕೆಲವು ಸಂಗತಿಗಳು ಇದೆ. ನೀವು ಈ ವಿಷಯವನ್ನು ಬಿಚ್ಚು ಮನಸ್ಸಿನಿಂದ ಚರ್ಚೆ ಮಾಡಿ, ದುಃಖ ದುಮ್ಮಾನಗಳಿಂದ ಕಂಗಾಲಾಗಿರುವಂತಹ ನಾಡಿನ ಜನರಿಗೆ ಇದರಿಂದ ಕೆಟ್ಟ ಪರಿಣಾಮವಾಗುತ್ತದೆ. ಆದುದರಿಂದ ಸರ್ವಾನುಮತದಿಂದ ಒಂದು ನಿರ್ಣಯವನ್ನು ಕಳುಹಿಸಿಕೊಟ್ಟು ಯಾವುದೇ ಕಾರಣಕ್ಕೂ ಪೆಟ್ರೋಲಿಯಂ ದರವನ್ನು ಜಾಸ್ತಿ ಮಾಡಿರುವುದನ್ನು ರಾಜ್ಯದ ಜನತೆ ಒಪ್ಪುವುದಿಲ್ಲ. ಈ ಸದನವು ಒಪ್ಪುವುದಿಲ್ಲ. ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಏರಿಸಿರುವುದನ್ನೂ ಸಹ ಒಪ್ಪುವುದಿಲ್ಲ. ಈ ನಿರ್ಣಯವನ್ನು ಸರ್ವಾನುಮತದಿಂದ ಕಳುಹಿಸಬೇಕಾಗುತ್ತದೆ. ಇಲ್ಲದಿದ್ದರೆ ಖಂಡನಾ ನಿರ್ಣಯವನ್ನು ಅನಿವಾರ್ಯವಾಗಿ ಈ ಕಡೆಯಿಂದ ನಾವು ಮಂಡನೆ ಮಾಡುವಂತಹ ಪರಿಸ್ಥಿತಿ ಬರುತ್ತದೆ. ಇವತ್ತು ಒಂದು ಲೀಟರ್ ಪೆಟ್ರೋಲ್ ಬೆಲೆ 20 ರೂಪಾಯಿ 23 ಪೈಸೆಗೆ ಮಾರುತ್ತಿದ್ದಾರೆ. ಇಡೀ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಶೇ. 22ರಷ್ಟು ತೆರಿಗೆ ಪೆಟ್ರೋಲಿಯಂ ವಸ್ತುಗಳ ಮೇಲೆ ವಸೂಲು ಮಾಡುತ್ತಿದ್ದೀರಾ, ಒಬ್ಬ ಸಾಮಾನ್ಯ ನೌಕರ ಎರಡೂವರೆ ಮೂರು ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಳ್ಳುವ ನೌಕರ ಇವತ್ತು ಒಂದು ಲೀಟರ್ ಪೆಟ್ರೋಲ್ ಉಪಯೋಗಿಸಿದರೆ ಶೇ.22ರಂತೆ ರೂ. 4.40ಪೈಸೆ ರಾಜ್ಯ ಸರ್ಕಾರಕ್ಕೆ ತೆರಿಗೆ ಕೊಡುತ್ತಾರೆ. ಒಬ್ಬ ನೌಕರ ಕಛೇರಿಗೆ ಹೋಗಿ ಬರುವುದಕ್ಕೆ ಒಂದು ಲೀಟರ್ ಪೆಟ್ರೋಲ್ ಖರ್ಚು ಮಾಡುತ್ತಾನೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಅಂದರೆ 30 ದಿವಸಕ್ಕೆ 600 ರೂಪಾಯಿಗಳನ್ನು ಖರ್ಚು ಮಾಡುತ್ತಾನೆ. ಈ ರೀತಿಯಾದರೆ ಅವನು ಬದುಕುವುದಕ್ಕೆ ಸಾಧ್ಯವಿದೆಯೋ? ಈ 22 ಪೈಸೆ ಒಂದು ರೂಪಾಯಿಯಿಂದಲೇ ತೆರಿಗೆ ವಸೂಲು ಮಾಡುತ್ತಿರುವ ನೀವು, ಇಡೀ ದೇಶದಲ್ಲಿ ಬೇರೆ ಯಾವುದೇ ರಾಜ್ಯದಲ್ಲೂ ನಾವು ಹೇಳುತ್ತಿರುವ ಈ ತೆರಿಗೆಯನ್ನು ಹಾಕುವುದಿಲ್ಲವೆಂದು ನೀವು ಹೇಳುತ್ತಿರುವುದು. ಒಂದು ಕಡೆ ಅಗತ್ಯ ವಸ್ತಗಳ ಬೆಲೆ ಗಗನಕ್ಕೆ ಏರುತ್ತಿದೆ. ಸಾಧಾರಣ ಅಕ್ಕಿ ರೂ. 437ರಿಂದ 537 ರೂಪಾಯಿಗಳು ಉತ್ತಮ ಅಕ್ಕಿ ರೂ. 497 ರಿಂದ ರೂ. 617, ಅತ್ಯುತ್ತಮ ಅಕ್ಕಿ ರೂ. 518 ರಿಂದ ರೂ. 648ಕ್ಕೆ ಕೇಂದ್ರ ಸರ್ಕಾರ ಏರಿಸಿದೆ.

ಈ ರೀತಿ ಏರಿಕೆ ಆಗಿರುವಂತಹ ಸಂದರ್ಭದಲ್ಲಿ ತಾವು ತಜ್ಞರ ಸಮಿತಿಯನ್ನು ನೇಮಕ ಮಾಡಿ ವರದಿಯನ್ನು ತರಿಸಿಕೊಳ್ಳುವಂತಹ ಪ್ರಯತ್ನ ಮಾಡಿ. ಈ ಒಂದು ಪಡಿತರ ವ್ಯವಸ್ಥೆ ಮೂಲಕ ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಗಗನಕ್ಕೆ ಏರಿಸಿದ್ದೀರಿ ಅದಕ್ಕೆ ತಕ್ಕಂತೆ ನಮ್ಮ ರೈತ ಬೆಳೆಯುವಂತಹ ಬೆಳೆಗೆ ವೈಜ್ಞಾನಿಕ ಬೆಲೆ ಸಿಗುತ್ತದೆ ಏನು? ನೀವು ಅಭ್ಯಾಸ ಮಾಡಿ ರೈತರ ಬಗ್ಗೆ ಕಳಕಳಿ ಏನು ಎಂದು ಇರಬೇಕಾದರೆ ಒಂದು ತೀರ್ಮಾನಕ್ಕೆ ಬರೋಣ. ಕೇಂದ್ರ ಸರ್ಕಾರದವರು ಯಾವ ಬೆಲೆ ನಿಗದಿ ಮಾಡುತ್ತಾರೋ ಮಾಡಿಕೊಳ್ಳಲಿ, ಅದಕ್ಕೆ ನಾವು ಅಭ್ಯಂತರ ಮಾಡುವುದಿಲ್ಲ. ಈ ರಾಜ್ಯದ ರೈತರಿಂದ ಲೆವಿ ಮೂಲಕ ಬರುವಂತಹ ಅಕ್ಕಿ, ಸಕ್ಕರೆ, ಕಬ್ಬಿನ ಬೆಳೆ ಲೆವಿ ರೂಪದಲ್ಲಿ ಏನು ಸಂಗ್ರಹ ಮಾಡುತ್ತಿದ್ದೀರಿ ಅದನ್ನು ಕೈ ಬಿಡುತ್ತೇವೆ ಎಂದು ಹೇಳುತ್ತೀರಾ? ಒಂದು ಕಡೆ ಆ ರೈತ ಬೆಳೆದಂತಹ ಕಬ್ಬನ್ನು, ಭತ್ತವನ್ನು ಕಡಿಮೆ ಬೆಲೆಗೆ ಲೆವಿ ರೂಪದಲ್ಲಿ ಕೊಂಡುಕೊಳ್ಳುತ್ತೀರಿ.

ಶ್ರೀ ಕೆ.ಹೆಚ್. ರಂಗನಾಥ್ : ನೀವು ಎಲ್ಲಾ ಪಾರ್ಟಿಯವರಿಗಿಂತ ಜಾಸ್ತಿ ರೈತರ ಬೆಂಬಲಿಗರಾಗಿಬಿಟ್ಟಿದ್ದೀರಿ. ಈಗ ರಾಜ್ಯಸರ್ಕಾರ ಕೊಳ್ಳುವಂತಹ ಭತ್ತಕ್ಕೆ ಸಪೋರ್ಟ್ ಪ್ರೈಸ್‌ನ್ನು 30 ರೂಪಾಯಿಗೆ ಮಾಡಿದೆ. ಏಕೆಂದರೆ ರೈತರಿಗೆ ಇನ್ಸೆಂಟಿವ್ ಇರಲಿ ಹೆಚ್ಚು ಬೆಳೆಯಲಿ ಎಂದು. ಮಾನ್ಯ ದೇಶಪಾಂಡೆಯಯವರು ಪಂಜಾಬ್ ಹರಿಯಾಣದಲ್ಲಿ

ಗೋಧಿ ಬೆಳೆಯುವಂತಹವರಿಗೆ ನೀವು ಸಹಾಯ ಮಾಡಿದಿರಿ ಎನ್ನುವ ಮಾತನ್ನು ಹೇಳಿದರು. ಇರಲಿ ಅದು ಒಂದು ವಾದದ ವಿಚಾರವೇ. ಈಗ ಕರ್ನಾಟಕದಲ್ಲಿ ರೈತ ಭತ್ತ ಬೆಳೆದು ಮತ್ತೆ ಸರ್ಕಾರಕ್ಕೆ ಕೊಡುವುದಾದರೆ ಸಪೋರ್ಟ್ ಪ್ರೈಸ್ 30 ರೂಪಾಯಿ ಎಂದು ನಾವು ಹೇಳುತ್ತಿದ್ದೇವೆ. ನಮ್ಮದು ಸರ್ಪ್ಲಸ್ ಏರಿಯಾ ಆಗಿ ಮಾರಾಟ ಮಾಡುವಂತಹ ಪರಿಸ್ಥಿತಿ ಬಂದರೆ ಕೇಂದ್ರದ ದುಡ್ಡು ಏನು ಪಂಜಾಬಿಗೆ ಹರಿಯಾಣಕ್ಕೆ ಹೋಗುತ್ತದೆ ಆ ದುಡ್ಡು ಕರ್ನಾಟಕದ ರೈತರಿಗೂ ಬರುತ್ತದೆ. ಆದರೆ ನಾವು ಏನು ಮಾಡುತ್ತಿದ್ದೇವೆ ಎಂದರೆ ನೀರಾವರಿ ಪ್ರದೇಶ ಎಲ್ಲೆಲ್ಲಿ ಇದೆ ಅಲ್ಲೆಲ್ಲಾ ಕಬ್ಬು ಬೆಳೆಯುತ್ತಿದ್ದಾರೆ. ಆಗ ಕಬ್ಬಿನದು ನಾಲ್ಕು ಜನಕ್ಕೆ ಹೋಗುತ್ತದೆ. ಸಾಧಾರಣವಾಗಿ ಮಾರ್ಜಿನಲ್ ಸಣ್ಣ ರೈತರುಗಳಿಗೂ ಕೂಡ ಭತ್ತ ಬೆಳೆಯುವಂತವರಿಗೆ ಅನುಕೂಲ ಆಗುತ್ತಿಲ್ಲ. ಒಂದು ಹೆಕ್ಟೇರ್‌ಗೆ ಯೀಲ್ಡ್ ಜಾಸ್ತಿಯಾಗಿಲ್ಲ. ಒಂದು ಎಕರೆ ಇಳುವರಿ ಎಷ್ಟು ಬರಬೇಕಾಗುತ್ತದೆ ಅದನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಅದನ್ನು ಮಾಡುತ್ತಾ ಇಲ್ಲ ನಾವು. ಸರ್ಪ್ಲಸ್ ಅವನಿಗೆ ಬಂದು ಮಾರಾಟ ಮಾಡತಕ್ಕಂಥಾದ್ದು ತನಗೆ ಉಳಿಕೆ ಮಾಡಿಕೊಂಡು ಮಾರಾಟ ಮಾಡುವಂತಹ ಪರಿಸ್ಥಿತಿ ಬೆಳೆದರೆ ರಾಜ್ಯ ಸರ್ಕಾರ 30 ರೂಪಾಯಿಗೆ ಸಪೋರ್ಟ್ ಪ್ರೈಸ್‌ನ್ನು ಹೆಚ್ಚುಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದರು. ಇದನ್ನು ನಾವು ಎಲ್ಲಿ ಉಪಯೋಗ ಮಾಡಿಕೊಳ್ಳುತ್ತಿದ್ದೇವೆ ನಾವು ರೈತರೂ ಉಪಯೋಗ ಮಾಡಿಕೊಳ್ಳುತ್ತಿಲ್ಲ. ಆದರೆ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಂನಲ್ಲಿ ವಿತರಣೆ ಮಾಡತಕ್ಕಂಥಾದ್ದು ಹೆಚ್ಚು ಬೆಲೆ. ಆದರೆ ಅದೇ ಮಾರ್ಕೆಟ್‌ನಲ್ಲಿ ಇರತಕ್ಕಂತಹ ಭತ್ತದ ಬೆಲೆ ಎಲ್ಲಿ ಕಡಿಮೆಯಾಗಿದೆ, ಕಡಿಮೆಯಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳುವುದರಲ್ಲಿ ಸತ್ಯ ಇದೆ. ಇವತ್ತು ಭತ್ತಕ್ಕೆ ತಾವು ಬೆಂಬಲ ಬೆಲೆ ಎಂದು ಘೋಷಣೆ ಮಾಡಿ 30 ರೂಪಾಯಿ ಜಾಸ್ತಿ ಕೊಡುತ್ತಿದ್ದರೂ ಸಹ ತಾವು ನಿನ್ನೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರ, ನಾನು ನಿಮ್ಮನ್ನು ಕೇಳುತ್ತೇನೆ ಸತ್ಯ ಸಂಗತಿಯನ್ನು ಸದನದ ಮುಂದೆ ಇಡಿ. ಇಡೀ ನಮ್ಮ ರಾಜ್ಯದಲ್ಲಿ ಬೆಂಬಲ ಬೆಲೆ ಎಂದು ಹೇಳಿ ಕ್ವಿಂಟಾಲ್‌ಗೆ 30 ರೂಪಾಯಿ ನೀವು ಜಾಸ್ತಿ ಕೊಡುತ್ತೇವೆ ಎಂದು ಹೇಳಿದ ಮೇಲೂ ಸಹ ಎಷ್ಟು ಭತ್ತವನ್ನು ರೈತರಿಂದ ನೀವು ಸಂಗ್ರಹ ಮಾಡಿದ್ದೀರಿ. ಏಕೆ ಆಗಿಲ್ಲ, ಏಕೆ ಆಗಿಲ್ಲ ಎಂದರೆ ನೀವು ಬೆಂಬಲೇ ಬೆಲೆ 30 ರೂಪಾಯಿಯೆಂದು ಕ್ವಿಂಟಾಲ್‌ಗೆ ನಿಗದಿ ಮಾಡಿದ ಮೇಲೂ ಸಹ ಮಾರ್ಕೆಟ್ ಬೆಲೆ ಅದಕ್ಕಿಂತ ಜಾಸ್ತಿ ಇದೆ. ಹೀಗಾಗಿ ಕರ್ನಾಟಕ ರಾಜ್ಯದಲ್ಲಿ ನೀವು ಬೆಂಬಲ ಬೆಲೆಯನ್ನು ಕೊಡುತ್ತಿದ್ದರೂ ಸಹ ಭತ್ತವನ್ನು ಸರ್ಕಾರಕ್ಕೆ ಕೊಡುವಂತಹ ಸ್ಥಿತಿಯಲ್ಲಿ ರೈತ ಇಲ್ಲ. ಅದು ಒಂದು ಭಾಗ. ಎರಡನೆಯದು ಭತ್ತವನ್ನು ಬೆಳೆಯುವುದನ್ನು ಕೈಬಿಡುತ್ತಿದ್ದಾನೆ.

ಶ್ರೀ ಕೆ. ಹೆಚ್. ರಂಗನಾಥ್ : ಏಕೆಂದರೆ ನಿಮ್ಮ ಕ್ಷೇತ್ರ ಹೆಚ್ಚು ಭತ್ತ ಬೆಳೆಯತಕ್ಕಂತಹ ಕ್ಷೇತ್ರ. ಸೊರಬ,ಸಾಗರ, ಶಿಕಾರಿಪುರ ಇಲ್ಲಿ ಹೆಚ್ಚು ಭತ್ತ ಬೆಳೆಯತಕ್ಕಂಥಾದ್ದು. ಈಗ ಜನ ಅದನ್ನು ಬಿಟ್ಟುಬಿಟ್ಟು ಬೇರೆ ಬೆಳೆಯುವುದಕ್ಕೆ ಶುರು ಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಏಕೆ ಭತ್ತ ಬೆಳೆಯುವುದನ್ನು ಕೈಬಿಡುತ್ತಿದ್ದಾರೆ, ಇನ್ನು ಸಂಪೂರ್ಣವಾಗಿ ಕೈ ಬಿಡುತ್ತಾನೆ ಎಂದರೆ ಅವನು ಹಗಲು ರಾತ್ರಿ ಗಂಡ ಹೆಂಡತಿ ಮಕ್ಕಳು ದುಡಿದೇ ಮೇಲೂ ಸಹ ಇವತ್ತು ಕ್ವಿಂಟಾಲ್‌ಗೆ 370,380 ರೂಪಾಯಿಗಳಿಗಿಂತ ಜಾಸ್ತಿ ಸಿಗದೇ ಇರುವಂತಹ ಸಂದರ್ಭ ಬಂದಿರುವುದರಿಂದ ಅವನು ಕೂಲಿ ಸಹ ಸಿಗದೇ ಇರುವುದರಿಂದ ಭತ್ತ ಬೆಳೆಯುವುದನ್ನು ಬಿಡುತ್ತಿದ್ದಾನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಯಡಿಯೂರಪ್ಪನವರೇ, ತಾವು ಪೂರ್ಣ ಬಿಜೆಪಿಗೆ ಅರ್ಪಣೆ ಮಾಡಿಕೊಂಡು ಜಮೀನಿನ ಕಡೆಗೆ ಹೋಗುತ್ತಿಲ್ಲ, ಹಾಗಾಗಿ

ನಿಮಗೆ ಜಮೀನಿನ ಸುದ್ದೀನೇ ಗೊತ್ತಾಗುತ್ತಿಲ್ಲ. ಸ್ವಾಮಿ ಒಂದು ಎಕರೆಗೆ ಕಬ್ಬು ಬೆಳೆಯತಕ್ಕಂತಹ ಪ್ರದೇಶದಲ್ಲಿ ಆವರೇಜ್ ಎಷ್ಟು ಟನ್ ಕಬ್ಬು ನಾವು ಬೆಳೆಯುತ್ತಿದ್ದೇವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : 40 ಟನ್ ಬೆಳೆಯುತ್ತೇವೆ.

ಶ್ರೀ ಕೆ.ಹೆಚ್. ರಂಗನಾಥ್ : ಆಗಬಹುದು, ಸಾಕಾಗಬಹುದು 40 ಟನ್ ಬೆಳೆದರೆ. ನಾನು ಕೌಜಲಗಿಯವರ ಕ್ಷೇತ್ರಕ್ಕೆ ಮೊನ್ನೆ 3ನೇ ತಾರೀಖು ಹೋಗಿದ್ದೆ. ಅಲ್ಲಿ ಮಾತನಾಡುತ್ತಿದ್ದೆ.

ಎಲ್ಲಾ ಡಿಸಿಹೆಚ್‌ಗೆ ಹಾಕಿಯಾಯಿತು. ಅಲ್ಲಿ ಒಂದು ಎಕರೆಗೆ ಒಂದು ಕ್ವಿಂಟಾಲ್ ಬಂದಿದೆ. ಅವರು ಊರಿನಲ್ಲಿ ಬಾಬಾ ಗೌಡ ಪಾಟೀಲ್ ಒಂದು ಹಳ್ಳಿ ಹೆಸರು ಹೇಳುತ್ತಿದ್ದರು. ಅವರ ತಾಲ್ಲೂಕಿನಲ್ಲಿ 6 ಸಾವಿರ ಎಕರೆ ಭೂಮಿಗೆ, ನೀರಾವರಿ ಪ್ರದೇಶದಲ್ಲಿ ಇರತಕ್ಕಂಥಾದ್ದು, ಅಲ್ಲಿ ಹತ್ತಿ ಬೆಳೆದಿದ್ದಾರೆ. ಹೀಗೆ ನಮ್ಮ ರೈತರು ವಿಚಾರ ಮಾಡದೇ ಯಾವುದೋ ಕಡೆ ಹೋಗಿ 40 ಟನ್ ಬೆಳೆದು ಬಿಟ್ಟು 6 ನೂರು ರೂಪಾಯಿ ಕೊಡು, 700, ರೂಪಾಯಿ ಕೊಡು, 800 ರೂಪಾಯಿ ಕೊಡು ಸಾವಿರ ರೂಪಾಯಿ ಕೊಡು ಎಂದರೆ ಏನಾಗುತ್ತದೆ. ತಾವು ಸ್ವಲ್ಪ ವಿಚಾರ ಮಾಡಿ, ಇದು ಮಾತನಾಡುವುದಕ್ಕೆ, ವಾದಕ್ಕೆ ಬಹಳ ಚೆನ್ನಾಗಿ ಕಾಣಬಹುದು. ಎಕರೆವಾರು ಇಳುವರಿ ಜಾಸ್ತಿಯಾಗುವುದಕ್ಕೆ ರೈತ ಪ್ರಯತ್ನ ಮಾಡದೇ ಹೋದರೆ ಅದು ಏನು ಉಪಯೋಗ ಇಲ್ಲದೇ ಇರತಕ್ಕಂತಹ ಉದ್ಯೋಗ ಆಗುತ್ತದೆ. ಹಾಗಾಗಿ ಕೊಳ್ಳುವವನ ಮೇಲೆನೇ ಹೆಚ್ಚು ಭಾರವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತುಂಬಾ ಪ್ರಮುಖವಾದಂತಹ. ಸಂಗತಿಯನ್ನು ಸನ್ಮಾನ್ಯ ಹಿರಿಯ ಸಚಿವರಾದಂತಹ ರಂಗನಾಥುವರು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಕಾಂಪ್ಲೆಕ್ಸ್ ಗೊಬ್ಬರ ಇರಲಿ, ಕ್ರಿಮಿನಾಶಕಗಳು ಇರಲಿ, ಗಗನಕ್ಕೆ ಏರುವಂತಹ ಈ ಸಂದರ್ಭದಲ್ಲಿ ಯಾವುದೇ ರೈತ ರಾಗಿ ಜೋಳ ಭತ್ತವನ್ನು ಬೆಳೆದು ಅವನು 2 ಹೊತ್ತು ಊಟ ಮಾಡದೇ ಇರುವಂತಹ ದುಸ್ಥಿತಿ ಬಂದು ತಲುಪಿದ್ದಾನೆ. ಅದಕ್ಕೆ ನಾನು ಹೇಳುತ್ತಿರುವಂತಾದ್ದು ಅವನು ಬೆಳೆದಂತಹ ಬೆಳೆಗೆ, ಇವತ್ತು ಗೋವಿನ ಜೋಳ ರಾಯಚೂರಿನಲ್ಲಿ ಬೇರೆ ಭಾಗದಲ್ಲಿ ಇರಬಹುದು, ನೀವು ಬೆಂಬಲ ಬೆಲೆಯನ್ನು ಘೋಷಣೆ ಮಾಡಿದಿರಿ, ಆದರೆ ಕೊಂಡುಕೊಳ್ಳುವಂತಹ ವ್ಯವಸ್ಥೆ ಮಾಡಲಿಲ್ಲ. ನಾನು ಅಲ್ಲಿಗೆ ಹೋಗಿಬಂದಿದ್ದೇನೆ. ಹೀಗಾಗಿ ಯಾವ ಬೆಲೆಗೆ ಕೊಂಡು ಕೊಳ್ಳುವುದಕ್ಕೆ ರೈತ ಸಿದ್ಧನಿದ್ದಾನೋ, ನಿಮ್ಮ ಸರ್ಕಾರ ಬೆಂಬಲ ಬೆಲೆಗೆ ಕೊಂಡುಕೊಳ್ಳುವುದಕ್ಕೆ ರೆಡಿ ಇದೆಯೋ ಅದನ್ನು ನೀವು ವ್ಯವಸ್ಥೆ ಮಾಡಿ ಮಾರ್ಕೆಟ್ಟನ್ನು ತೆಗೆದು ಅಲ್ಲಿ ಕೊಳ್ಳುವಂತಹ ವ್ಯವಸ್ಥೆ ಮಾಡಲಿಲ್ಲ. ಎಲ್ಲಾ ಭತ್ತಕ್ಕೆ ಒಂದು ಬೆಲೆ ಇಲ್ಲವೋ ಅಲ್ಲಿ 30 ರೂಪಾಯಿ ಬೆಂಬಲ ಬೆಲೆ ಜಾಸ್ತಿ ಮಾಡಿದ್ದಾರೆ. ನಾನು ಹೇಳುವುದು ಅಧ್ಯಕ್ಷರೇ, ತಾವು ಈ ಸದನದ ಮುಂದೆ ಇಡಿ. ಮೊನ್ನೆ ಕಳೆದ 2-3 ವರ್ಷದಲ್ಲಿ ತಾವು ಬೆಂಬಲ ಬೆಲೆಯನ್ನು ಘೋಷಣೆ ಮಾಡಿದ ಮೇಲೆ ರಾಗಿ, ಜೋಳ, ಭತ್ತವನ್ನು ಎಷ್ಟೆಷ್ಟು ಖರೀದಿ ಮಾಡಿದ್ದಾರೆ. ಎಷ್ಟು ಮುಂದೆ ಬಂದಿದ್ದೀರಿ. ನಾವು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ನಿಮ್ಮ ಬೆಂಬಲ ಬೆಲೆ ಫಿಕ್ಸ್ ಮಾಡಿದಮೇಲೂ ಸಹ ಮಾರ್ಕೆಟ್ ಬೆಲೆಗಿಂತ ಕಡಿಮೆ ಇರುವುದರಿಂದ ಅವರು ನಿಮ್ಮ ಮುಂದೆ ಬರುತ್ತಾ ಇಲ್ಲ. ಯಾವುದೋ ಮಾರ್ಕೆಟ್ ಬೆಲೆಗಿಂತ ಅಲ್ಲಿ ಕಡಿಮೆ ಇದೆ ನಿಮಗೆ ಕೊಡುವುದಕ್ಕೆ ಸಿದ್ದ ಇದ್ದರೆ ಅಂತಹ ಗೋವಿನ ಜೋಳ ಖರೀದಿ ಮಾಡುವುದಕ್ಕೆ ಸಾಧ್ಯವಿಲ್ಲ.ಇದು ವಿಷಯಾಂತರ ಆಗುತ್ತಿದೆ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಇವತ್ತು ನೀವು ನಿಮ್ಮ ಸರ್ಕಾರ ಬರುತ್ತೀರ, ಮುಂದೆ ಬರುತ್ತೀರ, ಯಡಿಯೂರಪ್ಪನವರೇ, ಈ ರಾಗಿ, ಈ ಜೋಳ ಈ ಭತ್ತ ಇದನ್ನು ಈ ಪಡಿತರ ವ್ಯವಸ್ಥೆಯಲ್ಲಿ

ಮಧ್ಯಮ ವರ್ಗದ ಜನ, ಕಡು ಬಡವರು ಯಾರು ಉಪಯೋಗ ಮಾಡುತ್ತಿದ್ದಾರೆ ಅವರಿಗೆ ನಾವು ಸಬ್ಸಿಡಿಯನ್ನು ಕೊಡುತ್ತೇವೆ, ಇವತ್ತು ಈ ಕೇಂದ್ರ ಸರ್ಕಾರ ಜಾಸ್ತಿ ಮಾಡಿರುವಂತಹ ಬೆಲೆಯಂತೆ ಮಾಡದೇನೆ, ನಮ್ಮ ಸರ್ಕಾರದ ಬೊಕ್ಕಸಕ್ಕೆ ಹಣ ಕಡಿಮೆ ಬಂದರೂ ಪರವಾಗಿಲ್ಲ, ನಾವು ಬೇರೆ ಬಾಬಿನಲ್ಲಿ ತುಂಬಿ ಸಬ್ಸಿಡಿ ಕೊಟ್ಟು ಅದನ್ನು ಹಳೇ ಬೆಲೆಗೆ ನಾವು ಮಾರುತ್ತೇವೆ ಎಂದು ಹೇಳುತ್ತೀರಾ ಅಥವಾ ಯಾವ ಪೆಟ್ರೋಲ್ ದರ ಇವತ್ತು ಲೀಟರ್‌ಗೆ ಒಂದು ರೂಪಾಯಿ ಜಾಸ್ತಿಯಾಗಿ ಒಂದು ರೂಪಾಯಿಗೆ 22 ಪೈಸೆ ನೀವು ತೆರಿಗೆಯನ್ನು ಹಾಕುತ್ತಿದ್ದೀರಿ ಆ ತೆರಿಗೆಯನ್ನು ನಾವು ಕಲೆಕ್ಟ್ ಮಾಡದೇನೆ ಅದನ್ನು ಕಡಿಮೆ ಬೆಲೆಗೆ ಪೆಟ್ರೋಲ್ನು ಮಾರುವಂತಹ ವ್ಯವಸ್ಥೆ ಮಾಡುತ್ತೇನೆ .ಎಂದು ಹೇಳುತ್ತೀರಾ? ಇವತ್ತು ಯಾವ ಕೇಂದ್ರ ಸರ್ಕಾರ ಈ ಅಗತ್ಯ ವಸ್ತುಗಳ ಬೆಲೆಯನ್ನು ಅಧಿಕಾರಕ್ಕೆ ಬಂದು 3 ತಿಂಗಳಲ್ಲಿ ಇಳಿಸುತ್ತೇವೆ ಎಂದು ಹೇಳಿ ಕಳೆದ 3 ವರ್ಷದಲ್ಲಿ ಪ್ರತಿವರ್ಷ ಸತತವಾಗಿ ಬೆಲೆಯನ್ನು ಏರಿಸಿಕೊಂಡು ಹೋಗುತ್ತಿದ್ದೀರಿ. ಈಗ ಇನ್ನೊಂದು ಬಹಳ ಪ್ರಮುಖವಾದಂತಹ ಸಂಗತಿ ಸನ್ಮಾನ್ಯ ಅಧ್ಯಕ್ಷರೇ, ಈ ಹಣ ಮುಂಗಡ ಪತ್ರದ ಪಾವಿತ್ರ್ಯತೆ ಏನಾದರೂ ಉಳಿದಿದೆಯೇ? ಬಜೆಟ್‌ನ್ನು 22-24ಕ್ಕೆ ಮಂಡನೆ ಮಾಡುವಂಥವರು ನೀವು ಅದಕ್ಕೆ ಮೊದಲೇ ಅಗತ್ಯ ವಸ್ತುಗಳ ಬೆಲೆಯನ್ನು ಗಗನಕ್ಕೆ ಏರಿಸಿಬಿಟ್ಟು, ಪಡಿತರ ವ್ಯವಸ್ಥೆಯಲ್ಲಿ ಮಾರಬೇಕಾದ ವಸ್ತುಗಳನ್ನು ಗಗನಕ್ಕೆ ಏರಿಸಿ, ಪೆಟ್ರೋಲಿಯಂ ದರವನ್ನು ಜಾಸ್ತಿ ಮಾಡಿ ಆಮೇಲೆ ನಾವೆಲ್ಲಾ ಕೂಗಿದ ಮೇಲೆ ಒಂದು 5-10-15ಪೈಸೆ ಇಳಿಸುತ್ತೇವೆ ಎಂದು ಹೇಳುವಂತಾದ್ದು ಎಷ್ಟರಮಟ್ಟಿಗೆ ಕೇಂದ್ರ ಸರ್ಕಾರದ ನಿಲುವು ಸರಿಯಾದಂತಾದ್ದು. ಅದಕ್ಕಾಗಿ ಪಕ್ಷ ಬೇಧಗಳನ್ನು ಮರೆತು ನಾವು ಯೋಚನೆ ಮಾಡಬೇಕು. ಈ ಒಂದು ಪೆಟ್ರೋಲಿಯಂ ದರಗಳನ್ನು ಜಾಸ್ತಿ ಮಾಡಿದರೆ ಏನಾಗುತ್ತದೆಂದು ಸಾಗಾಣಿಕೆ ದರ ಜಾಸ್ತಿಯಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಓಡಾಟ ಮಾಡುವಂತಹ ಸಾರಿಗೆ ದರ ಜಾಸ್ತಿಯಾಗುತ್ತದೆ. ಮತ್ತು ಪ್ರತಿಯೊಂದು ವಸ್ತುವಿನಲ್ಲೂ ಸಾಗಾಣಿಕೆ ದರ ಜಾಸ್ತಿಯಾಗುತ್ತದೆ. ಎಲ್ಲದರ ಪರಿಣಾಮ • ಪ್ರತಿಯೊಂದು ವಸ್ತುವಿನ ಮೇಲೆ ಆಗುತ್ತದೆ. ಕೇವಲ ಒಂದು ಅಗತ್ಯ ವಸ್ತುಗಳಲ್ಲ ಇದರಿಂದ ಜೀವನಾವಶ್ಯಕ ವಸ್ತುಗಳ ಮೇಲೆ ದುಷ್ಪರಿಣಾಮ ಆಗುವುದಿದೆ. ಅದಕ್ಕಾಗಿ ಈ ಸದನದಲ್ಲಿ ಯಾವ ಕಾರಣಕ್ಕೂ ಸಹ ಈ ಪೆಟ್ರೋಲಿಯಂ ದರವನ್ನು ಜಾಸ್ತಿ ಮಾಡಿರುವಂಥಾದ್ದು, ಈ ಜೀವನಾವಶ್ಯಕ ವಸ್ತುಗಳನ್ನು ಜಾಸ್ತಿ ಮಾಡಿರುವಂಥಾದ್ದನ್ನು ಸರ್ವಾನುಮತದಿಂದ ಖಂಡನೆ ಮಾಡಿ ಕೇಂದ್ರ ಸರ್ಕಾರ ಇದನ್ನು ಮಾಡಕೂಡದು ಎನ್ನುವಂತಹ ಒತ್ತಾಯವನ್ನು ಕರ್ನಾಟಕದ ನಾಲ್ಕೂವರೆ ಕೋಟಿ ಜನರ ಪರವಾಗಿ ಕಳುಹಿಸಬೇಕಾಗಿದೆ, ಮತ್ತು ಇವತ್ತು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಬೇಕಾಗಿದೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ನಾವು ಈ ಪಡಿತರ ವ್ಯವಸ್ಥೆಯಲ್ಲಿ ವಿತರಣೆ ಮಾಡುವಂತಹ ವಸ್ತುಗಳು ಏನು ಇದೆ ಅದನ್ನು ಕೇಂದ್ರ ಸರ್ಕಾರ ಏರಿಸಿದರೂ ಸಹ, ಆ ರೀತಿ ಮಾಡದೇ ಹಳೇ ದರದಲ್ಲೇ ಅದಕ್ಕೆ ಸಬ್ಸಿಡಿಯನ್ನು ಕೊಟ್ಟು ಕಡಿಮೆ ದರಕ್ಕೆ ಮಾರಾಟ ಮಾಡುತ್ತೇವೆ ಎನ್ನುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಘೋಷಣೆಯನ್ನು ಮಾಡಬೇಕಾಗಿದೆ. ಇಲ್ಲಿ ಪೆಟ್ರೋಲಿಯಂಗೆ ನೀವು ಒಂದು ರೂಪಾಯಿಗೆ 22 ಪೈಸೆ ತೆರಿಗೆಯನ್ನು ಹಾಕುತ್ತಿದ್ದೀರಿ.

ಸ್ವಾಮಿ ತಾವು ಅದರ ಅಂಕಿ ಅಂಶಗಳನ್ನು ಕೊಡಿ. ಇಡೀ ದೇಶದಲ್ಲಿ ನಮ್ಮ ರಾಜ್ಯದಲ್ಲಿ ಮಾತ್ರ ಇಷ್ಟು ದೊಡ್ಡ ಪ್ರಮಾಣದಲ್ಲಿ ತೆರಿಗೆಯನ್ನು ವಸೂಲು ಮಾಡುತ್ತಿದ್ದಾರೆ. ಇದು ಸಾಮಾನ್ಯ ನೌಕರರ ಮೇಲೆ ಕೆಟ್ಟ ಪರಿಣಾಮವಾಗುತ್ತದೆ. ಇದು ಒಬ್ಬ ಸಾಮಾನ್ಯ ವ್ಯಕ್ತಿ ಮೇಲೆ ಪರಿಣಾಮವಾಗುತ್ತದೆ. ಎಲ್ಲಾ ಜನರ ಮೇಲೆ

ಇದರ ಪರಿಣಾಮವಾಗುತ್ತದೆ. ಹಳ್ಳಿಯಲ್ಲಿ ವಾಸ ಮಾಡುವಂತಹ ಹರಿಜನ ಗಿರಿಜನ ಇರಬಹುದು, ಸಾಮಾನ್ಯ ಜನ ಇರಬಹುದು. ಸೀಮೆಎಣ್ಣೆ ದರಗಳೆಲ್ಲ ಜಾಸ್ತಿಯಾಗಿರುವುದರಿಂದ ಒಂದು ಪಂಪ್ಸೆಟ್ಟನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಡೀಸೆಲ್ ಪಂಪ್ಪನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ರೀತಿ ಒಂದು ವಿಚಿತ್ರವಾದಂತಹ ಪರಿಸ್ಥಿತಿ ಒದಗಿರಬೇಕಾದರೆ ವಾಪಸ್ಸು ಏನೂ ಸವಲತ್ತುಗಳು ಇಲ್ಲ. ಇನ್ನೊಂದು ಕಡೆ ರೈತನ ಮೇಲೆ ಮತ್ತು ಸಾಮಾನ್ಯ ಜನರ ಮೇಲೆ ಈ ತೆರಿಗೆಯನ್ನು ಜಾಸ್ತಿ ಮಾಡಿಕೊಂಡು ಹೋಗುವಂಥಾದ್ದು ಮತ್ತು ಅವನು ಬೆಳೆದಂತಹ ಬೆಳೆಗೆ ಸರಿಯಾದಂತಹ ವೈಜ್ಞಾನಿಕವಾದಂತಹ ಬೆಲೆ ಕೊಡದೇ ಇರುವಂತಾದ್ದು. ತಾವೇ ಹೇಳಿದಂತೆ ಸ್ವಾಮಿ ಇವತ್ತು ನಾನು ಹೇಳುತ್ತೇನೆ, ನೀವೇ ನಾಳೆ ಒಪ್ಪಿಕೊಳ್ಳುತ್ತೀರಿ. ಇದೇ ನಿಲುವನ್ನು ನೀವು ಮುಂದುವರೆಸಿಕೊಂಡು ಹೋದರೆ ಯಾವುದೋ ದೊಡ್ಡ ದೊಡ್ಡ ಹೊರದೇಶದ ಉದ್ಯಮಗಳನ್ನು, ಆ ವಿಶ್ವಬ್ಯಾಂಕ್‌ನ್ನು ತೃಪ್ತಿಪಡಿಸುವುದಕ್ಕೋಸ್ಕರ ಅವರು ಕೊಡುವಂತಹ ಸಾಲದಲ್ಲಿ ನಮ್ಮ ದೇಶ ನಡೆಸುತ್ತಿದ್ದೇವೆ ಎಂದು ಅದೆಲ್ಲಾ ಷರತ್ತುಗಳನ್ನು ಒಪ್ಪಿಕೊಳ್ಳುವುದರ ಮೂಲಕ ಇಡೀ ದೇಶವೇ ಒಂದು ದಿವಸ ಹೊರದೇಶಕ್ಕೆ ಒತ್ತೆ ಇಡುವಂತಹ ದುಸ್ಥಿತಿ ಬರುವಂತಾದ್ದು ಇದೆ. ಈ ಒಂದು ವಿಶ್ವಬ್ಯಾಂಕಿನ ಕಪಿಮುಷ್ಟಿಯಲ್ಲಿ ನೀವು ಸಿಕ್ಕಿಕೊಂಡು ಅವರು ಹೇಳಿದಂತೆ ಕೇಳಿಕೊಂಡು ಇವತ್ತು ಈ ಒಂದು ಪೆಟ್ರೋಲಿಯಂ ದರವನ್ನು ಜಾಸ್ತಿ ಮಾಡುವುದು, ಮತ್ತು ರೈತನನ್ನು ಸರ್ವನಾಶ ಮಾಡುವಂತಾದ್ದು, ಮತ್ತು ಸಾಮಾನ್ಯ ಜನಗಳು ಈ ನಿತ್ಯ ವಸ್ತುಗಳನ್ನು ಕೊಳ್ಳುವುದಕ್ಕೆ ಆಗದೇ ಇರುವಂತಹ ಒಂದ ದುಸ್ಥಿತಿ ಬರುತ್ತದೆ. ಅದಕ್ಕಾಗಿ ಉಪಾಧ್ಯಕ್ಷರೇ, ನಾನು ವಿನಂತಿ ಮಾಡುತ್ತೇನೆ ದಯಮಾಡಿ ನಿಲುವಳಿ ಸೂಚನೆ ಒಳಗಡೆ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಒಂದು ಖಂಡನಾ ನಿರ್ಣಯವನ್ನು ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ, ಸಬ್ಸಿಡಿ ರೂಪದಲ್ಲಿ ಕಡಿಮೆ ಬೆಲೆಗೆ ಹೋದ ವರ್ಷದ ರೀತಿಯಲ್ಲಿ ನಾವು ಮಾರಾಟ ಮಾಡುವಂತಹ ವ್ಯವಸ್ಥೆಯನ್ನು ಜೀವನಾವಶ್ಯಕ ವಸ್ತುಗಳಿಗೆ ಸೀಮಿತವಾಗಿ ನಾವು ಮಾಡುತ್ತೇವೆ ಎನ್ನುವಂತಹ ಭರವಸೆಯನ್ನು ತಾವು ಕೊಡಬೇಕು. ಇಂತಹ ಒಂದು ಪರಿಸ್ಥಿತಿ ಇರಬೇಕಾದರೆ, ರೈತ ಕಣ್ಣೀರು ಹಾಕುತ್ತಿರಬೇಕಾದರೆ ಅವನಿಗೆ ಯಾವ ರೀತಿಯ ನೆರವಿಗೆ ಬರುತ್ತೀರ? ಇವತ್ತು ಸನ್ಮಾನ್ಯ ಹಿರಿಯ ಸಚಿವರಾದಂತಹ ರಂಗನಾಥುವರಿಗೆ ಗೊತ್ತಿರಬಹುದು. ಅನಾವೃಷ್ಟಿ, ನೆರೆಹಾವಳಿ, ಭೂಕಂಪ ಎಂದು ಮಾನ್ಯ ರಾಜ್ಯಪಾಲರ ಮೊದಲನೆಯ ಪ್ಯಾರಾದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡುವುದು ಅದು ಬೇರೆ ವಿಷಯ. ಅದರ ಬಗ್ಗೆ ಪ್ರಸ್ತಾಪ ಮಾಡೋಣ. ಆದರೆ ಅದೇ ರೈತ ಯಾರು ಅತಿವೃಷ್ಟಿ ನೆರೆಹಾವಳಿ, ಭೂಕಂಪಕ್ಕೆ ತುತ್ತಾಗಿದ್ದಾನೆ ಅವನಿಂದ ಬಲಾತ್ಕಾರದ ಸಾಲ ವಸೂಲಿ ಮಾಡುತ್ತಿದ್ದೀರಿ. ಬೆಳೆ ಸರ್ವನಾಶ ಆಗಿರಬೇಕಾದರೆ ರೈತನು ಬೀದಿ ಪಾಲಾಗಿರಬೇಕಾದರೆ ಆ ರೈತನ ಸಾಲವನ್ನು ಮನ್ನಾ ಮಾಡಿ ಅವನು ಗೌರವದಿಂದ ಜೀವನ ಮಾಡುವಂತಹ ವ್ಯವಸ್ಥೆ ಮಾಡಬೇಕಾದಂತಹ ನೀವು ಇನ್ನೊಂದು ಕಡೆ ಈ ರೀತಿ ಗೊಂದಲದಲ್ಲಿ ಆ ರೈತನನ್ನು ಸಿಕ್ಕಿಸಿ ಬಲತ್ಕಾರದ ಸಾಲ ವಸೂಲು ಮಾಡುತ್ತಿದ್ದೀರಿ. ಈ ರೀತಿ ರೈತ ವಿರೋಧಿ ನಿಲುವನ್ನು ಈವತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಮಾಡುತ್ತಿವೆ. ಇದರಿಂದ ಈ ನಾಡಿನ ಅಭಿವೃದ್ಧಿಗೆ, ಪ್ರಗತಿಗೆ ಧಕ್ಕೆಯಾಗುವಂತಹ ಒಂದು ಸಂದರ್ಭ ಬಂದಿರುವುದರಿಂದ ಸರ್ವಾನುಮತದಿಂದ ನಿರ್ಣಯವನ್ನು ಮಾಡಿ ಒಂದು ಖಂಡನಾ ನಿರ್ಣಯವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು ಯಾವುದೇ ಕಾರಣಕ್ಕೆ ಈ ಪೆಟ್ರೋಲಿಯಂ ದರ ಏರಿಕೆ ಮಾಡುವುದನ್ನು ವಾಪಸ್ಸು ಪಡೆಯಬೇಕು. ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಮೊದಲಿದ್ದಂಥ ದರಕ್ಕೆ ಇಳಿಸಬೇಕು ಎಂದು ಒತ್ತಾಯ ಮಾಡಿ ಇಲ್ಲಿ ಕಳುಹಿಸಿಕೊಟ್ಟು ಮತ್ತು ನಿಲುವಳಿ ಸೂಚನೆ ಮೂಲಕ ದೀರ್ಘವಾದ ಚರ್ಚೆಗೆ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಅವಕಾಶ ಮಾಡಿಕೊಡಬೇಕು ಎಂದು ನಾನು ಒತ್ತಾಯಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ದೇಶಪಾಂಡೆಯವರು, ನಮ್ಮ ಸ್ನೇಹಿತರು ಈ ನಿಲುವಳಿ ಸೂಚನೆಯನ್ನು ತಾವು ಒಪ್ಪಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಾ, ಮಾನ್ಯ ಸಿಂಧ್ಯಾರವರು ಭಾಷಣ ಮಾಡುವಾಗ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಬೆಲೆ ಏರಿಕೆ ಬಗ್ಗೆ ಏನೂ ತಿಳಿಸಿಲ್ಲ ಎಂದು ಹೇಳುತ್ತಾ ನಾನು ನನ್ನ ಭಾಷಣದಲ್ಲಿ ಬೆಲೆ ಏರಿಕೆ ತಡೆಯುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಬಹಳ ಸ್ಪಷ್ಟವಾಗಿ ತಿಳಿಸಿದ್ದೇನೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಲಿಲ್ಲ.

ಶ್ರೀ ಕೆ.ಹೆಚ್ ರಂಗನಾಥ್ : ನೀವು ಯಾವಾಗ ರಾಜ್ಯಪಾಲರಾದಿರಿ?

ಶ್ರೀ ವಾಟಾಳ್ ನಾಗರಾಜ್ : ನಾನು ನಿನ್ನೆ ರಾಜ್ಯಪಾಲರ ಭಾಷಣದಲ್ಲಿ ಹೇಳಲಿಲ್ಲ, ನನ್ನ ಭಾಷಣದಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ : ನೀವು ನಿಮ್ಮ ಭಾಷಣದಲ್ಲಿ ತಿಳಿಸಿರಬಹುದು, ನೀವು ಯಾವಾಗ ರಾಜ್ಯಪಾಲರು ಆದಿರಿ.

ಶ್ರೀ ವಾಟಾಳ್ ನಾಗರಾಜ್ : ರಾಜ್ಯಪಾಲರ ಭಾಷಣದ ಪ್ರತಿ ಭಾಷಣ ನಾನು ಮಾಡಿದ್ದೇನಲ್ಲಾ ಅದನ್ನು ನಾನು ತಿಳಿಸಿದ್ದೇನೆ.

ಶ್ರೀ ಸಿ. ಭೈರೇಗೌಡ : ನಮಗೆ ಯಾರಿಗೂ ಅದರ ಪ್ರತಿ ಕೊಡದೇನೆ ನೀವು ಓದಿಲ್ಲ ಎಂದು ಹೇಳಿದರೆ,ಹೇಗೆ? ನಾವು ಇಲ್ಲಿ ಗೋಡೆ ಮೇಲೆ ಬರೆದಿರುವುದನ್ನು ನೋಡಬೇಕೇ? ಇವರು ಯಾರಿಗೆ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನನ್ನ ಭಾಷಣದಲ್ಲಿ ಬೆಲೆ ಏರಿಕೆ ವಿರುದ್ಧ ತೀವ್ರವಾಗಿ ಚರ್ಚೆ ಮಾಡಿದ್ದೇನೆ.

ಉಪಾಧ್ಯಕ್ಷರು : ವಾಟಾಳ್ ನಾಗಾರಾಜ್‌ರವರೇ, ನಿಮ್ಮ ಭಾಷಣದ ಬಗ್ಗೆ ಯಾರ ಗಮನಕ್ಕೂ ಬಂದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್ ಅವರು ಹಿರಿಯ ಸದಸ್ಯರು. ನೀವು ಹೇಳುವಂತಹ ಮಾತನ್ನು ಬಹಳ ಗಂಭೀರವಾಗಿ ಜವಾಬ್ದಾರಿಯಿಂದ ಕೇಳುತ್ತಿದ್ದೇವೆ. ರಾಜ್ಯಪಾಲರು ಭಾಷಣ ಮಾಡಬೇಕು, ಅದು ಒಂದು ಸಂಪ್ರದಾಯ. ಅದರ ಬಗ್ಗೆ ಚರ್ಚೆ ನಡೆಯಬೇಕು, ಅದರಲ್ಲಿ ತಮ್ಮದು ಒಂದು ಭಾಷಣ ಇದೆ, ಆಗ ನಾನು ಹೇಳಿಬಿಟ್ಟಿದ್ದೀನಿ ಎಂದು ಹೇಳಿದರೆ ಅದಕ್ಕೆ ಏನಾದರೂ ಅರ್ಥ ಬರುತ್ತದೆಯೇ, ಗಾಂಭೀರ್ಯ ಬರುತ್ತದೆಯೇ? ಅದಕ್ಕೆ ಯಾರಾದರೂ ಪುರಸ್ಕಾರ ಕೊಡುತ್ತಾರ? ತಮ್ಮಂತಹ ಹಿರಿಯ ಸದಸ್ಯರು ಹಾಗೆ ಹೇಳಿದರೆ ರಾಜ್ಯದ ಜನರು ಏನು ತಿಳಿದುಕೊಳ್ಳಬಹುದು ಎನ್ನುವುದನ್ನು ಸ್ವಲ್ಪ ಅರ್ಥಮಾಡಿಕೊಂಡು ಹೇಳುವುದು ಬಹಳ ಒಳ್ಳೆಯದು. ಆದುದರಿಂದ ತಾವು ಏನು ಈಗ ನಿಲುವಳಿ ಸೂಚನೆಯನ್ನು ಅನುಮತಿ ಕೊಡುವುದರ ಬಗ್ಗೆ ಇಟ್ಟಿದ್ದೀರಿ, ನೀವು ಏನು ಪ್ರಸ್ತಾಪ ಮಾಡುತ್ತಿದ್ದೀರಿ ಅದನ್ನು ಮಾಡಿ. ಈಗ ವಿಷಯ ಗಾಂಭೀರ್ಯವಾಗಿದೆ. ನಿಲುವಳಿ ಸೂಚನೆಗೆ ಅನುಮತಿ ಕೊಡುವುದರ ಬಗ್ಗೆ ಅಧ್ಯಕ್ಷರನ್ನು ಒಪ್ಪಿಸತಕ್ಕಂತಹ ಕೆಲಸ ಮಾಡುತ್ತಿದ್ದೀರಿ. ಅಷ್ಟಕ್ಕೆ ಸೀಮಿತವಾಗಿ ತಾವು ಮಾಡಿದರೆ ನಾವು ಬಹಳ ಸಂತೋಷದಿಂದ ಮತ್ತು ಗೌರವದಿಂದ ಕೇಳುತ್ತೇವೆ. ತಮ್ಮ ಸಾಧನಕ್ಕೆ ಚ್ಯುತಿ ಬರುವಂತಹ ಅಥವಾ ಸ್ಥಾನಕ್ಕೆ ಬೆಲೆ ಕಡಿಮೆ ಆಗತಕ್ಕಂತಹ ರೀತಿಯಲ್ಲಿ ತಾವು ನಿರ್ವಹಿಸಬಾರದು ಎಂದು ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ನನ್ನ ಬಗ್ಗೆ ಎಷ್ಟು ಕರುಣೆ ಇಟ್ಟಿದ್ದೀರಿ ಎಂದು ನನಗೆ ಬಹಳ ಸಂತೋಷವಾಗಿದೆ. ನೀವು ಅರ್ಥ, ಅನರ್ಥದ ಬಗ್ಗೆ ಹೇಳಿದಿರಿ, ಯಾವುದು ಅರ್ಥ ಯಾವುದು ಭಾಷಣ, ಅದರ ಬಗ್ಗೆ ತಾವು ತೆಗೆದುಕೊಂಡು ಹೋದರೆ, ನಾವು ನೀವು ಯಾವ್ಯಾವ ರೀತಿ ಭಾಷಣ ಮಾಡಿದ್ದೇವೆ ಎಂದು ಹಿಂದಿನ ಕಡತಗಳನ್ನು ತೆಗೆದು, ಯಾವರೀತಿ ಪ್ರತಿಭಟನೆ, ನಡೆದಿದೆ, ನಾವುಗಳು ಯಾವ ರೀತಿ ಇದೇ ಸದನದಲ್ಲಿ ಮಾತನಾಡಿದ್ದೇವೆ ಅದನ್ನೆಲ್ಲಾ ತೆಗೆದರೆ ಅದು ಬಹಳ ಇದೆ. ಅದರ ಬಗ್ಗೆ ಚರ್ಚೆ ಮಾಡುತ್ತಾ ಹೋದರೆ ಬಹಳ ಸುಧೀರ್ಘವಾದ ಕಾಲವಕಾಶ ಬೇಕಾಗುತ್ತದೆ. ಅರ್ಥ ಏನು? ಅದರರ್ಥ ಏನು, ಇದರ ಬಗ್ಗೆ ಯಾರ್ಯಾರ ವ್ಯಕ್ತಿತ್ವ ಏನು ಎನ್ನುವುದು ಅರ್ಥವಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇದು ಅನರ್ಥ ಎನ್ನತಕ್ಕಂಥಾದ್ದನ್ನು ಏನು ಹೇಳುತ್ತೀರಿ, ಅದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ.

1.40 ಪಿ.ಎಂ.

ಇವತ್ತು ನಾವು ಏನು ನಿಲುವಳಿ ಸೂಚನೆಯನ್ನು ತಂದಿದ್ದೇವೆ, ಈ ಸೂಚನೆಯಿಂದ ಬೆಲೆ ಇಳಿದು ಹೋಗುತ್ತದೆಂದು ನಾನು ಅಂದುಕೊಂಡಿಲ್ಲ. ಆದರೆ ನಮ್ಮ ಪ್ರತಿಕ್ರಿಯೆ ಇವತ್ತು ಏನು? ಏಕಾಏಕಿ, ರಾತ್ರೋ ರಾತ್ರಿ ಬೆಲೆ ಏರಿಸಿ, ಆಕ್ಷಣದಿಂದ ಬೆಲೆ ಜಾರಿಯಾಗುತ್ತದೆ. ಇದು ಒಳ್ಳೆಯ ಸಂಪ್ರದಾಯ ಅಲ್ಲ. ಈ ದೇಶದಲ್ಲಿ ಲೋಕಸಭೆ ಇದೆ. ಶಾಸನಸಭೆಗಳು ಇವೆ. ಮುಖ್ಯಮಂತ್ರಿಗಳು ಇದ್ದಾರೆ. ಪ್ರಜಾತಂತ್ರ ವ್ಯವಸ್ಥೆ ಇದೆ. ಈ ರಾತ್ರೋರಾತ್ರಿಯ ಬೆಲೆ ಏರಿಕೆಯ ನೀತಿಯನ್ನು ನೋಡಿದರೆ ಈ ದೇಶದಲ್ಲಿ ಯಾವುದೋ ದಂಡಿನ ಆಳ್ವಿಕೆ ಇರಬೇಕು. ಮಿಲಿಟರಿ ಪ್ರಭುತ್ವ ಇರಬೇಕು. ಅವರು ಹೇಳಿದ ತಕ್ಷಣ ಜನ ಒಪ್ಪಬೇಕು ಎನ್ನುವ ರೀತಿ ಸರಿಯಲ್ಲ. ಇವತ್ತು ಏರಿಕೆ ಯಾರ ಮೇಲೆ ಬೀಳುತ್ತದೆ? ಈ ಏರಿಕೆಯಿಂದ ಜನಸಾಮಾನ್ಯರ ಮೇಲೆ ದೊಡ್ಡ ಹೊರೆ ಬೀಳುತ್ತದೆ. ಇವತ್ತು ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಅಂತಿಮವಾಗಿ ಬಸ್ನಲ್ಲಿ ಪ್ರಯಾಣ ಮಾಡತಕ್ಕ ಪ್ರಯಾಣಿಕನ ತಲೆ ಮೇಲೆ ಬೀಳುತ್ತದೆ. ಪೆಟ್ರೋಲ್ ಬೆಲೆ 19.73 ರೂಪಾಯಿ ಇತ್ತುಸಕ್ಕರೆ ಕೇವಲ ಶ್ರೀಮಂತರೇ ತೆಗೆದುಕೊಳ್ಳುತ್ತಾರೆಯೇ? ಇಲ್ಲ. ಸಂಪೂರ್ಣ ಬಡವರೇ ಉಪಯೋಗಿಸತಕ್ಕದ್ದು. ಅದರ ಬೆಲೆ ಏರಿಸಿದ್ದರೆ.ಇವತ್ತು ಅಡಿಗೆ ಅನಿಲದ ಬೆಲೆ ಏರಿಕೆ. ಇವತ್ತು ಸೌದೆ ಕೊಡುವುದಿಲ್ಲ. ಸೀಮೆಎಣ್ಣೆ ಸಿಗುವುದಿಲ್ಲ. ಸಾಮಾನ್ಯ ಜನ, ಮಧ್ಯಮ ವರ್ಗದವರು, ಮೇಲ್ವರ್ಗದವರು ಎಲ್ಲರೂ ಕೂಡ ಅಡಿಗೆ ಅನಿಲ ಉಪಯೋಗಿಸುತ್ತಾರೆ. ಇಂತಹದ್ದರಲ್ಲಿ ಬೆಲೆ ಏರಿಕೆ ಜನಸಾಮಾನ್ಯರ ಬೆನ್ನು ಮುರಿಯುತ್ತದೆ. ಯಾವುದೇ ಒಂದು ದಿವಸವಾದರೂ ಬೆಲೆ ಇಳಿಸಿದ್ದೇವೆ ಎಂದು ಹೇಳಿದ್ದನ್ನು ನಾವು ಕೇಳಿಲ್ಲ. ನಾನು ಈ ಬಗ್ಗೆ ಸುಧೀರ್ಘ ಭಾಷಣಕ್ಕೆ ಹೋಗದೆ, ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತಿದ್ದೇನೆ. ಈ ಸದನದಲ್ಲಿ ಕೇಂದ್ರ ಸರ್ಕಾರ ಮಾಡಿರತಕ್ಕ ಈ ಬೆಲೆ ಏರಿಕೆ ನೀತಿಯನ್ನು ಸಮಗ್ರವಾಗಿ ಖಂಡಿಸಬೇಕಾಗಿದೆ. ಆ ಬಗ್ಗೆ ಇಲ್ಲಿ 'ಖಂಡಿಸತಕ್ಕ' ಎನ್ನುವ ಪದ ಸೇರಿಸಿ ನಿರ್ಣಯ ತರಬೇಕೆಂದು ಇಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಮತ್ತು ಈ ನಿಲುವಳಿ ಸೂಚನೆಯನ್ನು ತಾವು ಒಪ್ಪಿ ಚರ್ಚೆಗೆ ಅವಕಾಶವನ್ನು ಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ. ಎನ್.ಬಿ. ನಂಜಪ್ಪ : ಬೆಲೆ ಏರಿಕೆ ಆಗಿದೆ ಎಂದು ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದರು. ಇದಕ್ಕೆ ಕಾರಣಗಳನ್ನು ಅವರು ಹೇಳಿಲ್ಲ. ಅಧ್ಯಕ್ಷರೇ, ಕಾರಣ ಕೊಟ್ಟು ಸೈಂಟಿಫಿಕ್ ಬೇಸಿಸ್ಮೇಲೆ ಬೆಲೆ ನಿಯಂತ್ರಣ ಮಾಡತಕ್ಕ ವ್ಯವಸ್ಥೆ ಈ ದೇಶದಲ್ಲಿ ಇದೆ.

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಡಾ: ಎನ್. ಬಿ. ನಂಜಪ್ಪ : ಮೊದಲು 4-5 ವರ್ಷದಿಂದ ಬೆಲೆ ಏರಿಕೆ ಯಾವ ರೀತಿ ಆಗಿದೆ ಎಂಬುದನ್ನು ನೋಡಿದರೆ......

ಶ್ರೀ ವಾಟಾಳ್ ನಾಗರಾಜ್ : ನಮಗೆ ಮಾನ್ಯ ನಂಜಪ್ಪನವರ ಉತ್ತರ ಬೇಕಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಬೆಲೆ ಏರಿಕೆಯ ಬಗ್ಗೆ ನಂಜಪ್ಪನವರಿಗೆ ಜನ ಇನ್ನು 9 ತಿಂಗಳಲ್ಲಿ ಉತ್ತರವನ್ನು ಕೊಡುತ್ತಾರೆ.

+ಶ್ರೀ ಎಂ.ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ವಿರೋಧ ಪಕ್ಷದ ಉಪನಾಯಕರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ವಾಟಾಳ್ ನಾಗರಾಜ್ ಅವರು ಒಂದು ನಿಲುವಳಿ ಸೂಚನೆಯನ್ನು ಮಂಡಿಸಲಿಕ್ಕೆ ಅನುಮತಿಯನ್ನು ಕೊಡಬೇಕೆಂದು ಹೇಳಿ ತಮ್ಮ ಜೊತೆಯಲ್ಲಿ ಬಹಳ ಒತ್ತಾಯ ಪೂರ್ವಕವಾಗಿ ವಿನಂತಿ ಮಾಡಿಕೊಂಡಿದ್ದನ್ನು ನಾವು ಸಮಾಧಾನದಿಂದ ಆಲಿಸಿ ಕೇಳಿದ್ದೇವೆ. ಈ ವಿಚಾರ ಬಹಳ ಗಂಭೀರವಾಗಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಇದು ವಿಚಾರ ಮಾಡಬೇಕಾದದ್ದು. ಸಾರ್ವಜನಿಕ ಚರ್ಚೆಗೆ ಕೂಡ ಇದು ವಸ್ತು ಆಗಿರತಕ್ಕ ವಿಚಾರ. ಆದರೆ ಇದನ್ನು ನಮ್ಮ ರಾಜ್ಯ ಸರ್ಕಾರ ಮಾಡಿದ ವಿಚಾರ ಅಲ್ಲ, ಮತ್ತು ಈ ಶಾಸನಸಭೆ ನಿರ್ಣಯ ಮಾಡಬೇಕಾದ ಅಥವಾ ಚರ್ಚೆ ಮಾಡಬೇಕಾದ ವಿಚಾರ ವಿಷಯಗಳೂ ಕೂಡ ಅಲ್ಲ. ಆದುದರಿಂದ ಆ ಒಂದೇ ಕಾರಣದಿಂದ ಯಾವುದೇ ಚರ್ಚೆ ಇಲ್ಲದೇ ಈ ಪ್ರಸ್ತಾವನೆಗೆ ಅನುಮತಿ ಕೊಡುವುದಕ್ಕಾಗುವುದಿಲ್ಲ. ಇದು ತಮಗೂ ತಿಳಿದಿದೆ. ಇದು ತಮ್ಮ ವಿಚಾರಕ್ಕೆ ಬಿಟ್ಟಿದ್ದು. ಆದರೆ ಕೇಂದ್ರ ಸರ್ಕಾರದ ನೀತಿ ಬಗ್ಗೆ, ಕೇಂದ್ರ ಸರ್ಕಾರ ಮಾಡಿದ ನಿರ್ಣಯಗಳ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಆಗದೇ ಇರುವುದರಿಂದ ತಾವು ಅನುಮತಿಯನ್ನು ಈ ಪ್ರಸ್ತಾವನೆಗೆ ನೀಡಲು ಸಾಧ್ಯವಾಗುವುದಿಲ್ಲ. ಆದರೆ ಈಗಾಗಲೇ ಸಾಕಷ್ಟು ಪ್ರಾಸ್ತಾವಿಕವಾದಂತಹ ಒಂದು ವಿಚಾರವನ್ನು ಹೇಳುವುದರ ಜೊತೆಯಲ್ಲಿ ವಿಶ್ವವ್ಯಾಪಿ ವಿಚಾರಗಳನ್ನೆಲ್ಲಾ ಇಲ್ಲಿ ತಂದುಬಿಟ್ಟಿದ್ದಾರೆ. ಗ್ಯಾಟ್ನಿಂದ ಹಿಡಿದು ಎಲ್ಲಾ ವಿಚಾರಗಳನ್ನು ಪ್ರಸ್ತಾಪಮಾಡಿಬಿಟ್ಟಿದ್ದಾರೆ. ಈಗ ತಮಗೇ ಗೊತ್ತಿದೆ. ಗ್ಯಾಟ್ ಬಗ್ಗೆ ಡೆಂಕಲ್ ಪ್ರಸ್ತಾವದ ಬಗ್ಗೆ ಚರ್ಚೆ ಬಂದಾಗ ಚರ್ಚಿಸೋಣ. ಚರ್ಚೆ ಇದೆ ಎಂದು ಹೇಳಿದ್ದೀರಿ. ಆದರೆ ಒಂದು ವಿಷಯ ಸ್ಪಷ್ಟವಾಗಿ ಹೇಳುತ್ತೇನೆ. ನಾವೂ ಕೂಡ ಡೆಂಕಲ್ ಪ್ರಸ್ತಾವನೆಯ ಟೆಕಸ್ಟ್ ಸಾಕಷ್ಟು ಅಧ್ಯಯನ ಮಾಡಿದ್ದೇವೆ. ನಮ್ಮ ದೇಶ ಗ್ಯಾಟ್ ಸಂಸ್ಥೆಗೆ, ಭಾರತ ಏನೋ ಹೊಸದಾಗಿ ಸೇರಿಲ್ಲ. 1946ರಲ್ಲೇ ಸೇರಿದೆ. We are one among 26 Members; we are Founder Members; we are Promoters.....

ಏನೋ ನಮ್ಮ ಸರ್ಕಾರ ಈಗ ಬಂದು, ಪ್ರಧಾನಿಯವರು ಏನೋ ಒಂದು ಮಾಡಿ ಬಿಟ್ಟಿದ್ದಾರೆನ್ನುವ ವಾತಾವರಣ ಮಾಡಬೇಕಾದ ಅವಶ್ಯಕತೆ ಇಲ್ಲ. ಸುಮಾರು 200 ದೇಶಗಳು ಸದಸ್ಯತ್ವ ಪಡೆದಿವೆ. We are one of the Founder Members 1946 ರಿಂದ.

ಶ್ರೀ ಸಿ. ಬೈರೇಗೌಡ : ಅವರು ಪ್ರಧಾನಿಯವರು ಅಲ್ಲ, ನಿಮ್ಮ ದೇವರು.

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮ್ಮನ್ನೇ ದೇವರು ಎನ್ನೋಣ. ಬೈರೇಗೌಡರೇ, ಎಲ್ಲರೂ ದೇವರೇ. ನನ್ನ ಮಟ್ಟಿಗೆ ಮನುಷ್ಯನೇ ದೇವರು. ದೇವರು ಎಂದು ಹೇಳಿ ಬೇರೆ ನಮಗೆ ಇಷ್ಟರವರೆಗೆ ಕಾಣಸಿಗಲಿಕ್ಕಿಲ್ಲ, ಇವತ್ತು ಕಲ್ಲೇ ದೇವರು ಎನ್ನುವಾಗ, ಮನುಷ್ಯನನ್ನು ಏಕೆ ದೇವರು ಎಂದು ಹೇಳಬಾರದು?

ಶ್ರೀ ಬಿ.ಎಸ್. ಯಡಿಯೂರಪ್ಪ : ಇವರು ಆ ಸಮಯದಲ್ಲಿ ದೇವರು ಎಂದು ಹೇಳದಿದ್ದರೆ ಉಳಿಯುವುದಕ್ಕಾಗುತ್ತಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಹೆರಿಗೆ ಕಷ್ಟ ಹೆತ್ತವಳಿಗೇ ಗೊತ್ತು. ಬಂಜೆಗೇನು ಗೊತ್ತು?

ಶ್ರೀ ಎಂ. ವೀರಪ್ಪ ಮೊಯಿಲಿ : ದೇವರ ದಯೆಯಿಂದ ಯಾವ ಕಷ್ಟವೂ ಇಲ್ಲ. ಕಷ್ಟ ಬಂದರೆ ತಾವು ಇದ್ದೀರಿ. ನಮ್ಮ ಸ್ನೇಹಿತರು ಎಲ್ಲರೂ ಇದ್ದಾರೆ. ಪರಿಹಾರ ಮಾಡಿಕೊಳ್ಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ವಾಟಾಳ್ ನಾಗರಾಜ್ ಅವರು ಒಪ್ಪುವುದಾದರೆ ಅವರು ಆ ಕಡೆ ಹೋಗಿ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : "ತಾವು" ಎಂದರೆ ನಮ್ಮೆಲ್ಲರನ್ನೂ ಸೇರಿಸಿದ್ದಾರೆ. ಮಾನ್ಯ ದೇಶಪಾಂಡೆಯವರನ್ನು ಸೇರಿಸಿ ಎಲ್ಲರೂ ಎಂದು ಹೇಳಿದರು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರ ಬಗ್ಗೆ ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ವಿರೋಧ ಪಕ್ಷದ ನಾಯಕರು ಹಾಗೂ ಉಪನಾಯಕರು ಕೆಲವು ವಿಚಾರ ಹೇಳಿದ್ದರಿಂದ ಹೇಳಿದೆ. ಸಬ್ಸಿಡಿ ಕ್ಯಾನ್ಸಲ್ ಮಾಡಬೇಕಾಗುತ್ತದೆ. ಡೆಂಕಲ್ ಟೆಕಸ್ಟ್ ಪ್ರಕಾರ ಏನು ಸಬ್ಸಿಡಿ ಕೊಡಬೇಕೆಂಬುದು ನಿಮಗೆ ಗೊತ್ತಿದೆ. 10 ಪರ್ಸೆಂಟ್ ಆ ಡೆವಲಪಿಂಗ್ ಕಂಟ್ರೀಸ್ಗೆ ಏನು ಸಬ್ಸಿಡಿ ಇದೆ ಅದೂ ಕೂಡ ನಮ್ಮ ದೇಶಕ್ಕೆ ಸಂಬಂಧಪಟ್ಟ ಸಬ್ಸಿಡಿ. ಅದು non-specific subsidy, product specific subsidy ಎಂದು ಇದೆ. ನಮ್ಮ ದೇಶಕ್ಕೆ ಸಂಬಂಧಪಟ್ಟಿದ್ದುದು. ಡೆಂಕಲ್ ಟೆಕಸ್ಟ ಕಾರಣದಿಂದಾಗಿ ಸಬ್ಸಿಡಿಯನ್ನು ಕಡಿಮೆ ಮಾಡಬೇಕು ಅಥವಾ ರದ್ದು ಮಾಡಬೇಕೆಂದು ಪ್ರಸ್ತಾಪ,. ಡೆಂಕಲ್ ಟೆಕಸ್ಟ್ ನಮ್ಮ ದೇಶಕ್ಕೆ ಅನ್ವಯವಾಗುವುದಿಲ್ಲ, ಇದು ಬಹಳ ಸ್ಪಷ್ಟ. ಆ ಕಾರಣದಿಂದ ಬೆಲೆ ಏರಿಸುವುದಕ್ಕೆ ಇವತ್ತು ಬಂದಿದ್ದೇವೆಂದು ಏನು ಪ್ರಸ್ತಾಪ ನಡೆದಿದೆ ಅದು ಸರಿಯಲ್ಲ. ಈ ಪ್ರಸ್ತಾವನೆ ಬಂದಿರುವುದರಿಂದ ನಾನು ಹೇಳಬೇಕಾಗಿದೆ. ಈಗಾಗಲೇ ನಮ್ಮ ಕರ್ನಾಟಕ ಸರ್ಕಾರ ಸುಮಾರು 70 ಕೋಟಿ ರೂಪಾಯಿ ಸಬ್ಸಿಡಿಯನ್ನು ಬಜೆಟ್ನಲ್ಲಿ ಕೊಟ್ಟಿದ್ದೇವೆ. ರೇಷನ್ ಕಾರ್ಡಿಗೆ ಕೊಟ್ಟಿದ್ದನ್ನು ನಾವು ಕಡಿಮೆ ಮಾಡುತ್ತಿಲ್ಲ.

ಶ್ರೀ ಬಾಬಾಗೌಡ ಪಾಟೀಲ್ : 10 ಪರ್ಸೆಂಟ್ ಸಬ್ಸಿಡಿಯನ್ನು ರಿಟೇನ್ ಮಾಡಬೇಕೆಂದು ಡಂಕಲ್ ಪ್ರಸ್ತಾವನೆಯಲ್ಲಿದೆ. ಪ್ರಾಡಕ್ಟ್ ಸಬ್ಸಿಡಿ ಎನ್ನುವಂಥಾದ್ದು ಈ 10 ಪರ್ಸೆಂಟ್ ಒಳಗಡೆ ಇದೆಯೋ ಹೇಗೆ?

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಡಂಕೇಲ್ ಟೆಕಸ್ಟ್ ಪ್ರಕಾರ We are not required to reduce the subsidy in the country, not necessary...

ಅವರು ಪ್ರಿಸ್ಕ್ರೈಬ್ ಮಾಡುವುದು ಏನೆಂದರೆ subsidies if their value is belows 10% of total value of the agriculture output in the base years of 1986 to 1988.

ಅದರ ಪ್ರಕಾರ ನಮಗೆ ಅನ್ವಯವಾಗುವುದಿಲ್ಲ. Even in the years 1986 to 1987 to 1988 - 89, it did not exceed 5.2%. Even in the subsidies given to small marginal farmers who constitute 80% of our farming population are not excluded from the subsidy...

ಬಹಳ ಸ್ಪಷ್ಟವಾಗಿ ಇದೆ. ಆದ್ದರಿಂದ ಡಂಕಲ್ ಟೆಕಸ್ಟ್ ಪ್ರಕಾರ ಸಬ್ಸಿಡಿ ಹೋಗುತ್ತದೆ ಎಂದು ಹೇಳಿ ಇವರು ಬರೀ ಗೂಬೆ ಕೂಡಿಸುವುದು. ಅದರಲ್ಲಿ ಅರ್ಥ ಇಲ್ಲ. ಅದರ ಪ್ರಕಾರ ಸಬ್ಸಿಡಿ ಹೋಗುವುದಿಲ್ಲ. ಅದಕ್ಕೂ ಇದಕ್ಕೂ ಲಿಂಕ್‌ಅಪ್ ಮಾಡುವುದಕ್ಕೆ ಹೋಗಬೇಡಿ. ಆದ್ದರಿಂದ ಇವತ್ತು 70 ಕೋಟಿ ಏನು ರಾಜ್ಯ ಸರ್ಕಾರದವರು ಸಬ್ಸಿಡಿ ಕೊಡುತ್ತಿದ್ದೇವೆ ಅದನ್ನು ಕಡಿಮೆ ಮಾಡುತ್ತಿಲ್ಲ. ಕೇಂದ್ರ ಸರ್ಕಾರದವರು ಏನು ಪ್ರಮಾಣದಲ್ಲಿ ಸಬ್ಸಿಡಿಯನ್ನು ಕೊಡುತ್ತಿದ್ದಾರೆ, ಅದನ್ನು ಕಡಿಮೆ ಮಾಡಿ ಬೆಲೆ ಏರಿಸುವುದು ಎಂಬ ವಾದ ಸರಿಯಲ್ಲ. ಏಕೆಂದರೆ fact should be brought before this House...

ತಮಗೆ ಗೊತ್ತಿದೆ ಅಧ್ಯಕ್ಷರೇ, ಕೇಂದ್ರಸರ್ಕಾರವನ್ನು ಎಲ್ಲರೂ ಹೊಗಳಿದ್ದೀರಿ. ಪ್ರೊಕ್ಯುರ್‌ಮೆಂಟ್ ಪ್ರೈಸ್ನು ಕೇಂದ್ರಸರ್ಕಾರದವರು ಜಾಸ್ತಿಮಾಡಿದಾಗ ಇಲ್ಲಿ ಎಲ್ಲರೂ ಹೊಗಳಿದ್ದಾರೆ. ಅಲ್ಲಿ ಅದು ಅನೌನ್ಸ್ ಆದಾಗ ಇಡೀ ದೇಶಕ್ಕೆ ದೇಶವೇ ಹೊಗಳಿದೆ. ರೈತರ ಸಹಾಯಕ್ಕೆ ಬಂದಿದ್ದಾರೆ, ಪ್ರೊಕ್ಯುರ್‌ಮೆಂಟ್ ಪ್ರೈಸ್ ಜಾಸ್ತಿ ಮಾಡಿದ್ದಾರೆ ಎಂದು ದೇಶಕ್ಕೆ ದೇಶವೇ ಹೊಗಳಿದೆ.

ಸ್ಟೇಟ್ ಅಡ್ವೈಸರಿ ಪ್ರೈಸ್ 425 ರೂಪಾಯಿ ಇದ್ದುದ್ದನ್ನು ಇವತ್ತು ನಾವು 465 ರೂಪಾಯಿಗಳಿಗೆ, ಅಂದರೆ ನಲವತ್ತು ರೂಪಾಯಿಷ್ಟು ಜಾಸ್ತಿ ಮಾಡಿದ್ದೇವೆ. ನನ್ನ ಹತ್ತಿರ ಮಾಹಿತಿ ಇದೆ. 91-92ಕ್ಕೆ ತಮಿಳುನಾಡಿನಲ್ಲಿ 300 ರೂಪಾಯಿ ಆಗಿದ್ದರೆ, ನಮ್ಮದು 360 ರೂಪಾಯಿ. ಎಲ್ಲಾ ರಾಜ್ಯಗಳನ್ನು ಹೋಲಿಕೆ ಮಾಡಿದರೆ highest cane price rate is paid only in Karnataka.

ನಾನು ಹೇಳುವುದು ಸ್ಟೇಟ್ ಅಡ್ವೈಸರಿ ಪ್ರೈಸ್.ಇಂಡಿವಿಜ್ಯುಯಲ್ ಫ್ಯಾಕ್ಟರಿಯವರು ಮಾಡಿರಬಹುದು. I am not telling you the individual factories rate. But, when the State Advisory price is concerned, ಬಹುಶಃ ಕರ್ನಾಟಕ ರಾಜ್ಯದ ರೈತರಿಗೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಸರಿ ಅಲ್ಲ. You may please verify.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ವೆರಿಫೈ ಮಾಡಿದ್ದೇನೆ. ಈಗ ತಮಗೆ ಗೊತ್ತಿದೆ. ಅತ್ಯಂತ ಹೆಚ್ಚಿನ ಬೆಲೆಯನ್ನು ನಾವು ಕೊಟ್ಟಿದ್ದೇವೆ. ಇಂಡಿವಿಜ್ಯುಯಲ್ ಫ್ಯಾಕ್ಟರಿಯಲ್ಲಿ ಹೇಳುವುದು ಸರಿ. ನಾವು ಸಂಕೇಶ್ವರ ಶುಗರ್ ಫ್ಯಾಕ್ಟರಿಯಲ್ಲಿ ಜಾಸ್ತಿ ಕೊಡುತ್ತಿದ್ದೇವೆ. ಮಲಪ್ರಭಾದಲ್ಲಿ ಅದಕ್ಕಿಂತ ಜಾಸ್ತಿ ಕೊಡುತ್ತಿದ್ದೇವೆ. ಆದ್ದರಿಂದ ಇವತ್ತು ಸ್ಟೇಟ್ ಅಡ್ವೈಸರಿ ಪ್ರೈಸ್ ವಿಷಯದಲ್ಲಿ ಕೇಂದ್ರಸರ್ಕಾರದಿಂದ ನೀವು ಎಲ್ಲಾ ರಾಜ್ಯಗಳಿಂದ ಜಾಸ್ತಿ ಕೊಡುತ್ತಿದ್ದೀರಿ ಎಂದು ಆಗಾಗ ವಾರ್ನಿಂಗ್ ಬರುತ್ತಿದೆ. ರೈತರ ಹಿತದೃಷ್ಟಿಯಿಂದ ನಾವು ಇದನ್ನು ಮಾಡಿದ್ದೇವೆ. ಅದನ್ನು ಜಸ್ಟಿಫೈ ಕೂಡ ನಾವು ಮಾಡುತ್ತಿದ್ದೇವೆ. ಈಗ ಸಂಕೇಶ್ವರದಲ್ಲಿ 93-94ನೇ ಸಾಲಿನಲ್ಲಿ 675 ರೂಪಾಯಿಗಳನ್ನು ಕೊಡುತ್ತಿದ್ದೇವೆ. 92-93ಕ್ಕೆ 575 ರೂಪಾಯಿಗಳನ್ನು ಕೊಟ್ಟಿದ್ದೆವು. ಈಗ ರೈತರಿಗೆ ಬೆಲೆ ಬರಬೇಕು. ಆ ಹೊರೆ ಒಂದು ಕಡೆ ಬೀಳುತ್ತದೆ. ಅದೆಲ್ಲವನ್ನೂ ಸಬ್ಸಿಡೈಸ್ಡ್ ಮಾಡುವುದಕ್ಕೆ ಆಗುವುದಿಲ್ಲ. ಹಾಗೆ ಮಾಡುವಾಗ ಕೆಲವು ಕಡೆ ಗ್ರಾಹಕರಿಗೆ ಹೊಡೆತ ಬೀಳುತ್ತದೆ. ಲೆವಿಯ ಒಂದು ಕಾನ್ಸೆಪ್ಟನ್ನು ಏಕೆ ಇಂಟ್ರೊಡ್ಯುಸ್ ಮಾಡಿದ್ದೇವೆ ಎಂದರೆ, ಪ್ರೈಸ್ ಸ್ಟೆಬಿಲೈಸ್ ಮಾಡಬೇಕೆಂದು ಅದನ್ನು ಮಾಡಿದ್ದರರೆ, ಅದಕ್ಕಾಗಿ ಅನೇಕ ಬಾರಿ ನಮ್ಮ ಬಾಬಾಗೌಡ ಪಾಟೀಲರು, ಪ್ರೊ : ನಂಜುಂಡಸ್ವಾಮಿಯವರು ಎಲ್ಲಾ ಬಂದಾಗ ನಾವು ಈ ಶುಗರ್ ಕೇನ್ ಪ್ರೈಸ್ ಮಾಡುವಾಗ ನಾವು ಹೇಳುತ್ತಲೇ ಇರುತ್ತೇವೆ. ಗ್ರಾಹಕರ ದೃಷ್ಟಿ ಕೂಡ ಸ್ವಲ್ಪ ನೋಡಿ ಎಂದು. ಹಾಗೆ ಅನೇಕಬಾರಿ ಗ್ರಾಹಕರ ವಿಚಾರ ಬಂದಾಗ, ಆ ವಿಚಾರವೇ ಬರುತ್ತದೆ. ರೈತರ ವಿಷಯ ಬರುವುದಿಲ್ಲ.

ರೈತರ ಸಭೆಯಲ್ಲಿ ರೈತರ ವಿಷಯವೇ ಬರುವುದು. ಗ್ರಾಹಕರ ವಿಚಾರ ಬರುವುದಿಲ್ಲ. ನನಗೆ ಆಶ್ಚರ್ಯ ಏನೆಂದರೆ, ವಿರೋಧ ಪಕ್ಷದ ನಾಯಕರು ಇಲ್ಲಿ ಕುಳಿತುಕೊಂಡು ಗ್ರಾಹಕರ ವಿಷಯ ಬಂದಾಗ ಬರೇ ಗ್ರಾಹಕರ ವಿಷಯವೇ ಮಾತನಾಡುತ್ತಾರೆ. ರೈತರ ವಿಚಾರವನ್ನು ಮರೆತೇ ಬಿಡುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ : ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ.

No. You should not mislead. At the cost of Punjab farmers ಎಂಬ ಮಾತನ್ನು ನಾನು ಹೇಳಿದ್ದೇನೆ. ಕರ್ನಾಟಕ ರಾಜ್ಯದ ರೈತರಿಗೆಯಾಗಲೀ, ರಾಗಿ, ಜವಾರಿಗಾಗಲೀ ಏನು ಮಾಡಿದ್ದೀರಿ? ನಾನು ಹೇಳುತ್ತಿದ್ದೇನೆ ಪಂಜಾಬ್ ಮತ್ತು ಹರಿಯಾಣದಲ್ಲಿ ನಿಮ್ಮ ಕೇಂದ್ರ ಸರ್ಕಾರದ ಪಾಲಿಸಿಯಿಂದ ಫಾರ್ಮರ್ಸ್‌ಗೆ ಬೆನಿಫಿಟ್ ಆಗಿರಬಹುದು. ನೀವು ದಯವಿಟ್ಟು ಮಿಸ್ ಲೀಡ್ ಮಾಡಬೇಡಿ.

(ಮಾನ್ಯ ಸದಸ್ಯರಾದ ಶ್ರೀ ಬಿ.ಎಚ್. ಬನ್ನಿಕೋಡ್ ಅವರು ಮಾತನಾಡಲು ಪ್ರಾರಂಭಿಸಿದರು)

ಶ್ರೀ ಎಂ. ವೀರಪ್ಪ ಮೊಯಿಲಿ : ಹಸಿರು ಶಾಲು ಹಾಕಿಕೊಂಡಿದ್ದೀರಿ. ಸಮಾಧಾನದಿಂದ ಮಾತನಾಡಿ. ನಾನು ತಿಳಿದುಕೊಂಡಿದ್ದೆ ವಿರೋಧ ಪಕ್ಷದವರು ಮಾತನಾಡುವಾಗ ರೈತರ ವಿಷಯ ಕೂಡ ಸ್ವಲ್ಪವಾದರೂ ಕೂಡ ಮಾತನಾಡುತ್ತಾರೆ ಎಂದು. ಹಾಗೆಯೇ ರೈತರ ವಿಷಯ ಮಾತನಾಡುವಾಗ ಗ್ರಾಹಕರ ವಿಷಯ ಇಲ್ಲವೆಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ನೀವು ರಾತ್ರೋರಾತ್ರಿ ರೈತರ ಪರವಾಗಿದ್ದೀರಿ ಎಂಬುದಕ್ಕೋಸ್ಕರ ಅವರು ಸುಮ್ಮನಾಗಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ಹೌದು ನಾನು ರೈತ ಕುಟುಂಬದಿಂದಲೇ ಬಂದವನು. ಆದರೆ ನಿಯೋರಾಯಟ್ಸ್ ಇದ್ದಾರಲ್ಲಾ, ಅವರು ವಿಷಯ ಮಾತ್ರಅರ್ಥವಾಗುವುದಿಲ್ಲ.ನಾನು ಮೂರು ನಾಲ್ಕು ವರ್ಷ ಇರುವಾಗಲೇ ನೇಗಿಲು ಹಿಡಿದುಕೊಂಡು ಉತ್ತಿದ್ದೇನೆ.ನನಗೇನೂ ಅದೂ ಹೊಸದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಚುನಾವಣೆ ಹತ್ತಿರಬಂದಾಗ ರೈತರ ಬಗ್ಗೆ ಅನುಕಂಪದ ಮಾತನಾಡುತ್ತೀರಿ.

ಶ್ರೀ ಎಂ.ವೀರಪ್ಪ ಮೊಯಿಲಿ : ತಾವು ಏನು ಮಾಡಿದ್ದೀರಿ ಎಂದರೆ, ಉತ್ತರ ಪ್ರದೇಶದಲ್ಲಿ ಚುನಾವಣೆಯಾಗುವವರೆಗೆ ರೈತರ ವಿಷಯ ಹೇಳಿದ್ದೀರಿ. ಮಧ್ಯ ಪ್ರದೇಶದಲ್ಲಿ ರೈತರ ಬಗ್ಗೆ ಹೇಳಿದರೂ, ಅವರು ಬಿ.ಜೆ.ಪಿ.ಯ ಕೈಬಿಟ್ಟಿರುವುದು ಏಕೆಂದು ನನಗರ್ಥವಾಗುತ್ತಿಲ್ಲ. ಮಧ್ಯಪ್ರದೇಶದಲ್ಲಿ ಹೇಳುತ್ತಾ ಇದ್ದಿರಲ್ಲಾ...

ಶ್ರೀ ವಾಟಾಳ್ ನಾಗರಾಜ್ : ನೀವು ಯಾರನ್ನು ಎತ್ತಿ ಕಟ್ಟುತ್ತಿದ್ದೀರಿ? ಜನತಾ ದಳದವರು ಗಂಭೀರವಾಗಿ ಕುಳಿತಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಒಡೆದು ಆಳತಕ್ಕ ನೀತಿಯಲ್ಲಿ ತಾವು ಪರಿಣತರು. ಆದರೆ, ರೈತರ ಪರವಾಗಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಬೆಂಬಲ ಬೆಲೆ ವಿಚಾರವಾಗಿ ಏನೂ ಮಾಡಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಅಷ್ಟು ಮಾತನಾಡಿದ್ದರೆ ನನ್ನ ಮನಸ್ಸಿಗೆ ನೆಮ್ಮದಿಯಾಗುತ್ತಿತ್ತು. ರೈತರಿಗೆ ಬೆಂಬಲ ಬೆಲೆ ಜಾಸ್ತಿ ಕೊಡಬೇಕೆಂದು ತಾವು ಒಂದು ಮಾತೂ ಹೇಳಲಿಲ್ಲ. ಇದನ್ನು ನೀವೆಲ್ಲಾ ಮರೆತುಬಿಟ್ಟಿದ್ದೀರಿ. ಇದು ನನಗೆ ಅರ್ಥವಾಗುವುದಿಲ್ಲ. ಅದಕ್ಕಾಗಿ ನಾನು ಇದನ್ನು ಪ್ರಸ್ತಾವನೆ ಮಾಡಿದೆ. ಆದರೆ, ರೈತರ ವಿಚಾರ, ಗ್ರಾಹಕರ ವಿಚಾರ ಮಾತನಾಡುವಾಗ, ಸಮತೋಲನ ಇಟ್ಟುಕೊಂಡು

ಮಾತನಾಡಿದರೆ, ಆಗ ಆ ಮಾತಿಗೆ ತೂಕ ಬರುತ್ತದೆ. ಕೇಂದ್ರ ಸರ್ಕಾರಕ್ಕೆ ಸರಿಯಾದ ಸಂದೇಶ ಕೂಡ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಏನಾಗುತ್ತದೆ, ತಾವು ಗ್ರಾಹಕರ ವಿಚಾರದಲ್ಲಿ ಒಂದು ಲಾಬ್ ಕ್ರಿಯೇಟ್ ಮಾಡುತ್ತೀರಿ. ಗ್ರಾಹಕರ ವಿಚಾರದಲ್ಲಿ , Yes, lobby has to be created. Suppose, the Government is influenced with your plea. No, No, ಈ ಪ್ರೈಸ್ ಹೆಚ್ಚು ಮಾಡಿರುವುದು ತಪ್ಪಾಯಿತು ಎಂದು ಹೇಳಿದ ಮೇಲೆ, next year they may reconsider the issue.

ಬೆಲೆ ನಿಗದಿ ಮಾಡುವಾಗ, ಅವರು ಇಷ್ಟು ವೇಗದಲ್ಲಿ ಹೋಗುತ್ತಿದ್ದಾರೆ. ರೈತರಿಗೆ ಇಷ್ಟು ಪ್ರೊಕ್ಯೂರ್ ಮೆಂಟ್ ಪ್ರೈಸ್ ಜಾಸ್ತಿ ಸಿಗಬೇಕು, ಬೆಲೆ ಜಾಸ್ತಿ ಸಿಗಬೇಕೆಂದು, ಒಂದು ರೀತಿಯಲ್ಲಿ ಪ್ರಗತಿಪರ ರೈತರ ಪರವಾಗಿ ಧೋರಣೆಯನ್ನು , ಕೇಂದ್ರ ಸರ್ಕಾರ ಮಾಡತಕ್ಕ ದಾರಿಯಲ್ಲಿದೆ. ಸ್ವಲ್ಪ ಹಿಂದೆ ಮುಂದೆ ನೋಡುತ್ತಾರೆ. ಅದು ಆಗಬಾರದು. ಹಾಗೆ ಮಾಡಲು ಹೋಗಬೇಡಿ.

ಶ್ರೀ ಆರ್. ವಿ. ದೇಶಪಾಂಡೆ : ಮುಖ್ಯ ಮಂತ್ರಿಯವರು ರೈತರ ಪರವಾಗಿ ವಾದ ಮಾಡುತ್ತಿದ್ದಾರೆ. ಇದರಲ್ಲಿ ಯಾವುದೇ ವಾದ ಇಲ್ಲ. ರೈತರ ವಿಚಾರದಲ್ಲಿ ಯಾವ ವಾದವೂ ಇಲ್ಲ. ನೀವು ರೈತರಿಗೆ ಎಷ್ಟು ಸಹಾಯ ಮಾಡುವುದಕ್ಕೆ ಸಾಧ್ಯ, ಅದನ್ನು ಕೊಡಿ, ನಾವು ಬೆಂಬಲ ಕೊಡುತ್ತೇವೆ. ನಾನು ಅಂಕಿ ಅಂಶ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ರೈತನಿಗೆ ಕೊಡಬೇಕಾದರೆ ಎಲ್ಲಿಂದ ಬರಬೇಕು. ಮಾರ್ಕೆಟ್‌ನಿಂದ ಬರಬೇಕು. ಆ ಹಣ, ಆ ಬೆಲೆ ಮಾರ್ಕೆಟ್ ನಿಂದ ಬರಬೇಕು. ಮಾರ್ಕೆಟ್ ವ್ಯವಹಾರವನ್ನೇ ಸಿಂಕ್ ಮಾಡಿ, ಮಾರ್ಕೆಟ್ ವ್ಯವಹಾರದಲ್ಲಿ ಬೇಕಾದಂಥ ರೆಗ್ಯುಲೇಟ್ ಮಾಡಿ, ಬೆಲೆ ಕೊಡದಿದ್ದರೆ, ರೈತರಿಗೆ ಸಹಾಯ ಮಾಡುವುದಕ್ಕೆ ಹೇಗಾಗುತ್ತದೆ. ಅದಕ್ಕಾಗಿ, ಮುಖ್ಯವಾಗಿ ಕೇಂದ್ರ ಸರ್ಕಾರದ ಧೋರಣೆ ಏನೆಂದರೆ, ಇವತ್ತು ನಮ್ಮ ರಾಷ್ಟ್ರದ ರೈತ, ಬರೀ ಕರ್ನಾಟಕ ರೈತ ಅಥವಾ ಹೈದರಾಬಾದ್ ಕರ್ನಾಟಕ ರೈತ ಅಥವಾ ಕಾರವಾರದ ರೈತ ಆಗಬಾರದು. ಇಡೀ ವಿಶ್ವದ ಮಾರುಕಟ್ಟೆಯಲ್ಲಿ ಆತ ಪೈಪೋಟಿಯಿಂದ ಮಾರುಕಟ್ಟೆಗೆ ಪ್ರವೇಶ ಮಾಡುವ ಶಕ್ತಿ ಕೊಡುವುದಕ್ಕೆ ಕೇಂದ್ರ ಸರ್ಕಾರ ಕೆಲಸ ಮಾಡುತ್ತಾ ಇರುವಾಗ, ಇದನ್ನು ತಾವು ವಿಚಾರ ಮಾಡದೇ ಟೀಕೆ ಮಾಡಿದ್ದಕ್ಕೆ ನಾನು ಇದನ್ನು ಹೇಳಬೇಕಾಯಿತು.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರು ಹೇಳಿದರು. ವಿರೋಧ ಪಕ್ಷದಲ್ಲಿ ಕುಳಿತು ಗ್ರಾಹಕರ ಬಗ್ಗೆ ಎಷ್ಟು ಚಿಂತನೆ ಮಾಡುತ್ತಿದ್ದೇವೆ. ರೈತರ ಬಗ್ಗೆ ಎಷ್ಟು ಚಿಂತನೆ ಮಾಡುತ್ತಿದ್ದೇವೆ ಎಂಬ ಬಗ್ಗೆ ಹೇಳಿದರು. ನಾವು ಗ್ರಾಹಕರ ಬಗ್ಗೆ, ರೈತರ ಬಗ್ಗೆ ಚಿಂತನೆ ಮಾಡಿದ್ದೇವೆ. ಮತ್ತು ರೈತರ ಬಗ್ಗೆ ಚಿಂತನೆ ಮಾಡಿ, ಕೆಲವೊಂದು ಬೆಳಕು ಚೆಲ್ಲುವುದಕ್ಕೆ ಪ್ರಯತ್ನ ಮಾಡಿದ್ದೇವೆ. ನಾವೇನು ಹೇಳಿದ್ದೇವೆಂದರೆ, ಇವತ್ತು ರೈತರಿಗೆ ಹೆಚ್ಚಿನ ಬೆಂಬಲ ಬೆಲೆ ಕೊಡುವುದಕ್ಕೆ ಅಥವಾ ಬೆಲೆ ಕೊಡುವುದಕ್ಕೆ ಅಥವಾ ಮಾರುಕಟ್ಟೆ ಮಾಡಿಕೊಡುವುದಕ್ಕೆ ಕೇಂದ್ರ ಸರ್ಕಾರ ವಿಫಲವಾಗಿದೆ, ಇದರ ಬಗ್ಗೆ ಪ್ರಶ್ನೆ ಇಲ್ಲ. ಪ್ರಶ್ನೆ ಏನಿದೆ ಎಂದರೆ, ತಮಗೆ ಉದಾಹರಣೆ ಕೊಡುತ್ತೇನೆ. ಪ್ರೊಕ್ಯೂರ್‌ಮೆಂಟ್ ಪ್ರೈಸ್ 1994-95ನೇ ಇಸವಿಯಲ್ಲಿ ಒಂದು ಕ್ವಿಂಟಾಲ್ ಗೋಧಿಗೆ 350 ರೂ. ಇದೆ, ನೀವು ಮಾರಾಟ ಮಾಡತಕ್ಕ ಪ್ರೈಸ್ through Rationing Shops, Government of India Order ಇದರ ಮೇಲೆ ಹೆಚ್ಚಿನ ಟ್ರಾನ್ಸ್‌ಪೋರ್ಟ್ ಎಲ್ಲಾ ಬರುತ್ತದೆ. ಹೀಗಾಗಿ ಒಟ್ಟು 402 ರೂ. ಆಗುತ್ತದೆ. ನೀವು, ಅಕ್ಕಿಗೆ, ಒಂದು ಕ್ವಿಂಟಾಲ್‌ಗೆ 40 ರೂಪಾಯಿಯಂತೆ ರೈತರಿಗೆ ಬೆಂಬಲ ಕೊಟ್ಟಿರಿ. ಆದರೆ,ಇವತ್ತು ರೈಸ್ ಮಾಡಿರುವುದು, through Rationing Shops Rs. 100/- per quintal

ರೈತರಿಗೆ ನಿಮ್ಮ ಪ್ರೊಕ್ಯೂರ್ ಮೆಂಟ್ ಪ್ರೈಸ್ ಕೊಡುತ್ತೇವೆಂದು ಹೇಳಿದರೆ, ನಿಮ್ಮ inefficient Food Corporation of India, lethargic corruption ನಿಂದು ಪ್ರತಿಯೊಂದು ಕ್ವಿಂಟಾಲ್ ರೈಸ್‌ಗೆ 100 ರೂಪಾಯಿ ಲಾಭ ಮಾಡುತ್ತಿದ್ದಾರೆ. ವೀಟ್ ಪ್ರೈಸ್ ಮೇಲೆ 70-80 ರೂಪಾಯಿ ಲಾಭ ಮಾಡುತ್ತಿದೆ. ಅದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ರೈತರಿಗೆ ಕೊಡುವ ವಿಚಾರ ಅಲ್ಲ ಪ್ರೊಕ್ಯೂರ್‌ಮೆಂಟ್ ಮತ್ತು ರೇಷನ್ ಅಂಗಡಿಯಿಂದ ಏನು ಮಾರಾಟ ಆಗುತ್ತಿದೆ ಅದರಲ್ಲಿ ಟೋಟಲಿ ಅಂತರ ಇದೆ. ಇಷ್ಟೊಂದು ಅಂತರ ಇದ್ದರೆ ರೈತರಿಗೂ ಲಾಭಇಲ್ಲ. ಗ್ರಾಹಕರಿಗೂ ಲಾಭ ಇಲ್ಲ. ಕೇವಲ ಮಧ್ಯಮವರ್ತಿಗಳು ಲೂಟಿ ಮಾಡುತ್ತಿದ್ದಾರೆ ಈ ಕೇಂದ್ರ ಸರ್ಕಾರದ ನೀತಿಯಿಂದ ಇಷ್ಟೇ ನಾನು ನಿಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ : ಈಗ ನಾನು ಹೇಳುತ್ತೇನೆ ಲೆವಿ ಶುಗರ್ ಪ್ರೈಸ್ 75 ರೂಪಾಯಿ ಕ್ವಿಂಟಾಲ್‌ಗೆ ಜಾಸ್ತಿ ಮಾಡಿದರು. ಆ ಹಣ ಎಲ್ಲಿಂದ ಬರಬೇಕು ಯಡಿಯೂರಪ್ಪನವರೇ? ಇವತ್ತು ಈ ಪ್ರೈಸ್ ಇದು ಸ್ವಲ್ಪ ತಾಳ ಮೇಳ ಇದೆ. ಎರಡೂ ತಾಳ ಮೇಳ ಇಲ್ಲ ಎಂದು ಹೇಳಿ ನಾವು ಇವತ್ತು ಇಲ್ಲಿ ವಾದ ಮಾಡಲಿಕ್ಕೆ ಹೊರಟರೆ ಈ ಪರಿಸ್ಥಿತಿ ಇವತ್ತು ಡಿಸ್ಟಾರ್ಷನ್ ಉದ್ಭವವಾಗುತ್ತದೆ. ಈಗ ಕೆರೋಸಿನ್‌ನಲ್ಲಿ ಜಾಸ್ತಿಮಾಡಲಿಲ್ಲ. ಈಗ ತಮಗೆ ಗೊತ್ತಿದ್ದ ಪ್ರಕಾರ ನಾವು ಪ್ರೊಕ್ಯೂರ್ ಮೆಂಟ್ ಸಂಪೋರ್ಟ್‌ಪ್ರೈಸ್‌ಗೆ 80 ರೂಪಾಯಿ ಜಾಸ್ತಿಮಾಡಿದ್ದೇವೆ. We are prepared to procure ಕರ್ನಾಟಕ ರಾಜ್ಯದಲ್ಲೇ ನಾವು ಮಾಡಿದ್ದೇವೆ ಸಪೋರ್ಟ್ ಪ್ರೈಸ್ ಪ್ರಕಾರ ನಾವು ಸಪೋಟ್‌ಪ್ರೈಸ್ ಆಪರೇಷನ್‌ಗೆ ನಾವು ಹೋಗತಕ್ಕಂಥ, ಪರಿಸ್ಥಿತಿಯಲ್ಲಿ ನಾವು ಈಗ ಇದ್ದೇವೆ. ಆಮೇಲೆ ತಮಗೆ ಗೊತ್ತಿದ್ದ ಪ್ರಕಾರ ಆರ್ಥಿಕ ನೀತಿಯ ಬಗ್ಗೆ ಸ್ವಲ್ಪ ತೀವ್ರವಾದಂತಹ ಟೀಕೆಯನ್ನು ತಾವು ಮಾಡಿದ್ದೀರಿ. ಕೇಂದ್ರ ಸರ್ಕಾರದ್ದು ಈಗ ಅದರ ಬಗ್ಗೆ ಟೀಕೆ ಮಾಡಿದ್ದೀರಿ. ಹೆಚ್ಚು ಅದರ ಬಗ್ಗೆ ನಾನು ಉತ್ತರ ಕೊಡಲಿಕ್ಕೆ ಹೋಗುವುದಿಲ್ಲ. ಅದರೆ ತಾವು ಒಂದು ಮರೆಯಬಾರದು, ಆರ್ಥಿಕ ಪರಿಸ್ಥಿತಿಯಿಂದ ಒಟ್ಟು ಫಲಿತಾಂಶ ಏನಾಗಿದೆ ಇವತ್ತು 17.6 ಪರ್ಸೆಂಟ್ ಇನ್ಫ್ಲೇಷನ್ ರೇಟ್ ಇದ್ದದ್ದು ಒಮ್ಮೆಲೆ 5.6 ಪರ್ಸೆಂಟ್‌ಗೆ ಇಳಿಯಿತು. ಈಗ 7.5 ಪರ್ಸೆಂಟ್ನಿಂದ 7.6 ಇಳಿದಿದೆ. It is still in a single digit.

Sri R.V. DESHAPANDE : It will reach double digit now.

Sri M. Veerappa Moily : Now we are in the single digit. It was increased to 24% under your Janatha Dal regime. ದಯಮಾಡಿ ಮರೆಯಬೇಡಿ. Don't forget the history.

ಇವತ್ತು ನಾವು ಅಧಿಕಾರಕ್ಕೆ ಬಂದ ಮೇಲೆ ಒಂದು ಸರಿಯಾದಂತಹ ಆರ್ಥಿಕ ನೀತಿಯ ದಿಸೆಯಿಂದ 17.6 ಪರ್ಸೆಂಟ್ ಇದ್ದದ್ದು we could reduce to 5.6 percent. Yes it has increased, because we have increased the procurement price, and support price.

ರೈತನಿಗೆ ಬೆಲೆ ಜಾಸ್ತಿಯಾದಾಗ inflation must have raised to that extent.

ಶ್ರೀ ಬಿ.ಎಚ್. ಬನ್ನಿಕೋಡ್ : ರೈತನಿಗೆ ಕೊಡಬೇಕಾದ ರಸಗೊಬ್ಬರದ ಬೆಲೆ ಜಾಸ್ತಿ ಮಾಡಿದಿರಿ. ತಾವು ಇದನ್ನೆಲ್ಲಾ ಮಾಡಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ : ಆ ರೀತಿ ಅಲ್ಲ, ಅದ್ದರಿಂದ ಇವತ್ತು ಆರ್ಥಿಕ ನೀತಿಯ ಬಗ್ಗೆ ಬಹುಶಃ ಇಡೀ ವಿಶ್ವದಲ್ಲೇ ಇಲ್ಲಿ ನಮ್ಮ ಆರ್ಥಿಕ ಉದಾರ ನೀತಿಯಿಂದ ಕೈಗಾರಿಕೆಗಳು ಬರುತ್ತಿವೆ. ಅಗ್ರಿಕಲ್‌ಚರ್‌ಸೆಕ್ಟಾರ್‌ನಲ್ಲಿ ವಿಸ್ತಾರವಾದಂತಹ

ಹೊಸ ಉದ್ಯೋಗಗಳು ಬರುತ್ತಿವೆ. ನೀವು ಹೇಳಿದಂತಹ ಸಾಂಪ್ರದಾಯಿಕ ಉದ್ಯೋಗಗಳು ಹಿಂದೆ ಒಂದು ಕಾಲದಲ್ಲಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಪ್ರಜಾವಾಣಿಯಲ್ಲಿ ಬಂದಿರುವ ಆರ್ಟಿಕಲ್ ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ. ನಮ್ಮ ದೇಶವನ್ನು ಪ್ರಧಾನಿಗಳು ಹೊರದೇಶಕ್ಕೆ ಮಾರಾಟ ಮಾಡುತ್ತಿದ್ದಾರೆಂದು ಬಂದಿದೆ. ಅದನ್ನು ತಾವು ಓದಿದ್ದೀರಾ? You have invited Multi National Companies.

Sri M. Veerappa Moily : I am very sorry.

ಮಾನ್ಯ ಯಡಿಯೂರಪ್ಪನವರ ಎಲಿಮೆಂಟರಿ ನಾಲೇಜ್ಡ್ of the language, I am very sorry. ಮಾರುವುದು ಅಂದರೆ ಏನು? We are selling Karnataka in tourism ಅಂದರೆ ಏನು ಅರ್ಥ? ಟೂರೀಸಂ ಮಾರುಕಟ್ಟೆಯಲ್ಲಿ ನಾವು ಸಂವೃದ್ಧಿಯನ್ನು ಸಂಪಾದನೆ ಮಾಡುತ್ತೇವೆಂದು ಅರ್ಥ. That means we are selling the products of Karnataka.

ದಯಮಾಡಿ ಇಷ್ಟು ಈ ಮಿನಿಮಮ್ ಬೇಸಿಕ್ ಲೆಸೆನ್ ಕೂಡ ನಮ್ಮ ಬಿ.ಜೆ.ಪಿ ನಾಯಕರಾದಂಥ ಯಡಿಯೂರಪ್ಪನವರಿಗೆ ಹೇಳಿಕೊಡಬೇಕಾದಂಥ ದುರವಸ್ಥೆ ನನ್ನ ಪಾಲಿಕೆ ಬಂತಲ್ಲಾ ಎಂದು ನನಗೆ ವ್ಯಥೆ ಆಗುತ್ತಿದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ತಮಗೆ ಹೇಳುವುದಿದ್ದರೆ ನಾವು ಒಂದು ಕಡೆ ಒಂದು ಸುದ್ದಿ ಇತ್ತು ಒಂದು ಕಂಪ್ಯುಟರೈಸೈಶನ್ ಆಗಬಾರದು ಮತ್ತೆ ಬೇರೆ ಬೇರೆ ಆಧುನೀಕರಣ ಆಗಬಾರದು ಎಂದು. ಇದು ಒಂದು ಕಾಲದಲ್ಲಿ ಇತ್ತು. ಆಧುನೀಕರಣ ಅದರೆ ಕೆಲಸ ಕಡಿಮೆ ಆಗುತ್ತದೆ. ಕಂಪ್ಯೂಟರಿಕರಣ ಆದರೆ ಕೆಲಸ ಕಡಿಮೆ ಆಗುತ್ತದೆ. ತಂತ್ರಜ್ಞಾನ ಹೆಚ್ಚು ಬಂದರೆ ಕೆಲಸ ಕಡಿಮೆ ಆಗುತ್ತದೆ. ಇದು ಗೊಡ್ಡು ಸಂಪ್ರದಾಯದ ಮನೋಭಾವನೆ ನಮ್ಮ ದೇಶದಲ್ಲಿ ಇದ್ದು ನಮ್ಮ ದೇಶ ಈಗ 40 ವರ್ಷದಲ್ಲಿ ಹೆಚ್ಚು ಪ್ರಗತಿಗೆ ಬರಲಿಕ್ಕೆ ಆಗಲಿಲ್ಲ. ಇವತ್ತು ದಯಮಾಡಿ........

ಶ್ರೀ ಬಿ.ಎಸ್. ಯಡಿಯೂರಪ್ಪ : ಅದೇ ಗೊಡ್ಡು ಸಂಪ್ರದಾಯಕ್ಕೆ ವಾಪಸ್ ಹೋಗಬೇಕಾಗುತ್ತದೆ.

ಕಂಪ್ಯೂಟರೀಕರಣದಿಂದ ಜನರಿಗೆ ಕೆಲಸ ಇಲ್ಲದೆ ಭೀಕ್ಷೆ ಬೇಡುವಂತಹ ಸ್ಥಿತಿಗೆ ನೀವು ತರುತ್ತಿದ್ದೀರಿ. Dont forget that.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ದೇಶವನ್ನು ಕೆಲವು ಸಂಪ್ರದಾಯಶಕ್ತಿಗಳು 21ನೇ ಶತಮಾನದಿಂದ 17ನೇ ಶತಮಾನಕ್ಕೆ ದಬ್ಬತಕ್ಕಂಥ ಒಂದು ಕುತಂತ್ರ ಇವತ್ತು ನಿಮ್ಮದು ಆಗುತ್ತಿದೆ. ಅದಕ್ಕಾಗಿಯೇ ನೀವು ರಾಮನ ಮಂತ್ರ ಮತ್ತೊಂದು ಮಂತ್ರ ಎಲ್ಲಾ ತೋರಿಸುತ್ತಿದ್ದೀರಿ. ನಮಗೆ ಗೊತ್ತಿದೆ. ಈ ಗೊಡ್ಡು ಸಂಪ್ರಾಯವನ್ನು ನೆಲ ಸಮ ಮಾಡಿಕೊಂಡು ಈ ರಾಷ್ಟ್ರದ ನಿರ್ಮಾಣಕ್ಕೆ ನಾವು ನಮ್ಮ ಆರ್ಥಿಕ ನೀತಿ ಹೊರಟಿದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಆದ್ದರಿಂದ ನಾನು ಇನ್ನು ಹೆಚ್ಚು ಮಾತುಗಳನ್ನು ಬೆಳಸಲಿಕ್ಕೆ ಹೋಗುವುದಿಲ್ಲ. ಇದು ನಮಗೆ ಸಂಬಂಧಪಟ್ಟ ವಿಚಾರ ಅಲ್ಲ, ಮತ್ತೆ ಯಾವುದೇ ರೀತಿಯಲ್ಲಿ ನಮ್ಮ ಗ್ರಾಹಕರಿಗೆ ನಮ್ಮ ರಾಜ್ಯದ ಗ್ರಾಹಕರ ಬೆಲೆ ಏರಿಕೆಯನ್ನು ತಡೆಯಲಿಕ್ಕೆ ಮತ್ತು ನಮ್ಮ ಲೋಯರ್ ಬ್ರಾಕೆಟ್ ಇನ್ಕಂ ಇರತಕ್ಕಂಥ ದುರ್ಬಲವರ್ಗದವರಿಗೆ ಅಥವಾ ಗ್ರೀನ್ ಕಾರ್ಡ್ ಹೋಲ್ಡರ್ಸ್‌ಳಿಗೆ ಈ ಬೆಲೆ ಏರಿಕೆಯಿಂದ ಹೆಚ್ಚು ಬಾಧೆ ಬಾರದೆ ಹಾಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. To that extent, we will take action.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಮಾತನಾಡಿದ್ದಿಕ್ಕೆ ಒಂದಕ್ಕೂ ಉತ್ತರ ಕೊಡುವುದಿಲ್ಲವೇ ಸ್ವಾಮಿ. 22 ಪರ್ಸೆಂಟ್ ತೆರಿಗೆ ಆಗುತ್ತದೆ ಸ್ವಾಮಿ. ಆ ತೆರಿಗೆ ಕಡಿಮೆ ಮಾಡುತ್ತೀರಾ? ಇವತ್ತು ನೀವು ಈ ಬೆಲೆಗಳನ್ನು ಇಳಿಸುವುದಕ್ಕೆ ಬೆಂಬಲ ಕೊಡುವುದಿಲ್ಲ. ಅದಕ್ಕೆ ನಾವು ಇದನ್ನು ಪ್ರತಿಭಟನೆ ಮಾಡಿ ವಾಕ್ ಔಟ್ ಮಾಡುತ್ತಿದ್ದೇವೆ.

(ಬಿ.ಜೆ.ಪಿ. ಸದಸ್ಯರು ವಾಕ್ ಔಟ್ ಮಾಡಿದರು)

ಶ್ರೀ ಆರ್.ವಿ. ದೇಶಪಾಂಡೆ : ತಾವು ತೆರಿಗೆ ಇಳಿಸಲು ಬೆಂಬಲ ಕೊಡದೇ ಇರುವುದನ್ನು ವಿರೋಧಿಸಿ ವಾಕ್ ಔಟ್ ಮಾಡುತ್ತೇವೆ.

(ಈ ಹಂತದಲ್ಲಿ ಜನತಾ ದಳದ ಸದಸ್ಯರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಸಮರ್ಥವಾಗಿ ಉತ್ತರ ಕೊಟ್ಟಿರುವುದರಿಂದ ಇಲ್ಲಿಗೆ ಈ ವಿಷಯ ಮುಕ್ತಾಯವಾಯಿತು. ಈಗ ಸದನವನ್ನು 3-00 ಗಂಟೆಯವರೆಗೆ ಮುಂದೂಡುತ್ತೇನೆ.

(ಸದನವು 2-08 ನಿಮಿಷಕ್ಕೆ ಮುಂದೂಡಿ ಮತ್ತೆ 3 ಘಂಟೆಗೆ ಸೇರಲು ತೀರ್ಮಾನಿಸಿತು)

(ಸದನವು ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಪುನರಾರಂಭಗೊಂಡಿತು)

(ಉಪಾಧ್ಯಕ್ಷರು ಶ್ರೀ ಅಂಜನಾಮೂರ್ತಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

ಕೋಲಾರ ತಾಲ್ಲೂಕಿನ ಹರಟಿ ಗ್ರಾಮದಲ್ಲಿ ದಲಿತನ ಮೇಲೆ ನಡೆದಿರುವ ಹಲ್ಲೆ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೇ, ಈ ಶೂನ್ಯ ವೇಳೆಯಲ್ಲಿ ಮಹತ್ತರವಾದ ಒಂದು ವಿಷಯವನ್ನು ಪ್ರಸ್ತಾಪಮಾಡಬೇಕೆಂದು ನಾನು, ಮಾನ್ಯ ಭೈರೇಗೌಡರು, ನಾರಾಯಣಸ್ವಾಮಿಯವರು ಅಧ್ಯಕ್ಷರಿಗೆ ಪತ್ರ ಬರೆದಿದ್ದೇವೆ. ಇದೇ ಫೆಬ್ರವರಿ 27ನೇ ತಾರೀಖು ಕೋಲಾರ ತಾಲ್ಲೂಕಿನಲ್ಲಿ ಒಬ್ಬ ದಲಿತ ಕನ್ನಪ್ಪ ಎನ್ನುವವನ ಮೇಲೆ ಅಮಾನುಷ ಬರ್ಬರ ಹೇಯವಾದ ಕೃತ್ಯ ನಡೆದಿದೆ ಅಧ್ಯಕ್ಷರೇ, ನಮ್ಮ ಸಮಾಜದಲ್ಲಿ ಈ ಕೃತ್ಯಗಳು ಬಹಳ ಹೇಯವಾಗಿರುವಂಥವು. ನಾವೆಲ್ಲರೂ ತಲೆತಗ್ಗಿಸತಕ್ಕಂಥದ್ದು, ಪ್ರಜಾತಂತ್ರದ ಪದ್ಧತಿಗೇ ಒಂದು ಹಾಳುಮಾಡುವಂಥದು. ನಮ್ಮ ಕಾಂಗ್ರೆಸ್ ನಾಯಕರುಗಳು ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ನಮ್ಮ ಮಂತ್ರಿಗಳು ನನಗನ್ನಿಸುತ್ತದೆ ಒಂದು ರೀತಿಯಲ್ಲಿ ಬಹಳ ಅಸಡ್ಡೆಯಿಂದ ನೋಡುತ್ತಿದ್ದಾರೆ. ಮತ್ತು ಈ ಪ್ರಕರಣವನ್ನು ಮುಚ್ಚಿ ಹಾಕಲಿಕ್ಕೂ ಸಹಿತ ಪ್ರಯತ್ನ ಮಾಡುತ್ತಿದ್ದಾರೆ. ನಿಮ್ಮ ಬ್ಲಾಕ್ ಕಾಂಗ್ರೆಸಿನ ಅಧ್ಯಕ್ಷರು ಇದರಲ್ಲಿ ಇನ್ವಾಲ್ವ್ ಆಗಿದ್ದಾರೆ ಎಂದು ನೀವೇನಾದರೂ ಇದನ್ನು ಮಾಡ್ತೀರ ಅನ್ನುವುದಾದಲ್ಲಿ ನಿಜವಾಗೂ ಇದು ನಿಮಗೆ ನಿಮ್ಮ ಪಕ್ಷಕ್ಕೆ ಗೌರವವನ್ನು ತರತಕ್ಕಂಥದಲ್ಲ. ಅಧ್ಯಕ್ಷರೇ, ನಿಮಗೆ ಗೊತ್ತಿರುವ ಹಾಗೆ ಕಾಂಗ್ರೆಸ್ ಪಕ್ಷದ ಇತಿಹಾಸ ಕರ್ನಾಟಕದಲ್ಲಿ 1969ರ ನಂತರ ಈ ವರ್ಗದ ಜನಗಳಿಂದ ಬಂದಿರತಕ್ಕಂಥದ್ದು. ದಲಿತರಿಂದ ಹಿಂದುಳಿದ ವರ್ಗದಿಂದ ಹರಿಜನ ಗಿರಿಜನರ ಆಧಾರದ ಮೇಲೆ ಕರ್ನಾಟಕದಲ್ಲಿ ನೀವು ಸರ್ಕಾರ ನಡೆಸಿರುವಂಥದು. ಅವತ್ತೇನು ಕನ್ನಪ್ಪನ ಮೇಲೆ ನಡೆದಿದೆ ಕೃತ್ಯ ಇದರ ಬಗ್ಗೆ ಕೊನೇಪಕ್ಷ ಒಬ್ಬ ಮಂತ್ರಿಗಳು ಆ ಸ್ಥಳಕ್ಕೆ ಹೋಗಿ ಆ ಮುಖಂಡನನ್ನು ನೋಡುವಂತಹ ಸೌಜನ್ಯವನನ್ನೂ ನಿಮ್ಮ ಸರ್ಕಾರದವರು ತೋರಿಸಲಿಲ್ಲ ಎಂದರೆ ಇದರ ಬಗ್ಗೆ ನಾವೇನು ಹೇಳುವುದು, ದಯವಿಟ್ಟು ಹೇಳಿ. ವಿಧಾನಪರಿಷತ್ತಿನಲ್ಲಿ ಮಾನ್ಯ ನಾಗೇಗೌಡರೇ ಎಷ್ಟೊಂದು ದೊಡ್ಡ ಭಾಷಣ ಮಾಡಿದ್ದೀರಿ, ಶಿವಮೊಗ್ಗದಲ್ಲಿ ಒಂದು ಘಟನೆ ಇದೇ ತರಹ ನಡೆಯಿತು ಎಂದು ಹೇಳಿಬಿಟ್ಟು ನಾವು ಅಧಿಕಾರದಲ್ಲಿದ್ದಾಗ ನಾವೆಲ್ಲಾ ದಲಿತರ ವಿರೋಧಿಗಳು, ಹರಿಜನ ಗಿರಿಜನರನ್ನು ನೀವು ಹಾಳುಮಾಡಿದ್ದೀರಿ ಎಂದು ಹೇಳಿ ಸುಟ್ಟು ಹಾಕಿದ್ದೀರಿ ಎಂದು ಹೇಳಿ